5) ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾನಿರ್ಣಯದ ಮೇಲಿನ ಮುಂದುವರಿದ ಚರ್ಚೆ

+ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಸನ್ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ಅನೇಕ ವಿಚಾರಗಳನ್ನು ನಮ್ಮ ಸಹಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ನಾನಾದರೂ ಕೂಡ ಅಂದುಕೊಂಡಿದ್ದೇನೆಂದರೆ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವ ನಿರ್ಣಯದ ಪ್ರಸ್ತಾಪವನ್ನು ಮಂಡಿಸಿ ಮತ್ತು ಅನುಮೋದಿಸಿ ಪ್ರಾರಂಭದಲ್ಲಿ ಮಾತನಾಡಿದ ಶಾಸಕರುಗಳಾದ ಶ್ರೀಯುತ ಶರಣಪ್ಪನವರಾಗಲೀ, ಶ್ರೀಯುತ ಕೃಷ್ಣಪ್ಪನವರಾಗಲೀ ಸರ್ಕಾರವನ್ನು ಪುಷ್ಟೀಕರಿಸಿ ಮಾತನಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಅವರು ಬಹುಶಃ ಮಾತನಾಡುವುದಕ್ಕೆ ಸರ್ಕಾರದಲ್ಲಿನ ಸಾಧನೆಯ ಕೊರತೆಯ ಕಾರಣ ಇರಬಹುದು. ಅಥವಾ ಯಾವುದೇ ರೀತಿಯ ಸಾಧನೆಗಳನ್ನು ಮಾಡುವುದಕ್ಕೆ ಆಗದೇ ಇರುವುದರಿಂದ

ಶ್ರೀ ಯು.ಆರ್. ಸಭಾಪತಿ : ಅಧ್ಯಕ್ಷರೆ, ಆಡಳಿತ ಪಕ್ಷದವರಿಗೆ ತಾವು ಊಟಕ್ಕೆ ಬಿಟ್ಟಿದ್ದೀರೋ?

ಉಪಾಧ್ಯಕ್ಷರು : ಇಲ್ಲ, ಇಲ್ಲ, ಬರುತ್ತಾರೆ ಕುಳಿತುಕೊಳ್ಳಿ, ಊಟ ಮಾಡಿ ವಾಪಸ್ ಬರುತ್ತಾರೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಅಧ್ಯಕ್ಷರೆ, ನಾವು ಬರೆದುಕೊಳ್ಳುತ್ತೇವೆ, ನಾಯಕರು ಉತ್ತರ ಹೇಳುತ್ತಾರೆ, ಯಾರೂ ಇಲ್ಲ ಎಂದರೆ ಇಲ್ಲಿ ನಾವು ಇಲ್ಲವೇ?

ಉಪಾಧ್ಯಕ್ಷರು : ತಾವು ಮಾತನಾಡಿರಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಯಾರಿಗೆ ಮಾತನಾಡುತ್ತೀರಿ? ಗೋಡೆಗೆ ಮಾತನಾಡಬೇಕೇ?

ಶ್ರೀ ಚಂದ್ರಕಾಂತ ಸಿ. ಬೆಲ್ಲದ್ : ಊಟಕ್ಕೆ ಬಿಡಿ.

ಉಪಾಧ್ಯಕ್ಷರು : ಮುಗಿಸಲಿ ಬಿಡಿ. ಎಲ್ಲರಿಗೂ ಅವಕಾಶ ಕೊಡಿ ಎಂದು ಹೇಳುತ್ತೀರಿ. ಊಟಕ್ಕೂ ಅವಕಾಶ ಕೊಡಿ ಎಂದು ಹೇಳುತ್ತೀರಿ. ತಾವು ಮಾತನಾಡಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಆ ದೃಷ್ಟಿಯಿಂದ ಇನಿಷಿಯೇಟ್ ಮಾಡಿರತಕ್ಕವರು ಅದರಲ್ಲಿ ವಿಫಲರಾಗಿದ್ದಾರೆ. ನನಗಾದರೂ ಇದರಲ್ಲಿ ಒಂದು ಲೋಪ ಕಾಣತಕ್ಕದ್ದು ಏನೆಂದರೆ ರಾಜ್ಯಪಾಲರು ಭಾಷಣ ಮಾಡುವಂಥ ಸಂದರ್ಭದಲ್ಲಿ ಬಹುಶಃ ರಾಜ್ಯಪಾಲರು ಸರ್ಕಾರದ ಮೇಲೆ ಏನು ಸಂಶಯ ತಾಳಿದ್ದಾರೋ ಏನೋ ಗೊತ್ತಿಲ್ಲ ಸುಮಾರು 23 ಪುಟಗಳ ಈ ರಾಜ್ಯಪಾಲರ ಭಾಷಣದಲ್ಲಿ

ಶ್ರೀ ಬಸವರಾಜ್ ಟಿ.ಹೆಚ್. : ಅಧ್ಯಕ್ಷರೇ...

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ.

ಶ್ರೀ ಬಸವರಾಜ್ ಟಿ.ಹೆಚ್. : ಕೋರಂ ಕೂಡ ಇಲ್ಲ. ನಾವು ಕುಳಿತುಕೊಳ್ಳುತ್ತೇವೆ. ಆದರೆ ಕೋರಂ ಬೇಡವೆ?

ಶ್ರೀ ವಾಟಾಳ್ ನಾಗರಾಜ್ : ಈಗ ಆಡಳಿತ ಪಕ್ಷದ ಕಡೆ 4 ಜನ ಇದ್ದಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ : ನಾನೊಬ್ಬ ಇದ್ದೇನೆ.

ಶ್ರೀ ವಾಟಾಳ್ ನಾಗರಾಜ: ಅರ್ಧಂಬರ್ಧ ಇವರು. ಇವರು ಅರ್ಧ. ಒಂದು ಗಂಟೆ ಅಡ್ಜರ್ನ್ ಮಾಡಿ. ಮೂರೂಕಾಲಿಗೆ ಸೇರೋಣ.

ಉಪಾಧ್ಯಕ್ಷರು : ಈಗ ಸದನವನ್ನು ಮುಂದೂಡಿದಿದ್ದೇನೆ. ಪುನಃ 3 ಗಂಟೆಗೆ ಸದನ ಸೇರುತ್ತದೆ.

(ಸಭೆಯನ್ನು 2 ಗಂಟೆ 5 ನಿಮಿಷಕ್ಕೆ ಮುಂದೂಡಿ ಮತ್ತೆ 3-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಲಾಯಿತು).

(ಸಭೆಯು ಮತ್ತೆ 3-20ಕ್ಕೆ ಸಮಾವೇಶಗೊಂಡಿತು.)

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು.)

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ
(ಮುಂದುವರಿದ ಚರ್ಚೆ)

ಶ್ರೀ ಚಿಮ್ಮನಕಟ್ಟಿ ಬಿ.ಬಿ. (ಬಾದಾಮಿ) : ಮಾನ್ಯ ಉಪಾಧ್ಯಕ್ಷರೆ, ನಾನು ಮಾತನಾಡತಕ್ಕ ಸಂದರ್ಭದಲ್ಲಿ ರಾಜ್ಯಪಾಲರ ಭಾಷಣವನ್ನು ಓದಿದೆ. ಇಪ್ಪತ್ತಮೂರು ಪುಟಗಳಿರುವ ಆ ವರದಿಯಲ್ಲಿ ರಾಜ್ಯಪಾಲರು ಭಾಷಣದ ಉದ್ದಕ್ಕೂ ಸುಮಾರು ಇಪ್ಪತ್ತೇಳು ಸಲ ನನ್ನ ಸರ್ಕಾರವೆಂದು ಹೇಳಿದ್ದಾರೆ. ಏನಾದರೂ ಸಂಶಯವಿದೆಯೇ ಎಂದು ನನಗನ್ನಿಸುತ್ತಿದೆ. ಇಷ್ಟು ಸಲ ನನ್ನ ಸರ್ಕಾರವೆಂದು ಹೇಳ ಬೇಕಾದ ಹೇಳಿಕೊಂಡಿದ್ದರೆ ತೊಂದರೆಯಿರಲಿಲ್ಲ. ಅಷ್ಟೊಂದು ಸಲ ನನ್ನ ಸರ್ಕಾರ ಎಂದು ಹೇಳುವುದು ಅಷ್ಟೊಂದು ಸಮಂಜಸವಲ್ಲವೆಂದು ನನ್ನ ಅಭಿಪ್ರಾಯ ರಾಜ್ಯಪಾಲರ ಭಾಷಣದ ಪರವಾಗಿ ಅನೇಕ ಜನರು ಮತ್ತು ವಿರೋಧವಾಗಿ ಅನೇಕ ಜನ ಸದಸ್ಯರುಗಳು ತಮ್ಮ ತಮ್ಮ ಅನಿಸಿಕೆಗಳನ್ನು ಹೇಳಿದ್ದಾರೆ. ಎಲ್ಲಾ ವಿಚಾರದ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ವೇಳೆಯ ಅಭಾವ ಮತ್ತು ಮಾತನಾಡಿರುವ ವಿಷಯದ ಬಗ್ಗೆಯೇ ಮತ್ತೆ ಮಾತನಾಡುವುದು ಸರಿಕಾಣುವುದಿಲ್ಲವೆಂದು ನಾನು ಅದರ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ವೇಳೆಯ ಅಭಾವ ಮತ್ತು ಮಾತನಾಡಿರುವ ವಿಷಯದ ಬಗ್ಗೆಯೇ ಮತ್ತೆ ಮಾತನಾಡುವುದು ಸರಿಕಾಣುವುದಿಲ್ಲವೆಂದು ನಾನು ಅದರ ಬಗ್ಗೆ ಪ್ರಸ್ತಾಪ ಮಾಡಲು ಹೋಗುವುದಿಲ್ಲ. ಯಾವ ಶಾಸಕರು ಯಾವ ವಿಚಾರದ ಬಗ್ಗೆ ಬೆಳಕನ್ನು ಚೆಲ್ಲಿಲ್ಲವೋ ಆ ವಿಚಾರದ ಬಗ್ಗೆ ಮಾತನಾಡಿದರೆ ಸೂಕ್ತವೆಂದು, ಮಾತನಾಡಲು ಪ್ರಯತ್ನ ಮಾಡುತ್ತಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ಹಿಂದುಳಿದವರ ಬಗ್ಗೆ ಏನಾದರೂ ಹೇಳಿದ್ದಾರೆಯೇ ಎಂದು ನಾನು ಬಹಳ ಕೂಲಂಕಷವಾಗಿ ಕೊಟ್ಟಿರುವಂತೆ, ರಾಜ್ಯದ 54 ಪರ್‌ಸೆಂಟ್ ಇರುವ ಹಿಂದುಳಿದ ಜನಾಂಗದವರ ಬಗ್ಗೆ ಸಮಾಜದವರ ಬಗ್ಗೆ ಸರ್ಕಾರದವರೇನಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೋ ಎಂಬ ಬಗ್ಗೆ ಬಹಳ ಕೂಲಂಕುಷವಾಗಿ ರಾಜ್ಯಪಾಲರ ಭಾಷಣವನ್ನು ನೋಡಿದೆ. ಕಾರ್ಯಕ್ರಮವಾಗಲಿ ಒಂದೂ ಸಹ ರಾಜ್ಯಪಾಲರ ಭಾಷಣದಲ್ಲಿ ಕಾಣಿಸಲಿಲ್ಲ. ಆದರೆ ಅವರು ಮಾಡಿರುವ ಸಾಧನೆಯೇನೆಂದರೆ,

ನಾವು ಹಿಂದೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೋ ಅದನ್ನು ಮುಂದುವರೆಸಿಕೊಂಡು ಹೋಗತಕ್ಕ ಕೆಲಸವನ್ನು ಮಾತ್ರ ಮಾಡಿದ್ದಾರೆ. ಅವರಲ್ಲಿ ಯಾವುದೇ ವಿಶೇಷವಾದ ಕಾರ್ಯಕ್ರಮ ಕಂಡು ಬರುತ್ತಿಲ್ಲ. ಈ ಜನಾಂಗದವರ ಏಳಿಗೆಗೆ ಒಳ್ಳೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆಂದು ನಾನು ಬಹಳವಾಗಿ ನಿರೀಕ್ಷೆ ಮಾಡಿದ್ದೆ ಬಹುಶಃ ಅದು ದುರಾದೃಷ್ಟವೆಂದು ನಾನು ಹೇಳಬೇಕಾಗುತ್ತದೆ. ನಮ್ಮ ದೇಶದಲ್ಲಿನ ಹಿಂದುಳಿದ ಸಮಾಜದ ಬಗ್ಗೆ ಚಿಂತನೆ ಮಾಡಿದಾಗ ಸ್ವಾತಂತ್ರ್ಯ ಸಿಗುವುದಕ್ಕಿಂತ ಮೊದಲು ಅದರ ಬಗ್ಗೆ ರಾಷ್ಟ್ರದಲ್ಲಿ ಚಿಂತನೆಗಳು ನಡೆದುಹೋದವು. ಅದರಲ್ಲೂ ಮೈಸೂರು ರಾಜ್ಯವಿದ್ದಾಗ ಶ್ರೀ ನಾಲ್ಮಡಿಕೃಷ್ಣರಾಜ್ ಒಡೆಯರ್‌ರವರು, ಬಹಳ ಧೀಮಂತ ವ್ಯಕ್ತಿತ್ವವನ್ನು ಪಡೆದಿರತಕ್ಕವರು ಬಹುಶಃ ಹಿಂದುಳಿದವರ ಸಮಾಜದ ಬಗ್ಗೆ ನ್ಯಾಯವನ್ನು ಕಲ್ಪಿಸಿ ಕೊಡಬೇಕೆಂದು ದೇಶದಲ್ಲಿ ಮೊಟ್ಟಮೊದಲನೆಯದಾಗಿ 1924ರಲ್ಲಿ ನ್ಯಾಯಮೂರ್ತಿ ಮಿಲ್ಲರ್ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ, ಆಗ ಹಿಂದುಳಿದ ಸಮಾಜದ ಜೊತೆ ಮಹಾರಾಜರೂ ಒಬ್ಬರು ಎಂಬುದನ್ನು ತೋರಿಸಿಕೊಟ್ಟರು. ಆಗಿನಿಂದ ಪ್ರಾರಂಭವಾಗಿ ತದನಂತರ ಬಂದಿರುವ ಮಹಾರಾಜರುಗಳಲ್ಲಿ ಕಂಠೀರವ ನರಸಿಂಹರಾಜ ಒಡೆಯರ್ ಎನ್ನುವವರು ಸಹ ದಲಿತ ವರ್ಗದವರ ಅಭಿವೃದ್ಧಿಗಾಗಿ ಪಂಚಮ ಹಾಸ್ಟೆಲ್‌ಗಳನ್ನು ಸ್ಥಾಪಿಸಿ, ತಮ್ಮದೇ ಹೆಸರನ್ನು ನಾಮಕರಣ ಮಾಡಿ ದಲಿತರೊಂದಿಗೆ ತಮ್ಮನ್ನು ಗುರುತಿಸಿಕೊಂಡಿರುವ ಮಹಾರಾಜರ ಚರಿತ್ರೆ ನಮ್ಮಲ್ಲಿದೆ. ಹಿಂದೆ ನಮ್ಮ ರಾಜ್ಯದಲ್ಲ ನಾಗನಗೌಡ ಎನ್ನುವವರು ಕೂಡ ಹಿಂದುಳಿದ ವರ್ಗಗಳನ್ನು ಮೇಲಕ್ಕೆತ್ತುವುದಕ್ಕಾಗಿ ಅವುಗಳನ್ನು ಗುರ್ತಿಸಿ ದಿಕ್ಸೂಚಿ ನೀಡುವ ಅನೇಕ ಕಾರ್ಯಕ್ರಮಗಳನ್ನು ನೀಡಿರುವುದನ್ನು ನೋಡುತ್ತೇವೆ. ತದನಂತರ ಬಂದ ಹಿಂದುಳಿದ ವರ್ಗಗಳ ನೇತರರಾದ ದಿವಂಗತ ದೇವರಾಜ ಅರಸರ ಬಗ್ಗೆ ಕರ್ನಾಟಕದ ಜನತೆ ಅವರ ಅವಿಸ್ಮರಣೀಯವಾದ ಸೇವೆಯನ್ನು ನೆನಪುಮಾಡಿಕೊಳ್ಳುತ್ತಾರೆ. ರಾಮಾಯಣವನ್ನು ಹಿಂದುಗಳ ಬೈಬಲ್ ಎಂದು ಕರೆಯುವ ರೀತಿ ದೇವರಾಜ ಅರಸರು ಕೊಡಿಸಿದ ಹಾವನೂರು ವರದಿಯನ್ನು ಹಿಂದುಳಿದ ವರ್ಗದ ಬೈಬಲ್ ಎಂದು ಕರೆದರೆ ತಪ್ಪಾಗುವುದಿಲ್ಲ. ಅವರು ಅನೇಕ ಕ್ರಾಂತಿಕಾರಿ ವಿಚಾರಗಳನ್ನು ನೀಡಿರುವ ವರದಿ ಇಡೀ ರಾಷ್ಟ್ರದಲ್ಲಿ ಅಪಾರ ಮೆಚ್ಚುಗೆ ಪಡೆಯಿತು. ಅದೇರೀತಿ ಅನೇಕ ಹಿಂದುಳಿದ ವರ್ಗಗಳ ವರದಿ ನಮ್ಮ ಮುಂದೆ ಇದ್ದಾಗ್ಯೂ ಕೂಡ ನಾವು ಇವತ್ತು ವಿಮರ್ಶೆ ಮಾಡಿಕೊಳ್ಳಬೇಕಾದ ಹಿಂದೇಟು ಹಾಕಲಿಲ್ಲ ಆದರೆ ದುರಾದೃಷ್ಟವಶಾತ್ ಜೆ.ಹೆಚ್. ಪಟೇಲರ ನೇತೃತ್ವದ ಸಿದ್ದರಾಮಯ್ಯ ಇರಬಹುದು ಸಿಂಧ್ಯಾ ಇರಬಹುದು ಹಿಂದುಳಿದ ವರ್ಗಗಳ ಸಚಿವರು ಇದ್ದರೂ, ಇದರ ಬಗ್ಗೆ ಕಿಂಚಿತ್ತೂ ವಿಚಾರ ಮಾಡಲಿಲ್ಲವೇನೋ ಎಂದು ನನಗೆ ಅನುಮಾನ ಬರುತ್ತದೆ. ನೀವುಗಳು ನಿಮ್ಮ ಇಲಾಖೆಗಳಿಗಷ್ಟೆ ಸೀಮಿತವಾಗಬಾರದು. ಈ ಜನಾಂಗಕ್ಕಾಗಿರುವ ಅನ್ಯಾಯವನ್ನು ಸರಿಪಡಿಸಲು ಒಳ್ಳೆಯ ಹುದ್ದೆಯಲ್ಲಿರುವ ನೀವುಗಳು ಮುತುವರ್ಜಿ ವಹಿಸಿ ಕೆಲಸ ಮಾಡುವ ಸಂದರ್ಭ ಬಂದಿದೆ. ಈ ದೃಷ್ಟಿಯಿಂದ ನೋಡಿದಾಗ, ಜೆ.ಎಚ್. ಪಟೇಲ್‌ರಾಗಲಿ ಸಿದ್ದರಾಮಯ್ಯನವರಾಗಲಿ ಗುತ್ತೇದಾರರಾಗಲಿ ಇವರುಗಳಿಗೆ ಹಿಂದುಳಿದ ಸಮಾಜದ ಬಗ್ಗೆ ಕಳಕಳಿ ಇಲ್ಲವೆಂಬ ಮಾತನ್ನು ನಿರ್ದಾಕ್ಷಿಣ್ಯವಾಗಿ ಹೇಳಲೇಬೇಕಾಗಿದೆ. ಸುಮಾರು ಎರಡು ವರ್ಷಗಳಿಂದ ಸಾಮಾಜಿಕವಾಗಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವ ವರ್ಗಗಳಿಗೆ ನ್ಯಾಯ ಒದಗಿಸುವದರಲ್ಲಿ ಮತ್ತು ಬಿಟ್ಟುಹೋಗಿರುವ ಸವಲತ್ತುಗಳನ್ನು ಯೋಜನೆಗಳನ್ನು ಸೇರಿಸುವುದಕ್ಕಾಗಲಿ ಒಂದು ಶಾಶ್ವತ ಹಿಂದುಳಿದ

ವರ್ಗಗಳ ಆಯೋಗ ಸಹಕಾರಿಯಾಗಿತ್ತು, ಈ ಸರ್ಕಾರ ಬಂದು ಎರಡು ವರ್ಷಗಳಾದರೂ ಇಲ್ಲಿಯವರೆಗೆ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ರಚಿಸುವುದಕ್ಕೆ ಆಗಲಿಲ್ಲ. ಕಾರಣವೇನಂದರೆ ಮೊನ್ನೆ ಕುಮಾರು ಬಂಗಾರಪ್ಪನವರು ಶಾಸಕರಾಗಿ ಪ್ರಶ್ನೆ ಕೇಳಿದಾಗ ಹೇಳಿದರು. ಕಳೆದ ಎರಡು ವರ್ಷಗಳಲ್ಲಿ ಆಯೋಗಕ್ಕೆ ಒಬ್ಬ ಅರ್ಹ ವ್ಯಕ್ತಿಯನ್ನು ಹುಡುಕುವುದಕ್ಕೆ ಸಾಧ್ಯವಾಗಲಿಲ್ಲ ಮತ್ತು ಸದಸ್ಯರನ್ನೂ ನೇಮಿಸುವುದಕ್ಕ ಆಗಲಿಲ್ಲ ಎಂದು ಒಪ್ಪಿಕೊಂಡರು. ನಾನಾದರೂ ತಮ್ಮ ಮೂಲಕ ಕೇಳುವುದು ಇಷ್ಟೆ: ಈ ಹಿಂದುಳಿದ ವರ್ಗಗಳ ಬಗ್ಗೆ ನಿಮಗೆ ಪರಿಕಲ್ಪನೆಯ ಅವರ ಬಗ್ಗೆ ನಿಮಗೆ ಒಳ್ಳೆಯ ಉದ್ದೇಶ ಇತ್ತೆಂದರೆ ಈ ಎರಡು ವರ್ಷಗಳಲ್ಲಿ ನೇಮಕ ಮಾಡಿ ಕೆಲಸಕಾರ್ಯಗಳನ್ನು ಹಮ್ಮಿಕೊಳ್ಳಬಹುದಾಗಿತ್ತು. ದುರಾದೃಷ್ಟದಿಂದ ಆ ಆಯೋಗವನ್ನು ರಚಿಸುವುದಕ್ಕೂ ಆಗಲಿಲ್ಲ ಇವತ್ತು ಜನ ಇವರಿಗೂ ಏನೂ ಕಳಕಳಿ ಇಲ್ಲವೆಂದು ತಿಳಿದುಕೊಂಡಿದ್ದಾರೆ. ಇದನ್ನು ನಾನೂ ನೊಂದ ಮನಸ್ಸಿನಿಂದ ಹೇಳಲು ಇಚ್ಛಿಪಡುತ್ತೇನೆ. ಅದೇರೀತಿ ಮಂಡಲ ವರದಿ ದೇಶಾದ್ಯಂತ ಜಾರಿಗೆ ಬಂದ ಸಂದರ್ಭದಲ್ಲಿ ಅನೇಕ ಶೈಕ್ಷಣಿಕ ಸವಲತ್ತುಗಳು ಸಿಗಬೇಕಾಗಿದೆ ಮತ್ತು ಉದ್ಯೋಗ ಕೊಡುವುದರಲ್ಲೂ ಹೆಚ್ಚಿನ ಸವಲತ್ತು ಸಿಗಬೇಕಾಗಿತ್ತು. ನಮ್ಮಲ್ಲೂ ಸಿಗುವಂತೆ ಮಾಡುವುದರಲ್ಲಿ ಸರ್ಕಾರ ಹೆಚ್ಚಿನ ಆಸಕ್ತಿ ತೋರಬೇಕೆಂದು ನಾನು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಇನ್ನೂ ಒಂದು ಮಾತು, ಹಿಂದುಳಿದ ವರ್ಗದವರ ಬಗ್ಗ ತಮ್ಮಲ್ಲಿ ಏನಾದರೂ ಕಳಕಳಿ ಅನುಕಂಪ ಇದೆ ಎಂದರೆ ಈಗ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಇಡೀ ಜನಾಂಗಕ್ಕೆ ತಂದಿದ್ದೇವೆ. ಪ್ರಜಾಪ್ರಭುತ್ವ ಯಶಸ್ವಿಯಾಗಲು ಮಹಾತ್ಮಗಾಂಧಿಯವರು ಕನಸಿಂತೆ ಗ್ರಾಮಸ್ವರಾಜ್ಯ ನನಸಾಗಲಿ ಎಂದು ಜಿಲ್ಲಾಪಂಚಾಯಿತಿ ತಾಲ್ಲೂಕು ಪಂಚಾಯಿತಿಗಳ ಮೂಲಕ ಜನರು ಅಧಿಕಾರದಲ್ಲಿ ಭಾಗವಹಿಸಲಿ ಎಂದು ಅಧಿಕಾರ ಕೊಟ್ಟಿದ್ದೇವೆ. ಮಾನ್ಯ ಸಿಂಧ್ಯಾ ಅವರಿಗೆ ಒಂದು ಪ್ರಶ್ನೆ ಕೇಳುತ್ತೇನೆ. ಹಿಂದುಳಿದ ವರ್ಗಗಳಿಗೆ ಇಷ್ಟೆಲ್ಲ ಸವಲತ್ತು ಕೊಟ್ಟಿರುವ ತಾವುಗಳು ಸಹಕಾರ ಕ್ಷೇತ್ರಕ್ಕೇಕೆ ಇದನ್ನು ವಿಸ್ತರಿಸಲಿಲ್ಲ. ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಇವತ್ತಿಗೂ ಒಬ್ಬ ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗಲಿಲ್ಲ? ಉಪಾಧ್ಯಕ್ಷ ಆಗುವುದಕ್ಕೆ ಸಾಧ್ಯವಾಗುವುದಿಲ್ಲ? ಒಬ್ಬ ನಿರ್ದೇಶಕ ಆಗಲು ಸಾಧ್ಯವಾಗಲಿಲ್ಲ? ಆದ್ದರಿಂದ ಮೀಸಲಾತಿಯನ್ನು ಸಹಕಾರ ಕ್ಷೇತ್ರಕ್ಕೂ ಅನ್ವಯಿಸಿ ಆ ಕ್ಷೇತ್ರದಲ್ಲೂ ಮುಂದೆ ಬರುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸಹಕಾರ ಕ್ಷೇತ್ರದಲ್ಲಿ ಮೀಸಲಾತಿ ಇದೆ. ನೀವು ಸಚಿವರಾಗಿದ್ದರು ಅನುಭವಸ್ಥರು, ಮೂರನೇ ಬಾರಿಗೆ ಸದನಕ್ಕೆ ಬಂದಿರುವವರು. ಸಹಕಾರ ಕ್ಷೇತ್ರದಲ್ಲಿ ಮೀಸಲಾತಿ ಇದೆ ಆದರೆ ಅದು ಕೆಲವರಿಗೇ ಮೀಸಲಾಗಿದೆ.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ : ಹೌದು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಹಿಂದುಳಿದ ಸಮಾಜದ ಒಬ್ಬರಾದರೂ ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗಿದ್ದಾರೋ ಇಲ್ಲವೋ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸಹಕಾರ ಕ್ಷೇತ್ರ ಕೆಲವರಿಗೆ ಮೀಸಲಾಗಿಬಿಟ್ಟಿದೆ. ಆ ಪಾರ್ಟಿ ಈ

ಪಾರ್ಟಿ ಅಂತ ಇಲ್ಲ, ಅವರದ್ದೇ ಒಂದು ಪಾರ್ಟಿ ಎಂದು ನಾನು ಹೇಳಿದ್ದುದು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಹಿಂದುಳಿದ ವರ್ಗಗಳಿಗಾಗಿ ಅನೇಕ ಯೋಜನೆ ಹಾಕಲು ಸಮಾಜಕಲ್ಯಾಣ ಇಲಾಖೆ ಎಂದು ಮಾಡಿದ್ದೀರಿ. ಹಿಂದುಳಿದವರಿಗೆ ಸವಲತ್ತುಗಳಿಗೆ ಸಿಗಲಿ ಎಂದು ಮಾಡಿದ ಮೇಲೂ ಬಹುಶಃ ಈ ಇಲಾಖೆಯಿಂದ ಇಲ್ಲಿಯವರೆಗೆ ಎಷ್ಟು ಜನರಿಗೆ ಸಹಾಯ ಸಿಕ್ಕಿದೆ ಎಂದು ನೋಡಿದರೆ ಬಹಳ ನಾಚಿಕೆ ಪಡುವಂತಹ ಪರಿಸ್ಥಿತಿ ಇದೆ. ಆ ಇಲಾಖೆಯಿಂದ ಸಿಗುತ್ತಿರುವ ಸಹಕಾರ ಕೂಡ ಬಹಳ ಕಡಿಮೆ ಎಂದು ಬಹಳ ನೊಂದ ಮನದಿಂದ ಹೇಳುತ್ತೇನೆ. ಶೇಕಡ 54ರಷ್ಟು ಜನಸಂಖ್ಯೆ ಇರುವ ನಮಗೆ ಬಜೆಟ್ ಆಲೋಕೇಶನ್‌ನಲ್ಲೂ ಅಷ್ಟೇ ದೊರಕುವಂತಾಗಬೇಕು ಆಗ ನೀವು ಸಾಮಾಜಿಕ ನ್ಯಾಯ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಸಮಾಜವನ್ನು ಮೇಲೆತ್ತಲು ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ಸರ್ಕಾರ ಬಹಳ ಒತ್ತು ಕೊಟ್ಟು ಕೆಲಸ ಮಾಡಬೇಕು. ಸಮಾಜಕಲ್ಯಾಣ ಇಲಾಖೆ ಮಾಡುವ ಕೆಲಸಕಾರ್ಯಗಳ ಬಗ್ಗೆ ತಾವು ಗಮನಹರಿಸಿದ್ದೀರೋ ಇಲ್ಲವೋ ಗೊತ್ತಿಲ್ಲ. ನಮ್ಮ ರಾಜ್ಯದಲ್ಲಿ ಒಟ್ಟು 76 ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಇದ್ದು ಅದರಲ್ಲಿ ಬೋರ್ಡ್ಸ್ ನಿಗಮಗಳು ಸೇರುತ್ತವೆ. ಅವುಗಳಲ್ಲಿ ನೇಮಕಾತಿ ಮಾಡಿರುವ ವಿಚಾರವನ್ನು ತಾವೇನಾದರೂ ಪರಾಮರ್ಶಿಸಿದ್ದೀರೋ ಅಥವಾ ಇಲ್ಲವೋ? ಯಾವ ಅಧಿಕಾರಿಯೂ ಮುತುವರ್ಜಿ ವಹಿಸಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಯಾವ ಅಧಿಕಾರಿಯಾಗಲಿ ಮ್ಯಾನೇಜಿಂಗ್ ಡೈರೆಕ್ಟರಗಳಾಗಲಿ ಹಿಂದುಳಿದ ವರ್ಗಳಿಗೆ ನ್ಯಾಯ ಕೊಟ್ಟಿರುವ ಉದಾಹರಣೆ ಇಲ್ಲವೆಂದು, ನಿರ್ದಾಕ್ಷಿಣ್ಯವಾಗಿ ಅನೇಕ ನಿರ್ಣಯಗಳನ್ನು ತೆಗೆದುಕೊಂಡು ಬಹಳ ಅನ್ಯಾಯ ಮಾಡಿದ್ದಾರೆ. ಬೋರ್ಡ್‌ಗಳಲ್ಲಾಗಲಿ ಇತರೆ ಸಂಸ್ಥೆಗಳಲ್ಲಾಗಲೀ ಈ ವರ್ಗಕ್ಕೆ ಸಿಗಬೇಕಾದ ಸಹಾಯ ಸವಲತ್ತುಗಳನ್ನು ಹೆಚ್ಚಿನ ರೀತಿಯಲ್ಲಿ ಕೊಡಿಸುವ ಬಗ್ಗೆ ತಾವು ಪರಾಮರ್ಶಿಸಬೇಕು. ಈ ಬಗ್ಗೆ ಕೊನೆಯದಾಗಿ, ಒಂದು ಮಾತು ಹೇಳುವುದೇನೆಂದರೆ ಸಿಬ್ಬಂದಿ ಕೊರತೆಯಿಂದ ಬಜೆಟ್ ಅಲೊಕೇಶನ್‌ನಲ್ಲೂ ಕಡಿಮೆ ಇರುವುದರಿಂದ ಹೆಚ್ಚಿನ ಬಜೆಟ್ ಕೊಟ್ಟು ಅನೇಕ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಆ ಸಮಾಜಕ್ಕೆ ಹೆಚ್ಚಿನ ಸಹಾಯ ಸಿಗುವ ಕಡೆ ನೀವು ಆಸಕ್ತಿ ವಹಿಸಿ. ಮತ್ತೊಂದು ವಿಷಯವೇನೆಂದರೆ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಸ್ಥಾಪಿಸಿದ್ದೀರಿ, ಅದಕ್ಕೆ ಬಹಳ ಕಡಿಮೆ ದುಡ್ಡು ಕೊಟ್ಟಿದ್ದಾರೆ ಸಿಬ್ಬಂದಿಯೂ ಇಲ್ಲ. ಈ ನಿಗಮವನ್ನು ಹೆಚ್ಚಿನ ಪ್ರಭಾವಶಾಲಿಯನ್ನಾಗಿ ಮಾಡಲು ಸಿಬ್ಬಂದಿ ಕೊರತೆ ನೀಗಿಸಬೇಕು ಅದರ ಜೊತೆಗೆ ಹೆಚ್ಚಿನ ಅನುದಾನ ಕೊಡದೇ ಇದ್ದರೆ, ನಿಮಗೆ ನಿಜವಾಗಲೂ ಕಳಕಳಿ ಇಲ್ಲವೆಂದು ಹೇಳಬೇಕಾಗುತ್ತದೆ. ಆ ಜನಾಂಗದ ಅಭ್ಯುದಯಕ್ಕಾಗಿ ಆಸಕ್ತಿವಹಿಸಿ ಕೆಲಸ ಮಾಡಬೇಕೆಂದು ಬಿನ್ನಹ ಮಾಡಿಕೊಂಡು, ಹಿಂದುಳಿದ ಸಮಾಜ ಎಂದರೆ ಅದರಲ್ಲಿ ಅನೇಕ ಹಿಂದುಳಿದವರ್ಗಗಳು ಬರಬಹುದು, ಶ್ರಮಿಕವರ್ಗಗಳಿರಬಹುದು, ನೇಕಾರರಿರಬಹುದು ಬಡಿಗೇರರಿರ ಬಹುದು ಕಮ್ಮಾರ ಸಮಗಾರಿರಬಹುದು. ಈ ಎಲ್ಲಾ ಪ್ರಮುಖ ವರ್ಗಗಳಲ್ಲಿರತಕ್ಕ ಜನಾಂಗದವರು ತಮ್ಮ ಶ್ರಮದಿಂದ ವ್ಯಕ್ತಿತ್ವ ಬೆಳೆಸಿಕೊಂಡಿರತಕ್ಕವರು, ಈ ದೇಶವನ್ನು ಕಟ್ಟುವುದಕ್ಕೆ ಸಹಾಯ ಮಾಡಿರುವವರು, ಅವರು ಈ ದೇಶದ ಸಂಪನ್ಮೂಲಗಳೆಂದರೆ ತಪ್ಪಾಗಲಿಕ್ಕಿಲ್ಲ. ಅವರ ಹಿನ್ನೆಲೆಯನ್ನು ಗಮನಿಸಿದಾಗ ಬಹಳ ದುರಾದೃಷ್ಟವೆಂದರೆ ಇಷ್ಟು ವರ್ಗಗಳಾದರೂ ಕೂಡ ಅವರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ

ಮೇಲೆತ್ತಕ್ಕಂಥ ಕೆಲಸ ಇನ್ನೂ ಬಹಳಷ್ಟು ಆಗಬೇಕಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಇವೊತ್ತು ವಿಶೇಷವೇನಂದರೆ, ನೀರಾವರಿ ಬಗ್ಗೆ ಅನೇಕ ವಿಚಾರಗಳನ್ನು ತಮ್ಮ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ. ಅದರಲ್ಲಿ 'ವಿಶೇಷವಾಗಿ ಹೆಚ್ಚಿನ ಆದ್ಯತೆಯನ್ನು ಈ ಸರ್ಕಾರ ಕೊಟ್ಟಿದೆಯಲ್ಲದೆ, ಇನ್ನೂ ಹೆಚ್ಚಿನ ರೀತಿಯಲ್ಲಿ ನಾವು ಮಾಡುತ್ತಿದ್ದೇವೆ' ಎಂದು ತಿಳಿಸಿದ್ದೀರಿ. ಈ ರಾಜ್ಯದ ಜನಸಂಖ್ಯೆಯಲ್ಲಿ ಭೌಗೋಳಿಕ ಪ್ರದೇಶ 1,91,790 ಚದರ ಕಿಲೋಮೀಟರ್ ಗಳಿದ್ದು, ಇದರಲ್ಲಿ 1,40,090 ಚದರ ಕಿಲೋಮೀಟರ್‌ಗಳಷ್ಟು ಪ್ರದೇಶ ಕೃಷಿಗೆ ಯೋಗ್ಯವಾಗಿದೆ. ಈ ಪೈಕಿ 14.06 ಮಿಲಿಯನ್ ಹೆಕ್ಟೇರ್ ಕಲ್ಟಿವಬಲ್ ಏರಿಯಾ ಇದ್ದು, ಸುಮಾರು 10,70 ನೆಟಜೋನ್ ಏರಿಯಾ ಇದೆ, 5.50 ಹೆಕ್ಟೇರ್ ನೀರಾವರಿ ಪ್ರದೇಶವಾಗಿದ್ದು, ಇದರಲ್ಲಿ 35 ಲಕ್ಷ ಪ್ರದೇಶಗಳಲ್ಲಿ ಬೃಹತ್ ಮತ್ತು ಮಧ್ಯಮ ಭೂಗತ ಜಲದ ಬಳಕೆಯಿಂದ ಆಗತಕ್ಕಂಥದ್ದು. ಶೇಕಡಾ 55ರಷ್ಟು ಹೆಕ್ಟೇರನಲ್ಲಿ ಶೇಕಡ 58, ಕಾವೇರಿ ಕೊಳ್ಳದಿಂದ ಶೇಕಡ 18ರಷ್ಟು ಆಗಬೇಕಾಗಿರುತ್ತದೆ. ಇದನ್ನೆಲ್ಲಾ ನೋಡಿದಾಗ ನೀರಾವರಿಗೆ ಮಾರ್ಚ್, 1996ಕ್ಕೆ ಲೆಕ್ಕ ಹಾಕಿದರೆ ಇರಿಗೇಶನ್ ಸೆಕ್ಟಾರ್ ನಲ್ಲಿ ನಮ್ಮ ರಾಜ್ಯದ ಔಟ್‌ಲೇ ಇರುವುದು ಸುಮಾರು 1,168,85. ರಾಜ್ಯದ ಆಯವ್ಯಯದಲ್ಲಿ ಶೇಕಡಾ 24ರಷ್ಟು ಮಾತ್ರ ನೀರಾವರಿಗೆ ಸೀಮಿತಗೊಳಿಸಿದ್ದೇವೆ. ಬಹುಶಃ ರಾಷ್ಟ್ರೀಯ ಸರಾಸರಿ ಲೆಕ್ಕ ಹಾಕಿದಾಗ ಶೇಕಡ 36ರಷ್ಟಿದ್ದು, ನಮ್ಮ ರಾಜ್ಯದ ಸರಾಸರಿ ಎಷ್ಟಿದೆಯೆಂದರೆ ಶೇಕಡಾ 13ರಷ್ಟು. ರಾಷ್ಟ್ರದ ಸರಾಸರಿಗೆ ಹೋಲಿಸಿದಾಗ ಅತಿ ಕಡಿಮೆಯಿರುವುದನ್ನು ನೋಡುತ್ತೇವೆ. ಅದೇ ರೀತಿ ಭಾರಿ ಮತ್ತು ಮಧ್ಯಮ ನೀರಾವರಿಯಲ್ಲಿ ಮಾರ್ಚಿ, 1996ಕ್ಕೆ ಎಷ್ಟು ಖರ್ಚು ಮಾಡಿದ್ದೇವೆಂದರೆ, ಸುಮಾರು 4,578ಕೋಟಿ ರೂಪಾಯಿಗಳು, ಇದರಲ್ಲಿ 14,71,627 ಹೆಕ್ಟೇರ್ ಗಳಷ್ಟು ನಾವು ಮಾಡಿದ್ದೇವೆ. ಅಂದರೆ, ಶೇಕಡ 50ರಷ್ಟನ್ನು ಕೂಡ ಮಾಡುವುದಕ್ಕಾಗಲಿಲ್ಲ. ಇದನ್ನೆಲ್ಲಾ ನೋಡಿದಾಗ ಕೃಷ್ಣಾ ಮೇಲ್ದಂಡೆ ಯೋಜನೆ, ಕಾವೇರಿ ಯೋಜನೆಗಳನ್ನು ಮುಗಿಸಬೇಕೆಂದರೆ ಬಹಳ ಹಣದ ಮೂಲಗಳನ್ನು ಹುಡುಕಿಯಾದರೂ ಕೂಡ ಈ ಎಲ್ಲಾ ಯೋಜನೆಗಳನ್ನು ಮುಗಿಸಬೇಕು. ಈ ಎಲ್ಲಾ ಯೋಜನೆಗಳನ್ನು ಮುಗಿಸದೇ ಹೋದರೆ ಅನೇಕ ಆಪತ್ತುಗಳನ್ನು ಎದುರಿಸಬೇಕಾಗುತ್ತದೆಂಬುದು ನಮಗೆಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಉದಾಹರಣೆಗೆ, ಕೃಷ್ಣಾ ಬೇಸಿನ್ ಪ್ರಾಜೆಕ್ಟ್‌ಗಳನ್ನು ನೋಡುವುದಾದರೆ ಈಗ ನಾವು ಸುಮಾರು 7,608 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇಷ್ಟು ಹಣವನ್ನು ಖರ್ಚು ಮಾಡಿದರೆ ಮಾತ್ರ 16 ಲಕ್ಷ ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ದಿಸೆಯಲ್ಲಿ 7,608 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿಬೇಕಾಗಿತ್ತು. ಕಾವೇರಿ ಪ್ರಾಜೆಕ್ಟ್ ಇರಬಹುದು, ಗೋದಾವರಿ ಪ್ರಾಜೆಕ್ಟ್ ಇರಬಹುದು, ಈ ಎಲ್ಲಾ ಯೋಜನೆಗಳನ್ನು ಈಗಾಗಲೇ ಮುಗಿಸಬೇಕಾಗಿತ್ತು. ಅಂದರೆ, ನನಗನ್ನಿಸಿದ ಮಟ್ಟಿಗೆ ಈ ಎಲ್ಲಾ ಯೋಜನೆಗಳನ್ನು ಮುಗಿಸಬೇಕೆಂದರೆ ಸುಮಾರು 15,000 ಕೋಟಿ ರೂಪಾಯಿಗಳು ಬೇಕಾಗಬಹುದು. ಇಷ್ಟು ಹಣವನ್ನು ಕ್ರೋಢೀಕರಿಸಿಕೊಳ್ಳುವಲ್ಲಿ ಸರ್ಕಾರ ಆಸಕ್ತಿ ವಹಿಸದೇ ಹೋದರೆ, ಏನೇನು ಅನಾಹುತಗಳಾಗುತ್ತದೆಂಬುದರ ಬಗ್ಗೆ ನಾವು ಹೆಚ್ಚಿನ ರೀತಿಯಲ್ಲಿ ಹೇಳುವ ಅವಶ್ಯಕತೆಯಿಲ್ಲ. ಬಹುಶಃ ಎಲ್ಲಾ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿರುವುದರಿಂದ ಆ ದೃಷ್ಟಿಯಿಟ್ಟುಕೊಂಡು ನಾವೆಲ್ಲರೂ ಕೂಡ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿರುವುದೇನೆಂದರೆ, ಹಿಂದಿನ ಸರ್ಕಾರಗಳಿರಬಹುದು, ಆಗಿನ

ಕಾಲದಲ್ಲಿ ರೇಟ್ಸ್ ಏನಿತ್ತು, ಆಗಿನ ಇತಿಮಿತಿಯೊಳಗೆ ನಾವು ಎಷ್ಟು ಬಜೆಟ್ ಕೊಡಬೇಕಾಗಿತ್ತೋ, ಅಷ್ಟೆಲ್ಲಾ ಕೊಟ್ಟರೂ ಕೂಡ ಯಾವುದೇ ಕಾಮಗಾರಿಗಳನ್ನು ಮುಗಿಸುವುದಕ್ಕಾಗಲಿಲ್ಲ. ಆದರೆ, ಬಹಳ ಧೈರ್ಯದಿಂದ ಹೇಳತಕ್ಕಂಥ ಮಾತೆಂದರೆ, ಇವೊತ್ತು ಹೇಮಾವತಿ ಅಣೆಕಟ್ಟು ಕಟ್ಟುವುದಾಗಲೀ, ಹಾರಂಗಿ ಅಣೆಕಟ್ಟು ಕಟ್ಟುವುದಾಗಲೀ, ಘಟಪ್ರಭಾ, ಮಲಪ್ರಭಾ ಮತ್ತು ನಾರಾಯಣಪುರ ಅಣೆಕಟ್ಟು ಕಟ್ಟುವುದಗಾಲೀ ಈ ಎಲ್ಲಾ ಯೋಜನೆಗಳಲ್ಲಿ ಮುಖ್ಯವಾಗಿ ಅಣೆಕಟಟ್ಟು ಕಟ್ಟಿ ನೀರನ್ನು ನಿಲ್ಲಿಸಿ ಸಂಗ್ರಹಿಸಿತಕ್ಕಂಥ ಕೆಲಸ ಇವೊತ್ತು ನಮ್ಮಿಂದಾಗಿಲ್ಲ. ಇನ್ನು ಕಾಲುವೆಗಳನ್ನು ತೋಡಿ ಭೂಮಿಗೆ ನೀರು ಕೊಡುವ ಕೆಲಸ ನಮ್ಮ ಮುಂದಿರುವ ಸಮಸ್ಯೆಯಾಗಿದೆ. ಕಾಲುವೆಗಳ ಮೂಲಕ ಭೂಮಿಗೆ ನೀರು ಕೊಡುವ ವಿಚಾರದಲ್ಲಿ ಬಹುಶಃ ತಾವು ಹೆಚ್ಚಿನ ರೀತಿಯಲ್ಲಿ ಕಾಳಜಿ ವಹಿಸಿಮಾಡಿದ್ದಲ್ಲಿ ಇನ್ನೂ ಹೆಚ್ಚೆಚ್ಚು ನೀರನ್ನು ನೀರಾವರಿ ಪ್ರದೇಶಗಳಿಗೆ ಹರಿಸಲು ಸಾಧ್ಯವಾಗುತ್ತದೆ. ಆ ದೃಷ್ಟಿಕೋನವಿಟ್ಟುಕೊಂಡು ನೋಡಿದಾಗ ಈ ಕಾಮಗಾರಿಗಳನ್ನು ಮುಗಿಸಲು ಕೋಟಿಗಟ್ಟಲೆ ಹಣ ಬೇಕಾಗುತ್ತದೆಂದು ನಾವೆಲ್ಲರೂ ಕೂಡ ಹೇಳುತ್ತೇವೆ. ಆದರೆ, ಹಣವನ್ನು ಎಲ್ಲಿಂದ ತರಬೇಕೆನ್ನುವುದರ ಬಗ್ಗೆ ನಾವ್ಯಾರೂ ಕೂಡ ವಿಮರ್ಶೆ ಮಾಡುವುದಿಲ್ಲ. ಆದರೆ, ದುರಾದೃಷ್ಟವೇನೆಂದರೆ, ಎಲ್ಲಾ ಶಾಸಕರುಗಳು ಸಹ ಹೆಚ್ಚು ಹಣ ಕೊಡಿ ಎಂದು ನಾನಾದರೂ ಕೇಳಬಹುದು, ಮತ್ತೊಬ್ಬರು ಕೇಳಬಹುದು. ಹಣವನ್ನು ಎಲ್ಲಿಂದ ಕ್ರೋಢೀಕರಿಸಬಹುದೆಂಬುದರ ಕಡೆ ನಾವ್ಯಾರೂ ಒತ್ತು ಕೊಡುವುದಿಲ್ಲ. ಆ ದಿಸೆಯಲ್ಲಿ ನನಗನ್ನಿಸಿರುವ ಕೆಲವು ವಿಚಾರಗಳನ್ನು ಹೇಳುವುದಾದರೆ, ನಾವೆಲ್ಲರೂ ಕೂಡ ಬಹಳ ವಿಮರ್ಶೆ ಮಾಡಿರುವ ವಿಚಾರವೇನೆಂದರೆ ಇವೊತ್ತು ಎಲ್ಲಾ ಇಲಾಖೆಗಳನ್ನು ಬಿಟ್ಟು ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡಲೇಬೇಕು, ಆದ್ಯತೆಯನ್ನು ಅನಿವಾರ್ಯವಾಗಿಯಾದರೂ ಕೊಡಲೇಬೇಕು. ಇವೊತ್ತು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ 734 ಟಿಎಂಸಿಯಷ್ಟು ನೀರನ್ನು ಉಪಯೋಗ ಮಾಡಿಕೊಳ್ಳತಕ್ಕ ವಿಚಾರವಾಗಲೀ ಅದರ ಜೊತೆಗೆ ಇರತಕ್ಕಂಥ ಮಲಪ್ರಭಾ, ಘಟಪ್ರಭಾ ಯೋಜನೆಗಳನ್ನು ಮುಗಿಸುವುದಕ್ಕಾಗಲೀ, ಈ ಎಲ್ಲಾ ಯೋಜನೆಗಳಿಗೂ ಸಾಕಷ್ಟು ದುಡ್ಡು ಬೇಕಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಏನಾಗಿದೆಯೆಂದರೆ ಹಣದ ಅಭಾವದಿಂದ ಎಲ್ಲಾ ಯೋಜನೆಗಳು ಕುಂಠಿತಗೊಂಡಿವೆ. ಯಾವಾಗಲೋ ಮುಗಿಯಬೇಕಾಗಿದ್ದಂಥ ಯೋಜನೆಗಳು, ಅವು ಪ್ರಾರಂಭಗೊಂಡು ಇಪ್ಪತ್ತು ವರ್ಷಗಳಾಗುತ್ತಿದ್ದರೂ ಮುಗಿಯುವುದಕ್ಕೆ ಸಾಧ್ಯವಾಗುತ್ತಿಲ್ಲ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಸದಸ್ಯರಾದ ಚಿಮ್ಮನಕಟ್ಟಿಯವರು ಮಾತನಾಡುತ್ತಿದ್ದು, ಅವರ ಮಾತನ್ನು ಇಲ್ಲಿ ಯಾರೂ ಕೇಳುತ್ತಿಲ್ಲ.

ಉಪಾಧ್ಯಕ್ಷರು : ವಾಟಾಳ ನಾಗರಾಜರವರು ಹಾಗೂ ಮುನಿಯಪ್ಪನವರು ಹಿಂದೆ ಹೋಗಿ ಮಾತನಾಡುತ್ತಿದ್ದರೆ ಅವರೇನು ಮಾಡಬೇಕು ? ನೀವು ಮಾತನಾಡುವುದು ಬಿಟ್ಟು ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ವಾಟಾಳನಾಗರಾಜ : ಉಪಾಧ್ಯಕ್ಷರೆ, ನಾನು ಏನು ಹೇಳುತ್ತಿದ್ದೇನೆಂದರೆ, ಮಾನ್ಯ ಸದಸ್ಯರು ಸದನದಲ್ಲಿ ಬಹಳ ಒಳ್ಳೆಯ ವಿಚಾರಗಳನ್ನು ಪ್ರಸ್ತಾಪಿಸುತ್ತಿದ್ದು, ಅವರ ಮಾತನ್ನು ಹೇಳುವವರು -ಕೇಳುವವರು ಯಾರೂ ಇಲ್ಲವೆಂದು ನಾವು ಮೂರು ಜನ ಮಾತನಾಡಿಕೊಳ್ಳುತ್ತಿದ್ದೇವೆ. ಇತ್ತ ಕಡೆ

ಶಿವರಾಮೇಗೌಡರು ಮಾತನಾಡುತ್ತಿದ್ದಾರೆ ಅತ್ತಕಡೆ ಸಾರಿಗೆ ಸಚಿವರಾದ ಸಿಂಧ್ಯರವರು ಏನೋ ಮಾತನಾಡುತ್ತಿದ್ದಾರೆ, ಇನ್ನು ವರದೇಗೌಡರಿಗೆ ದೇವರೇ ಕಾಪಾಡಬೇಕು, ಅವರು ಅದೇನು ಕೇಳುತ್ತಾರೋ ಗೊತ್ತಿಲ್ಲ, ಹೀಗಾಗಿ ಸದನದಲ್ಲಿ ಏನು ನಡೆಯುತ್ತಿದೆಯೆಂದು ಒಬ್ಬರಿಗೂ ಗೊತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ಕೇಳಿಸಿಕೊಂಡೇ ಕುಳಿತಿರಬಹುದು. ಅವರು ಮಾತನಾಡುತ್ತಾ ಸಹಕಾರಿ ಕ್ಷೇತ್ರದಲ್ಲಿ ಮೀಸಲಾತಿ ತರಬೇಕೆಂದರು, ಅದಕ್ಕೆ ಸಹಕಾರಿ ಕ್ಷೇತ್ರವೇ ಮೀಸಲಾತಿಯಾಗಿದೆಯೆಂದು ನಾನು ಹೇಳಿದೆ. ಅವರು ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಮಾತನಾಡಿದ್ದಾರೆ, ಈಗ ಕಾವೇರಿ ಬಗ್ಗೆ ಮಾತನಾಡುತ್ತಿದ್ದಾರೆ, ಎಲ್ಲಾ ವಿಚಾರಗಳನ್ನು ಕೇಳಿಸಿ ಕೊಳ್ಳುತ್ತಿದ್ದೇನೆ, ಅವರು ಸರ್ಕಾರಕ್ಕೆ ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದಾರೆ, ಅಲ್ಲದೆ, ನಮ್ಮ ಸರ್ಕಾರ ಹೆಚ್ಚು ಚೆನ್ನಾಗಿ ಕೆಲಸ ಮಾಡುತ್ತಿದೆಯೆಂತಲೂ ಹೇಳಿದ್ದಾರೆ. ಅವರ ಮಾತನ್ನು ಕೇಳುತ್ತಿದ್ದೇನೆ. ತಾವು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಿಸೋರ್ಸ್ ಮೊಬಿಲೈಜೇಶನ್ ಅನ್ನು ಯಾವ ರೀತಿ ಮಾಡಬೇಕೆನ್ನುವುದರ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಿದ್ದರು. ಈಗಾಗಲೇ ಮುಂಜಾನೆ ಅವರು ರಿಸೋರ್ಸ್ ಮೊಬಿಲೈಜೇಶನ್‌ಸ್ ಬಗ್ಗೆ ತಿದ್ದುಪಡಿ ತಂದು ಮೊಬಿಲೈಸ್ ಮಾಡಿಕೊಂಡಿದ್ದಾರೆ. ಇಲ್ಲಿ ಕುಳಿತಿರುವಂಥ ಎಲ್ಲವೂ ಲಾಸ ಕಂಪನಿಗಳೇ ಆಗಿವೆ. ಕೆ.ಎಸ್.ಆರ್.ಟಿ.ಸಿ. ಲಾಸ್, ಟೆಕ್ಸಟೈಲ್ ಲಾಸ್, ಸಿರಿಕಲ್ಚರ್ ಲಾಸ್, ಕೆ.ಇ.ಬಿ ಲಾಸ್, ಇಲ್ಲಿ ಕುಳಿತಿರುವ ಕಂಪನಿಗಳೆಲ್ಲವೂ ಲಾಸನಲ್ಲಿವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಏನು ಮಾಡುವುದು, ನೀವೆಲ್ಲಾ ಲಾಸ್ ಮಾಡಿ ಹೊರಟು ಹೋದಿರಿ, ಅದನ್ನು ನಾವು ಈಗ ಸ್ವಲ್ಪ ತುಂಬಿಸಿಕೊಳ್ಳುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವೆಲ್ಲವೂ ಲಾಸ ಕಂಪನಿಗಳಾಗಿವೆಯೆಂದು ಹೇಳಿದರೆ ಹಣವನ್ನು ಎಲ್ಲಿ ಕ್ರೋಢಿಕರಿಸುತ್ತಾರೆ? ಹಣ ಎಲ್ಲಿ ಸಿಗುತ್ತದೆಯೋ ಅಲ್ಲಿ ಬಿಡುತ್ತಾರೆ, ಹೀಗೆಲ್ಲಾ ಮಾಡಿಕೊಂಡು ಇವೆಲ್ಲವನ್ನು ದಿವಾಳಿಯೆಬ್ಬಿಸಿ ಹೋಗುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ಅವರಿಗೆ ಏನೂ ಅಡ್ಡಿಪಡಿಸುವುದಿಲ್ಲ. ಮಾನ್ಯ ಸದಸ್ಯರು ಆಲಮಟ್ಟಿ ಬಗ್ಗೆ ಒಂದು ವಿಚಾರ ಮಾತನಾಡಿದರು. ಸಚಿವರಿಗೆ ಗೊತ್ತಾಯಿತೇ? ಸದಸ್ಯರು ಏನು ಹೇಳಿದರೆಂದು ಹೇಳಿ? ನಾವು ಕೇಳುತ್ತಿದ್ದೇವೆ, ತಾವು ಬೇಸರಪಟ್ಟುಕೊಳ್ಳಬಾರದು. ಇದರ ಬಗ್ಗೆ ಸಚಿವರು ಈಗ ಹೇಳಲು? ನಾನು ಅಷ್ಟೂ ಜನರಿಗೆ ಸವಾಲು ಹಾಕುತ್ತೇನೆ. ವರದೇ ಗೌಡರೇ, ತಮಗೆ ಗೊತ್ತಿದೆಯೇ? ಅಜಯಕುಮಾರ ಸರನಾಯಕ್‌ರವರೇ ಸದಸ್ಯರು ಹೇಳಿದ್ದುದು ಏನೆಂಬುದು ತಮಗೆ ಗೊತ್ತಿದೆಯೇ?

ಶ್ರೀ ಅಜಯ್ ಕುಮಾರು ಸರನಾಯಕ್ : ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸ ಬೇಕಾದರೆ ಹಣವನ್ನು ಯಾವ ರೀತಿ ಕ್ರೋಢೀಕರಿಸಿಕೊಳ್ಳಬೇಕೆನ್ನುವುದರ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಿದ್ದರು.

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಇದು xx ಯಿಂತ ಒಂದು ರೀತಿಯ ವರ್ತನೆ, ನಾವೆಲ್ಲರೂ ಕೇಳುತ್ತಿದ್ದೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ತಾವು ಏಕೆ ಆ ತರಹ ಮಾತನಾಡುತ್ತೀರಿ?

SRI P.G.R. SINDHYA : This cannot go on record. He must withdraw it. It cannot go into the record.

ಶ್ರೀ ವಾಟಾಳನಾಗರಾಜ : ತಾವು ಅದನ್ನು ಕಡತದಿಂದ ತೆಗೆಯಬಾರದು. xx ಗಳು ಅಂದರೆ ಕೆಟ್ಟ ಭಾವನೆಯೇನೂ ಇಲ್ಲ, ವ್ಯಾಪಾರಕ್ಕೆ ಬರತಕ್ಕಂಥವರು ಗಿರಾಕಿಗಳು. ಗಿರಾಕಿಗಳು ಎನ್ನುವ ಪದ ಇದೆಯೆಲ್ಲ, ಅದು ಅನೇಕ ಅರ್ಥಗಳನ್ನು ಕೊಡುತ್ತದೆ. ಆದರೆ xx ಎನ್ನುವ

ಉದ್ದೇಶವೇನೆಂದರೆ, ನಾವು ಪ್ರತಿದಿನ ಕೇಳತಕ್ಕಂಥ xxಗಳು. ಅಂದರೆ; ಅದು ಕಟೆಟ್ ಪದವೇನಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : xx ಎನ್ನುವ ಪದಕ್ಕೆ ಬೇಕಾದಷ್ಟು ಅರ್ಥವಿದೆ, ತಾವು ಹೇಳಿದ್ದೀರಿ. ಆದುದರಿಂದ, ನಮಗೂ ನಿಮಗೂ ಜಗಳ ಬೇಡ. That should not go into the record.

ಶ್ರೀ ವಾಟಾಳ್ ನಾಗರಾಜ್ : ಇದು ಒಳ್ಳೆಯ ಕಥೆಯಾಯಿತಲ್ಲ!

ಉಪಾಧ್ಯಕ್ಷರು : ಆ ಪದವನ್ನು ಕಡತದಿಂದ ತೆಗೆದು ಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈಗ ವಾಟಾಳ್ ನಾಗರಾಜ್‌ರವರು ಸ್ವಲ್ಪ ಕೋಪದಲ್ಲಿದ್ದಾರೆ.

ಉಪಾಧ್ಯಕ್ಷರು : ತಾವು ರೀತಿ ಚರ್ಚಿಸುತ್ತಾ ಹೋದರೆ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಯಾವಾಗ ಮುಗಿಸುವುದು?

3.50 ಪಿ.ಎಂ.

(ಗೊಂದಲ)

ಉಪಾಧ್ಯಕ್ಷರು : ಎಲ್ಲರಿಗೂ ಟೈಮ್ ನಿಗದಿ ಮಾಡಿದ್ದೇವೆ. ನೀವು ತೊಂದರೆ ಕೊಡಬಾರದು.

ಶ್ರೀ ವಾಟಾಳ್ ನಾಗರಾಜ್ : ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ನಾನೂ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ದಯಮಾಡಿ ಕುಳಿತುಕೊಳ್ಳಲಿ. ಮಾನ್ಯ ಚಿಮ್ಮನಕಟ್ಟಿಯವರು ಭಾಷಣ ಪ್ರಾರಂಭ ಮಾಡಲಿ.

ಶ್ರೀ ವಾಟಾಳ್ ನಾಗರಾಜ್ : ಆಡಳಿತ ಪಕ್ಷದ ಸದಸ್ಯರಲ್ಲಿ 13 ಜನರಲ್ಲಿ ಆರು ಜನ ಮಂತ್ರಿಗಳು, ಏಳು ಜನ ಸದಸ್ಯರು ಇದ್ದಾರೆ. ಇದು ಹೇಗೆ?

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಉಪಾಧ್ಯಕ್ಷರು : ಮಾನ್ಯ ಸಚೇತಕರು ಕರೆಯಲು ಹೋಗಿದ್ದಾರೆ. ಸದಸ್ಯರುಗಳು ಬರುತ್ತಾರೆ ಮಂತ್ರಿಗಳೂ ಬರುತ್ತಾರೆ ಅವರು ಭಾಷಣ ಪ್ರಾರಂಭ ಮಾಡಲಿ.

ಶ್ರೀ ವಾಟಾಳ್ ನಾಗರಾಜ್ : ನೀವು ನಮ್ಮ ಸಂಖ್ಯೆ ನೋಡಿ. ನೀವು ಸಂತೋಷಪಡಬೇಕಲ್ಲ.

ಉಪಾಧ್ಯಕ್ಷರು : ಸಂತೋಷವಾಗಿದೆ. ಸದಸ್ಯರುಗಳು ಬರುತ್ತಾರೆ. ಚಿಮ್ಮನಕಟ್ಟಿಯವರು ತಾವು ಭಾಷಣ ಪ್ರಾರಂಭ ಮಾಡಿ.

ಶ್ರೀ ವಾಟಾಳ್ ನಾಗರಾಜ್: xx ಎನ್ನುವ ಪದ ಇರಲಿ. ಏನಾಗುತ್ತದೆ?

ಉಪಾಧ್ಯಕ್ಷರು : ಚಿಮ್ಮನಕಟ್ಟಿಯವರೆ, ತಾವು ಭಾಷಣ ಮುಂದುವರೆಸಿ. ನೀವು ಪದೇ ಪದೇ ಹೀಗೆ ಮಾಡಿದರೆ ನಾವು ಸದನ ನಡೆಸುವುದು ಹೇಗೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, xx ಎನ್ನುವ ಪದವು ಸಂಸದಿಯ ಅಲ್ಲವೆ ಎಂಬ ಬಗ್ಗೆ ಅನಂತರ ತೀರ್ಮಾನ ತೆಗೆದುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : xx ಎನ್ನುವ ಪದವು ಸಂಸದೀಯವಾಗಿರಬಹುದು, ಆದರೆ ಆ ಸಂದರ್ಭದಲ್ಲಿ ಆ ವಾಕ್ಯದ ಬಗ್ಗೆ ಮಾತನಾಡಿರುವುದು ಮುಖ್ಯ.

ಶ್ರೀ ಡಿ.ಬಿ. ಸದಾನಂದ ಗೌಡ : xx ಎನ್ನುವ ಪದಕ್ಕೆ ಅರ್ಥ ಇದೆ. ಯಾರೋ ಗಿರಾಕಿಗಳು ಬಂದರು ಖಂಡಿತ ಕೆಟ್ಟ ಅರ್ಥ ಅಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, xx ಎನ್ನುವ ಪದ ಕೊಟ್ಟಿಲ್ಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆ ಪದ ಕೆಟ್ಟದಲ್ಲದಿರಬಹುದು, ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಅದನ್ನು ವಾಪಸ್ಸು ಪಡೆಯುಕೊಳ್ಳಬೇಕಾಗುತ್ತದೆ.

ಉಪಾಧ್ಯಕ್ಷರು : xx ಎನ್ನುವುದು ಬೇರೆ ಬೇರೆ ಅರ್ಥವನ್ನು ಕೊಡುತ್ತದೆ ಅಧು ಅಷ್ಟೊಂದು ಒಳ್ಳೆಯ ಮತ್ತು ಸಮಂಜಸವಾದ ಪದವಲ್ಲ. ಅದನ್ನು ಕಡತದಿಂದ ತೆಗೆದುಬಿಡಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ನಾನು ರಾಜ್ಯದ ಕನ್ನಡಕೋಸ್ಕರ ಹೋರಾಟ ಮಾಡುವ ಗಿರಾಕಿ. ಈ ಸಮಾಜಕೋಸ್ಕರ ಹೋರಾಟ ಮಾಡುವ ಗಿರಾಕಿ. ಪ್ರತಿ ಸಲ ದೆಹಲಿಗೆ ಹೋಗಿ ಕನ್ನಡಕ್ಕಾಗಿ ಹೋರಾಟ ಮಾಡತಕ್ಕ ಅಂಥವರ ಇದರಲ್ಲಿ ತಪ್ಪೇನಿದೆ?

ಉಪಾಧ್ಯಕ್ಷರು : ಆ ಶಬ್ದಕ್ಕೆ ಆ ಪದವು ಹೊಂದಾಣಿಕೆಯಾಗುವುದಿಲ್ಲ; ಒಮ್ಮೆ ಆ ರೀತಿ ಹೇಳಿದಮೇಲೆ ಪ್ರತಿಬಾರಿಯೂ ಅದನ್ನೇ ಉಪಯೋಗ ಮಾಡಬಾರದು. ತಾವು ಹಿರಿಯ ಸದಸ್ಯರು,

---

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ದಯಮಾಡಿ ಸದನವನ್ನು ಸುಗಮವಾಗಿ ನಡೆಯಲು ಅವಕಾಶ ಮಾಡಿಕೊಟ್ಟು ಮಾತನಾಡುವವರಿಗೆ ಅವಕಾಶ ಮಾಡಿಕೊಡಿ. ತಾವು ಪದೇ ಪದೇ ಆ ರೀತಿ ಹೇಳಬಾರದು.

ಶ್ರೀ ಯು.ಆರ್. ಸಭಾಪತಿ : ಪದೇ ಪದೇ ಎಂದರೆ ಅರ್ಥವೇನು? ನಮ್ಮನ್ನು ಇಷ್ಟೊಂದು ನಿರ್ಲಕ್ಷ್ಯ ಮಾಡುವಂಥದ್ದು ಸರಿಯೇ?

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷರೆ, xx ಎನ್ನುವ ಪದವನ್ನು ಯಾವ ಸಂದರ್ಭದಲ್ಲಿ ಉಪಯೋಗ ಮಾಡಬೇಕೋ ಆ ಸಂದರ್ಭದಲ್ಲಿ ಉಪಯೋಗ ಮಾಡಿದರೆ ಮಾತ್ರ ಅದಕ್ಕೆ ಬೆಲೆ. ಎಲ್ಲಾ ಸಂದರ್ಭಗಳಲ್ಲಿ ಅದನ್ನು ಉಪಯೋಗ ಮಾಡುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು : ಮತ್ತೆ ಅದನ್ನು ದಯಮಾಡಿ ಎತ್ತಬೇಡಿ. ಮಾನ್ಯ ಚಿಮ್ಮನಕಟ್ಟಿಯವರೆ ತಾವು ಮುಂದುವರೆಸಿ

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಉಪಾಧ್ಯಕ್ಷರೆ, ಸಂಪನ್ಮೂಲಗಳ ಕೊರತೆಯಿಂದ ಎಲ್ಲಾ ಯೋಜನೆಗಳು ಮುಗಿಯಲು ಸಾಧ್ಯವಾಗುತ್ತಿಲ್ಲ. ಇದನ್ ತಾವೆಲ್ಲರೂ ಒಪ್ಪುತ್ತೀರಿ. ಆದರೆ ಸಂಪನ್ಮೂಲವನ್ನು ಕ್ರೋಢೀಕರಿಸಲು ನಾವ್ಯಾರು ಚಿಂತನೆ ಮಾಡಿಲ್ಲವೆಂದು ನನಗನ್ನಿಸುತ್ತದೆ. ಆ ದೃಷ್ಟಿಯಿಂದ ನನ್ನ ಅಭಿಪ್ರಾಯವನ್ನು ಹೇಳುವುದಾದರೆ, ಅನೇಕ ಯೋಜನೆಗಳು ಈಗ ಕಾರ್ಯಗತಗೊಂಡಿವೆ. ಕಬಿನಿ, ಹಾರಂಗಿ, ಕೆ.ಆರ.ಎಸ್. ಭದ್ರಾ ಘಟಪ್ರಭ ಯೋಜನೆಗಳಾಗಿರಬಹುದು, ಯಾವ್ಯಾವ ಯೋಜನೆಗಳಲ್ಲಿ ರೈತರು ಸಫಲತೆಯನ್ನು ಪಡೆದುಕೊಂಡಿದ್ದಾರೋ, ರೈತರು ನೀರಾವರಿಯ ಪ್ರಯೋಜನವನ್ನೇನು ಪಡೆದುಕೊಂಡಿದ್ದಾರೋ ಆ ಪ್ರದೇಶದ ರೈತರಿಂದ ಬರಬೇಕಾದ ಬಾಕಿ ಏನಿದೆ ಅದನ್ನು ಯಾವ ಸರ್ಕಾರದವರು ಬಹುಶಃ ವಸೂಲಿ ಮಾಡಲು ಪ್ರಯತ್ನ ಮಾಡಲಿಲ್ಲ. ದುರಾದೃಷ್ಟವಶಾತ್ ನಮ್ಮ ವ್ಯವಸ್ಥೆ ಹೇಗಿದೆ ಅಂದರೆ,

ನೀರಾವರಿ ಇಲಾಖೆಯವರು ಕರ ವಸೂಲಿ ಮಾಡಲು ಕಂದಾಯ ಇಲಾಖೆಯವರಿಗೆ ಜವಾಬ್ದಾರಿ ವಹಿಸುತ್ತಾರೆ. ಆದರೆ ಕಂದಾಯ ಇಲಾಖೆಯವರು ನೀರಾವರಿ ಕರವನ್ನು ವಸೂಲಿ ಮಾಡಲು ಸಾಧ್ಯವಾಗುತ್ತಿಲ್ಲ. ನಮ್ಮ ರಾಜ್ಯದಲ್ಲಿ ಸುಮಾರು 96 ಕೋಟಿ ನೀರಿನ ಕರ ಅಥವಾ ಮೇಂಟೆನೆನ್ಸ ಸೆಸ ಬಾಕಿ ಉಳಿದಿದೆ. ಅದೇ ರೀತಿ ಜೇನಲ್ ವಾಟರ್ ರೇಟ್ ಸುಮಾರು 227 ಕೋಟಿ ಬಾಕಿ ಇದೆ. ಕಂದಾಯ ಇಲಾಖೆಯವರು, ಜೇನಲ್ ವಾಟರ್ ರೇಟನಲ್ಲಿ ಸುಮಾರು 11 ಕೋಟಿ ವಸೂಲಿ ಮಾಡಿರುವುದಾಗಿ ಹೇಳಿದ್ದಾರೆ. ಆದ್ದರಿಂದ ನಾನು ಹೇಳಬಯುಸುವುದೇನೆಂದರೆ, ಯಾವ ರೈತರು ಸೌಲಭ್ಯವನ್ನು ಪಡೆದಿರುತ್ತಾರೋ ಅವರಿಂದ ನಾನು ಹೇಳಬಯುಸುವುದೇನೆಂದರೆ, ಯಾವ ರೈತರು ಸೌಲಭ್ಯವಾಗುತ್ತದೆ. ಹಾಕಿಕೊಂಡಿರುವ ಯೋಜನೆಗಳು ಮುಗಿಯಬೇಕಾದರ ಈ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ದಿಕ್ಕಿನಲ್ಲಿ ಸರ್ಕಾರದವರು ಹಿಂದೇಟನ್ನು ಹಾಕಿ, ರೈತರ ಪರವಾಗಿ ನಾವಿದ್ದೇವೆ ಎಂದು ಭರವಸೆಯನ್ನು ಕೊಟ್ಟು ನಿರಾಸಕ್ತಿ ಹಿಂದೇಟನ್ನು ಹಾಕಿ, ರೈತರ ಪರವಾಗಿ

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ನಾವಿದ್ದೇವೆ ಎಂದು ಭರವಸೆಯನ್ನು ಕೊಟ್ಟು ನಿರಾಸಕ್ತಿ ತೋರಿಸಿದ್ದಾರೆ. ಆ ರೈತರಿಗೆ ಸೌಲಭ್ಯವನ್ನು ಕೊಡಬೇಕು ಆದರೆ ಅವರು ಪಡೆದುಕೊಂಡಿರುವ ಸೌಲಭ್ಯಕ್ಕೆ ಆ ಭಾಗದ ರೈತರಿಗೆ ಬರುವ ಆದಾಯದಿಂದ ಹಣವನ್ನು ವಸೂಲಿ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಸರ್ಕಾರ ಈ ನಿಟ್ಟಿನಲ್ಲಿ ಬಹಳ ಹಿಂದೇಟು ಹಾಕುತ್ತಿದೆ. ನಮ್ಮಲ್ಲಿ ನೀರಾವರಿ ಆಕ್ಟ ಇದೆ. ಆ ಆಕ್ಟನ್ ಪರದಿಯಲ್ಲಿ ನಾವು ಪರಿಣಾಮಕಾರಿಯಾಗಿ ಕೆಲಸ ಮಾಡಲು ಆಗುವುದಿಲ್ಲ. ಉದಾಹರಣೆಗೆ ಅರಣ್ಯ ಇಲಾಖೆಯಲ್ಲಿ ಬಹಳಷ್ಟು ಆರ್.ಎಫ್.ಓ.ಗಳಿರುತ್ತಾರೆ, ಜ್ಯುಡಿಷಿಯಲ್ ಪವರ ಇರುತ್ತದೆ, ತಪ್ಪು ಮಾಡಿದವರ ಮೇಲೆ ಕೇಸ ಹಾಕಿ ಹಣವನ್ನು ರಿಕವರಿ ಮಾಡುತ್ತಾರೆ. ಆದರೆ, ಅದೇ ನೀರಾವರಿ ಇಲಾಖೆಯಲ್ಲಿರುವ ಯಾವುದೇ ಅಧಿಕಾರಿಗೆ ಯಾವುದೇ ರೈತರ ಮೇಲೆ ಕೇಸನ್ನು ಹಾಕಲು ಸಾಧ್ಯವಿಲ್ಲ. ಯಾವುದೇ ರತ ಕೆನಾಲನ್ನು ಅಬಸ್ಟಕಲ್ ಮಾಡಿದರೂ ಸಹ ಅವನ ಮೇಲೆಕೇಸನ್ನು ಹಾಕುವ ಅಧಿಕಾರಿ ನೀರಾವರಿಯ ಯಾವುದೇ ಅಧಿಕಾರಿಗೆ ಇಲ್ಲ. ಆದ್ದರಿಂದ ನೀರಾವರಿಯ ಆಕ್ಟಗೆ ಸಮಗ್ರವಾದ ತಿದ್ದುಪಡಿಯನ್ನು ತಂದರೆ ಒಳ್ಳೆಯದಾಗುತ್ತದೆ. ಇದರಿಂದ ಕರದ ವಸೂಲಾತಿ ಚೆನ್ನಾಗಿ ಆಗುತ್ತದೆ. ಜೊತೆಗೆ ಇಲಾಖೆಯಲ್ಲಿರುವ ಇಂಜನಿಯರಗಳ ಮೇಲೂ ಹತೋಟಿ ಉಳಿಯುತ್ತದೆ. ಆದ್ದರಿಂದ ಆದಷ್ಟು ಬೇಗ ನೀರಾವರಿ ಆಕ್ಟಗೆ ಸಮಗ್ರವಾದ ತಿದ್ದುಪಡಿಯನ್ನು ಮಾಡಬೇಕೆಂದು ವಿನಂತಿಸುತ್ತೇನೆ. ಇಂದು ಹಾಕಿಕೊಂಡಿರುವ ನೀರಾವರಿ ಯೋಜನೆಗೆ ಸಾವಿರಾರು ಕೋಟಿ ರೂಪಾಯಿಗಳ ಅಗತ್ಯವಿದೆ. ಇದಕ್ಕಾಗಿ ಬೇರೆ ಇಲಾಖೆಗಳಿಗೆ ಕಡಿಮೆ ಹಣವನ್ನು ಕೊಟ್ಟು ನೀರಾವರಿಗೆ ಹೆಚ್ಚು ಹಣವನ್ನು ಕೊಟ್ಟರೆ ತಪ್ಪೇನಿಲ್ಲವೆಂದು ನನ್ನ ಅಭಿಪ್ರಾಯ. ತಮಿಳುನಾಡಿನಲ್ಲಾಗಲಿ, ಆಂಧ್ರದಲ್ಲಾಗಲಿ, ಮಹಾರಾಷ್ಟ್ರದಲ್ಲಾಗಲಿ ಹಿಂದೆ ಇದ್ದಂಥ ಸರ್ಕಾರಗಳು ಬಹಳ ನಿರ್ಧಾಕ್ಷಣ್ಯವಾಗಿ ಕಠಿಣ ಕ್ರಮ ತೆಗೆದುಕೊಂಡು, ಇರತಕ್ಕ ಎಲ್ಲಾ ನೀರಾವರಿ ಯೋಜನೆಗಳು ಮುಗಿಸಬೇಕೆಂದು ಇತರ ಯೋಜನೆಗಳನ್ನು ಕಡಿಮೆ ಮಾಡಿ ನೀರಾವರಿ ಪ್ರದೇಶವನ್ನು ಹೆಚ್ಚು ಮಾಡಿದ್ದರಿಂದ ಇಂದು ಆ ರಾಜ್ಯಗಳು ಆರ್ಥಿಕವಾಗಿ ಸ್ವಾವಲಂಬಿಯಾಗಿರುವ ರಾಜ್ಯಗಳಾಗಿವೆ. ಇದರ ಜೊತೆಗೆ ಅಧಿಕಾರಿಗಳು ಯಾರಿದ್ದಾರೆ. ಅವರಿಗೆ ನೀರಾವರಿ ತೆರಿಗೆಯನ್ನಾಗಿ ಇನ್ನೂರು ಇಲ್ಲವೆ ಮುನ್ನೂರು ರೂಪಾಯಿಗಳನ್ನು ಹಾಕಿ. ಆದ್ದರಿಂದ ಬರುವ ಹಣದಿಂದ ಈ ನೀರಾವರಿ ಯೋಜನೆಗಳನ್ನು ಮುಗಿಸಲು ಸಹಾಯವಾಗುತ್ತದೆ. ಆ ದಿಸೆಯಲ್ಲಿ ಸಂಪನ್ಮೂಲವನ್ನು ಕ್ರೋಢೀಕರಿಸಲು ಹೆಚ್ಚು ಆಸಕ್ತಿಯನ್ನು ವಹಿಸಬೇಕು. ನಾವು ನೀರಾವರಿಗೆ ಇಷ್ಟು ಹಣವನ್ನು ಕೊಟ್ಟಿಲ್ಲವೆಂದು ಹೇಳಿದರೆ ಅವರೇನು ಹಣವನ್ನು ಪ್ರಿಂಟ್ ಮಾಡಿ ಕೊಡಲು ಸಾಧ್ಯವಿಲ್ಲ. ಯಾವ ಸರ್ಕಾರ ಬಂದರೂ ಆ ರೀತಿ ಕೊಡಲು ಆಗುವುದಿಲ್ಲ. ಆದ್ದರಿಂದ ಎಲ್ಲಾ ಮೂಲಗಳಿಂದ ಸಂಪನ್ಮೂಲವನ್ನು ಕ್ರೋಢೀಕರಿಸುವ ಕೆಲಸವನ್ನು ಸರ್ಕಾರ ಮಾಡಿದಾಗ ಮಾತ್ರ, ನೀರಾವರಿ ಯೋಜನೆಗಳಿಗೆ ಹಣವನ್ನು ಕೊಡಲು ಸಾಧ್ಯವಾಗುತ್ತದೆ. ಯಾವುದೇ ಯೋಜನೆ ಮುಗಿಯಬೇಕಾದರೆ ಹಣವನ್ನು ಕೊಡಲು ಸಾಧ್ಯವಾಗುತ್ತದೆ. ಯಾವುದೇ ಯೋಜನೆ ಮುಗಿಯಬೇಕಾದರೆ ಹಣವನ್ನು ಕೊಟ್ಟರೆ ಮಾತ್ರ ಯಶಸ್ವಿಯಾಗಿ ಆಗುತ್ತದೆ ಎನ್ನತಕ್ಕದ್ದು ತಪ್ಪು. ಕೊಟ್ಟ ಹಣವು ಸಮರ್ಪಕವಾಗಿ ವಿನಿಯೋಗವಾಗುತ್ತಿದೆಯೇ ಎಂಬ ಬಗ್ಗೆ ಸಹ ಸರ್ಕಾರ ನೋಡಬೇಕಾಗುತ್ತದೆ. ಸಿಬ್ಬಂದಿಯ ಕೊರತೆ ಇರಬಹುದು, ಸಿಬ್ಬಂದಿಯು ಸರಿಯಾಗಿ ಕೆಲಸ ಮಾಡುತ್ತಿದ್ದಾರೋ ಅಥವಾ ಇಲ್ಲವೋ ಎಂಬ ಬಗ್ಗೆ ಅತ್ಯಂತ ಕಾಳಜಿಯಿಂದ ಮಂತ್ರಿಗಳಾಗಲಿ,

ಅಧಿಕಾರಿಗಳಾಗಲಿ, ಸಚಿವಾಲಯದಲ್ಲಿರುವ ಹಿರಿಯ ಅಧಿಕಾರಿಗಳಾಗಲಿ ಯೋಜನೆಯ ಹತ್ತಿರ ಇದ್ದುಕೊಂಡು ಅಲ್ಲಿರುವ ಅನೇಕ ಸಮಸ್ಯೆಗಳನ್ನು ಬಿಡಿಸಿದಾಗ ಮಾತ್ರ, ಆ ಯೋಜನೆಗಳು ಕಾರ್ಯಗತವಾಗುತ್ತವೆ. ಆದರೆ ದುರಾದೃಷ್ಟವಶಾತ್ ಇಂದು ಯಾವುದೇ ಯೋಜನೆಯ ಬಗ್ಗೆ ಬೆಂಗಳೂರಿಗೆ ಕಡತ ಬರುತ್ತದೆ, ಅದು ಬಂದು ಒಪ್ಪಿಗೆ ಪಡೆದು ಯೋಜನೆಯ ಸ್ಥಳಕ್ಕೆ ವಾಪಸ್ ಹೋಗಬೇಕಾದರೆ ಕನಿಷ್ಟ ಆರುತಿಂಗಳು ಆಗುತ್ತದೆ. ಆದರೆ ಇಲ್ಲಿರುವ ಕಾರ್ಯದರ್ಶಿಯವರಾಗಲಿ, ಉಪಕಾರ್ಯದರ್ಶಿಯವರಾಗಲಿ, ಅಧೀನ ಕಾರ್ಯದರ್ಶಿಯವರಾಗಲಿ ಮಂತ್ರಿಗಳೊಂದಿಗೆ ಯೋಜನಾ ಸ್ಥಳಕ್ಕೆ ಹೋಗಿ, ಮಂತ್ರಿಗಳು ಪ್ರತಿಯೊಂದು ಕೆನಾಲಗಳನ್ನು ನೋಡಿ, ಪರಿಶೀಲನೆ ಮಾಡಿ ಅಲ್ಲಿರುವ ಸಮಸ್ಯೆಗಳನ್ನು ತ್ವರಿತಗತಿಯಲ್ಲಿ ಬಗಹರಿಸಿದ್ದೇ ಆದರೆ ಏಳು ವರ್ಷ ಆಗತಕ್ಕ ಯೋಜನೆಗಳು ಶೀಘ್ರವಾಗಲು ಸಾಧ್ಯವಾಗುತ್ತದೆ. ಆ ದಿಸೆಯಲ್ಲಿ ಸರ್ಕಾರ ಪ್ರಯತ್ನ ಮಾಡಬೇಕು. ಅನಂತರ ಯೋಜನಾ ಕೆಲಸಕ್ಕೆ ಕೊಡಬೇಕಾಗಿರುವ ಎಲ್.ಓ.ಸಿ. ಗಳನ್ನು ಪ್ರತಿತಿಂಗಳು ಕೊಡುವುದಿಲ್ಲ. ಎರಡುಮೂರು ತಿಂಗಳು, ನಾಲ್ಕು ತಿಂಗಳಿಗೊಮ್ಮೆ ಎಲ್.ಓ.ಸಿ ಕೊಡುವ ಪದ್ಧತಿ ಇದೆ. ಈ ಪದ್ಧತಿ ಹೋಗಿ ಯೋಜನೆಗೆ ಬೇಕಾಗಿರುವ ಎಲ್.ಓ.ಸಿ. ಯನ್ನು ಪ್ರತಿತಿಂಗಳು ಕೊಟ್ಟು ಅವರಿಂದ ನಿರೀಕ್ಷೆ ಮಾಡಿದಾಗ, ಹೊಂದಾಣಿಕೆಯಿಂದ ಕೆಲಸವನ್ನು ಮಾಡಲು ಸಾಧ್ಯವಾಗುತ್ತದೆ. ನೀರಾವರಿ ಯೋಜನೆಯ ಕೆಲಸದಲ್ಲಿ ಸಿಬ್ಬಂದಿಯ ಕೊರತೆಯಾಗದಂತೆ ಸರ್ಕಾರ ನೋಡಿಕೊಳ್ಳಬೇಕು. ಹಾಗಿದ್ದರೆ ಮಾತ್ರ ಮೂರು ವರ್ಷದಲ್ಲಿ ಕೃಷ್ಣಮೇಲ್ದಂಡೆ ಯೋಜನೆಯನ್ನು ಮುಗಿಸಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಇದು ಕೇವಲ ಬಾಯಿಮಾತಿನಲ್ಲಿ ಉಳಿಯುತ್ತದೆಯೇ ವಿನಹ ಯೋಜನೆ ರಾಯಗತಗೊಳಿಸಲು ಸಾಧ್ಯ ಕೃಷ್ಣಾ ಮೇಲ್ದಂಡೆ ಯೋಜನೆ, ಬಹುಶಃ ಕರ್ನಾಟಕ ರಾಜ್ಯದೊಳಗೆ ಸುಮಾರು ಶೇಕಡ 60ರಷ್ಟು ಇರತಕ್ಕಂತಹ ಯೋಜನೆ ಇದು, ಘಟಪ್ರಭಾ ಇರಬಹುದು, ಹಿಡ್ಕಲ್ ಡ್ಯಾಮ್ ಇರಬಹುದು, ಮುಲ್ಲಾಮಾರಿಥ ಅಥವಾ ಹಿರೇಹಳ್ಳ ಇರಬಹುದು, ಮಸ್ಕಿನಾಲ ಇರಬಹುದು, ಈ ಎಲ್ಲಾ ಯೋಜನೆಗಳಿಂದ ಸುಮಾರು 30 ಲಕ್ಷ ಹೆಕ್ಟೇರ್ ಗಳಷ್ಟು ಪ್ರದೇಶ ನೀರಾವರಿಯಾಗಲಿದೆ. ಆ ದೃಷ್ಟಿಯಿಂದ ಇವತ್ತು ಆ ಕೃಷ್ಣಾ ಮೇಲ್ದಂಡೆ ಯೋಜನೆಗೆ ಬಹಳ ನೆಚ್ಚಿನ ರೀತಿಯಿಂದ ಹಣವನ್ನು ಒದಗಿಸಿ ಬಹುಶಃ ತಾವು ಬಹಳ ಯುದ್ಧೋಪಾದಿಯಲ್ಲಿ ಮಾಡಲೇಬೇಕು. ನಮ್ಮನೆರೆಯ ರಾಜ್ಯವಾದ ಆಂಧ್ರಪ್ರದೇಶದ ಸರ್ಕಾರದವರು ಮಾಡಿರತಕ್ಕ ಅನೇಕ ಕುಹಕ ವಿಚಾರಗಳನ್ನು ನಾವು ಈ ಸದನದಲ್ಲಿ ಹಿಂದೆ ಪ್ರಸ್ತಾಪ ಮಾಡಿದ್ದೇವೆ. ನಾನು ಮತ್ತೆ ಅದೇ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಆದರೆ ಒಂದು ಮಾತು ಏನು ಎಂದು ಹೇಳಿದರೆ, ಇವತ್ತು ಬೇರೆ ರಾಜ್ಯದವರನ್ನು ನಿಂದನೆ ಮಾಡುವುದಕ್ಕಿಂತಲೂ ನಮ್ಮ ರಾಜ್ಯದಲ್ಲಿರತಕ್ಕಂತಹ ನಮ್ಮ ವ್ಯವಸ್ಥೆ ಬಗ್ಗೆ ನಾವು ಹೆಚ್ಚು ಚಿಂತನೆ ಮಾಡುವುದು ಬಹಳ ಒಳ್ಳೆಯದೆಂದು ನನಗನಿಸುತ್ತಿದೆ. ಆ ದೃಷ್ಟಿಯನ್ನಿಟ್ಟು ಕೊಂಡು ನೋಡಿದಾಗ ಇವತ್ತು ನಾವು ಆ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಮುಗಿಸುವುದಕ್ಕೆ ಬಹಳ ಹೆಚ್ಚಿನದಾದ ಒಂದು ಕಾಳಜಿಯನ್ನು ವಹಿಸಿ, ಬಹುಶಃ ಇನ್ನು ಮೂರು ವರ್ಷಗೊಳಗಾಗಿ 734 ಟಿ.ಎಂ.ಸಿ. ನೀರು ಉಪಯೋಗ ಮಾಡಿಕೊಳ್ಳಬೇಕು. ಇವತ್ತು ಸುಮಾರು 2,690 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಸುಮಾರು 8 ಲಕ್ಷ 31 ಸಾವಿರ ಹೆಕ್ಟೇರ್ ಗಳಷ್ಟು ಪ್ರದೇಶವನ್ನು ನಾವು ನೀರಾವರಿ ಮಾಡಿದ್ದೇವೆ. ಬಹುಶಃ ಇನ್ನೂ 7,608 ಖರ್ಚು ಮಾಡಿದರೆ, ಇನ್ನೂ ಕನಿಷ್ಟ 8 ಲಕ್ಷ 36 ಸಾವಿರ

ಹೆಕ್ಟೇರುಗಳಷ್ಟು ಪ್ರದೇಶ ನೀರಾವರಿಯಾಗಬೇಕಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಎಲ್ಲಾ ಯೋಜನೆಗಳನ್ನೂ ಸೇರಿಸಿ ನಾನು ಈ ಅಂಕಿ ಅಂಶಗಳನ್ನು ಹೇಳುತ್ತಿದ್ದೇನೆ. ಆ ದೃಷ್ಟಿಯಿಂದ ಇವತ್ತು ಆ ಎಲ್ಲಾ ಯೋಜನೆಗಳ ಮೂಲಕ ನೀರಾವರಿ ಪ್ರದೇಶಗಳಾಗಬೇಕು ಅಂದರೆ ಅದಕ್ಕೆ ದುಡ್ಡಿನ ಕೊರತೆಯಾಗದಂತೆ ನೋಡಿಕೊಳ್ಳಬೇಕು. ಒಳ್ಳೆಯ ರೀತಿಯಿಂದ ಕೆಲಸ ಕಾರ್ಯಗಳು ನಡೆಯುವಂತೆ ಮಾಡುವುದಕ್ಕೆ ವಿನಂತಿಸುತ್ತಾ, ಈ ಸಂದರ್ಭದಲ್ಲಿ ಇಷ್ಟು ಹೇಳಿ, ನೀರಾವರಿ ಬಗ್ಗೆ ಸರ್ಕಾರ ಹೆಚ್ಚಿನ ಆಸಕ್ತಿ ವಹಿಸಿ, ಹೆಚ್ಚಿನ ರೀತಿಯಿಂದ ಕೆಲಸ ಮಾಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ.ವಿ. ಶ್ರೀರಾಮುರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಶ್ರೀ ಹೆಚ್. ಡಿ. ಬಸವರಾಜ್ : ಮಾನ್ಯ ಉಪಾಧ್ಯಕ್ಷರೇ, ಇವತ್ತಿನ ಸದನದ ಅಜೆಂಡಾದಲ್ಲಿ ಅರ್ಧ ಗಂಟೆ ಕಾಲಾವಧಿ ಚರ್ಚೆ ಮಾಡುವ ವಿಷಯಗಳಿವೆ. ಈ ವಿಷಯಗಳು ಇವತ್ತು ಪ್ರಸ್ತಾಪ ಮಾಡಲು ಆಗುತ್ತದೆಯೇ ಇಲ್ಲವೋ ಎಂಬುದನ್ನು ತಾವು ನಮಗೆ ತಿಳಿಸಬೇಕು. ಏಕೆಂದರೆ ಮೊನ್ನೆ ದಿವಸ ಕೂಡ ನಾವು ಈ ವಿಷಯ ಪ್ರಸ್ತಾಪ ಮಾಡಲು ಕಾದು ಕುಳಿತಿದ್ದೆವು, ಆದರೆ ಏನೋ ಒಂದು ಅನಿವಾರ್ಯ ಕಾರಣಗಳಿಂದ ಅಂದು ಅದು ಸದನದಲ್ಲಿ ಪ್ರಸ್ತಾಪಕ್ಕೆ ಬರಲಿಲ್ಲ. ಈಗ ಆಗಲೇ ಸಮಯ ನಾಲ್ಕು ಗಂಟೆ ಆಯಿತು. ಅರ್ಧ ಗಂಟೆ ಕಾಲಾವಧಿಯಲ್ಲಿ ಪ್ರಸ್ತಾಪ ಮಾಡಬೇಕೆಂದಿರುವ ವಿಷಯಗಳ ಬಗ್ಗೆ ಮಾತನಾಡಲು ನಾವಿಲ್ಲಿ ಮೂವರು ಸದಸ್ಯರು ಇದ್ದೇವೆ.

ಉಪಾಧ್ಯಕ್ಷರು : ನಾವು ನೀವು ಎಲ್ಲರೂ ಕೂಡಿಯೇ ಈ ಕೆಲಸವನ್ನು ನಡೆಸಿಕೊಂಡು ಹೋಗಬೇಕು. ಈಗ ಮಾನ್ಯ ಸದಸ್ಯರುಗಳು ಆಡಳಿತ ಮತ್ತು ವಿರೋಧ-ಪಕ್ಷ, ಎರಡೂ ಕಡೆಗಳಿಂದಲೂ ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಎಲ್ಲಾ ಕೆಲಸವೂ ನಡೆಯಬೇಕು. ಈಗ ಮೂವರು ಸದಸ್ಯರು ವಂದನಾ ನಿರ್ಣಯದ ಚರ್ಚೆಯ ಮೇಲೆ ಮಾತನಾಡಿದ ನಂತರ ಅರ್ಧ ಗಂಟೆ ಕಾಲಾವಧಿ ಚರ್ಚೆ ವಿಷಯ ಕೈಗೆತ್ತಿಕೊಳ್ಳೋಣ.

ಶ್ರೀ ಹೆಚ್.ಡಿ. ಬಸವರಾಜ್ :ಮಾನ್ಯ ಉಪಾಧ್ಯಕ್ಷರೇ, ಇವತ್ತು ಏನಾಗಿದೆ

ಉಪಾಧ್ಯಕ್ಷರು : ಈ ರೀತಿ ನಾವು ನೀವು ಚರ್ಚೆ ಮಾಡುವುದರಲ್ಲೇ 15 ನಿಮಿಷ ವ್ಯಯವಾಗುತ್ತದೆ. ಸದ್ಯಕ್ಕೆ ಆ ವಿಷಯ ಚರ್ಚೆಗೆತ್ತಿಕೊಳ್ಳಲು ಸಾಧ್ಯವಾಗುವುದಿಲ್ಲ.

ಶ್ರೀ ಹೆಚ್. ಡಿ. ಬಸವರಾಜ್ : ತಮ್ಮನ್ನು ನಾನು ಆ ವಿಷಯದ ಬಗ್ಗೆಯೇ ಕೇಳುತ್ತಿದ್ದೇನೆ, ಅದನ್ನು ತಾವು ಕ್ಲಾರಿಫಿಕೇಷನ್ ಎಂದು ತಿಳಿದುಕೊಳ್ಳಬೇಕಾಗಿದೆ.

ಉಪಾಧ್ಯಕ್ಷರು : ಇವತ್ತು ಸಾಧ್ಯವಾಗದಿದ್ದರೆ ನಾಳೆ ಅರ್ಧ ಗಂಟೆ ಚರ್ಚೆ ಕೈಗೆತ್ತಿಕೊಳ್ಳೋಣ.

ಶ್ರೀ ಹೆಚ್. ಡಿ. ಬಸವರಾಜ್ : ಈಗಾಗಲೇ ಇದು ಒಂದು ದಿವಸದಿಂದ ಇನ್ನೊಂದು ದಿವಸಕ್ಕೆ ಬಂದಿದೆ.

ಉಪಾಧ್ಯಕ್ಷರು : ಈಗ ನಡೆಯುತ್ತಿರುವ ಚರ್ಚೆಯನ್ನು ಈಗಲೇ ನಿಲ್ಲಿಸಬೇಕೆನ್ನುವಿರೋ ತಾವೆಲ್ಲಾ ಮಾತನಾಡಿದ್ದೀರಿ, ಬೇರೆಯವರನ್ನು ನಾನೀಗ ಮಾತನಾಡಲು ಕರೆದಿದ್ದೇನೆ. ಈಗ ಅವರು ಮಾತನಾಡಲಿ.

ಶ್ರೀ ಹೆಚ್. ಡಿ. ಬಸವರಾಜ್ : ಅವರು ಮಾತನಾಡಿದ್ದುದು ಮುಗಿಸಿದ ಮೇಲಾದರೂ ತಾವು ಅರ್ಧ ಗಂಟೆ ಕಾಲಾವಧಿ ಚರ್ಚೆಯನ್ನು ಕೈಗೆತ್ತಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು : ಆ ವಿಷಯವನ್ನು ಕೊನೆಗೆ ತೆಗೆದುಕೊಳ್ಳೋಣ, ಆಗದಿದ್ದರೆ ನಾಳೆ ತೆಗೆದುಕೊಳ್ಳೋಣ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಉಪಾಧ್ಯಕ್ಷರೇ, ಅದು ಅಜೆಂಡಾದಲ್ಲಿ ಬಂದಿದೆ, ಆದ್ದರಿಂದ ತಾವು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು : ನಾವು ಈ ರೀತಿಯಾಗಿ ಚರ್ಚೆ ಮಾಡುತ್ತಾ ಇದ್ದರೆ ಇಲ್ಲೇ 10 ನಿಮಿಷ ಸಮಯ ವ್ಯಯವಾಗುತ್ತದೆ.

ಶ್ರೀ ಹೆಚ್.ಡಿ. ಬಸವರಾಜ್ : ಇದಾದರ ಮೇಲಾದರೂ ನಮಗೆ ವಿಷಯ ಪ್ರಸ್ತಾಪಕ್ಕೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು : ತಮ್ಮ ಪಕ್ಷದ ಸದಸ್ಯರೇ ಆದಂತಹ ಶ್ರೀ ಆಯನೂರು ಮಂಜುನಾಥರವರೂ ಸಹ ನಾನು ಮಾತನಾಡಬೇಕೆಂದು ಕೈ ಎತ್ತಿದ್ದಾರೆ. ಅವರು ಮಾತನಾಡಿದ್ದುದು ಮುಗಿದ ಮೇಲೆ ತಮ್ಮ ವಿಷಯ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಹೆಚ್. ಡಿ. ಬಸವರಾಜ್ : ಮಾನ್ಯ ಉಪಾಧ್ಯಕ್ಷರೇ, ನಾನು ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿಪಾಲ್ಗೊಳ್ಳಬೇಕು ಎಂದು ಕೇಳುತ್ತಿಲ್ಲ. ಪ್ರಶ್ನೋತ್ತರ ವೇಳೆಯಲ್ಲಿ ಉತ್ತರ ನೀಡಲಾದ ಚುಕ್ಕೆ ಗುರುತಿನ ಪ್ರಶ್ನೆಯೊಂದರ ಬಗ್ಗೆ ಅರ್ಧ ಗಂಟೆ ಚರ್ಚೆ ನಿಗದಿಪಡಿಸಿದ್ದು ಅದನ್ನು ತೆಗೆದುಕೊಳ್ಳಲು ನಾನು ತಮ್ಮನ್ನು ಕೋರುತ್ತಿದ್ದೇನೆ.

ಉಪಾಧ್ಯಕ್ಷರು : ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಕಾಂಗ್ರೆಸನವರು 185 ನಿಮಿಷ ಮಾತನಾಡಿದ್ದಾರೆ, ಬಿ.ಜೆ.ಪಿ. ಯವರು 204 ನಿಮಿಷ ಮಾತನಾಡಿದ್ದಾರೆ, ಜನತಾದಳದವರು ಕೇವಲ 38 ನಿಮಿಷ ಮಾತನಾಡಿದ್ದಾರೆ. ನಾನು ಎಲ್ಲರಿಗೂ ಮಾತನಾಡಲು ಅವಕಾಶ ಮಾಡಿಕೊಡಬೇಕು. ಬಿಜೆಪಿ ಯವರು ಬಹಳಷ್ಟು ಮಾತನಾಡಿದ್ದೀರಿ.

ಶ್ರೀ ಆಯನೂರು ಮಂಜುನಾಥ್ : ಮಾನ್ಯ ಚಿಮ್ಮನಕಟ್ಟಿಯವರು ಮಾತನಾಡಿದ ನಂತರ ನನಗೆ ಮಾತನಾಡಲು ಅವಕಾಶ ಸಿಗುವುದೆಂದು ನಿರೀಕ್ಷಿಸಿದ್ದೆ. ಆದರೆ ಅದರಿಂದ ನಾನು ವಂಚಿತನಾದೆ. ಸುಮಾರು ಒಂದೂವರೆ ವರ್ಷದಿಂದ ನನಗೆ ಇಲ್ಲಿ ಮಾತನಾಡಲು ಸಾಧ್ಯವಾಗದೇ ನಾನು ಬಾಯಿ ಕಟ್ಟಿಕೊಂಡು ಇದ್ದೇನೆ.

ಉಪಾಧ್ಯಕ್ಷರು : ಈಗ ಮಾನ್ಯ ಶ್ರೀರಾಮರೆಡ್ಡಿಯವರನ್ನು ಮಾತನಾಡಲು ಕರೆದಿದ್ದೇನೆ. ಈಗ ಅವರು ಮಾತನಾಡಲು ಅವಕಾಶ ಮಾಡಿಕೊಡಿ. ನಂತರ ತಾವು ಮಾತನಾಡಿ.

ಶ್ರೀ ವೈ. ರಾಮಕೃಷ್ಣ : ಆಯನೂರು ಮಂಜುನಾಥನವರು ಮಾತನಾಡಿದ ನಂತರ ನನಗೆ ಮಾತನಾಡಲು ಅವಕಾಶ ಕೊಡಿ.

ಉಪಾಧ್ಯಕ್ಷರು : ಮಾನ್ಯ ಸದಸ್ಯರುಗಳು ಪದೇ ಪದೇ ಈ ರೀತಿ ಮಾತನಾಡಿದರೆ ನಾನು ಏನು ಮಾಡುವುದು? ಈ ಸದನವನ್ನು ನಾನು ಹೀಗೆ ನಡೆಸಲಿಕ್ಕಾಗುತ್ತದೆ? ಅವರಾದ ಮೇಲೆ ನೀವು ಏಳುತ್ತೀರಿ, ನೀವಾದ ಮೇಲೆ ಅವರು ಏಳುತ್ತಾರೆ. ಹೀಗಾದರೆ ಇಲ್ಲಿ ನಾನು ನನ್ನ ಕಾರ್ಯ ನಿರ್ವಹಿಸುವುದು ಹೇಗೆ? ತಾವು ಈ ರೀತಿಯಾಗಿ ವರ್ತಿಸಿದಲ್ಲಿ ನನಗಿಲ್ಲಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಕೊನೆಗೆ ಸಮಯ ಸಿಕ್ಕಿರೆ ಮಾತನಾಡಲು ಅವಕಾಶ ಕೊಡುತ್ತೇನೆ, ಇಲ್ಲದಿದ್ದರೆ ಆ ವಿಷಯವನ್ನು ನಾಳೆಗೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಹೆಚ್. ಡಿ. ಬಸವರಾಜ್ : ಅವರುಗಳು ಮಾತನಾಡಿದ ನಂತರವೇ ನನಗೆ ಮಾತನಾಡಲು ಅವಕಾಶ ಕೊಡಿ ಎಂದು ನಾನು ಕೇಳುತ್ತಿದ್ದೇನೆ.

ಉಪಾಧ್ಯಕ್ಷರು : ನಾನೂ ಅದನ್ನೇ ಹೇಳುತ್ತಿದ್ದೇನೆ. ಮೂವರು ಸದಸ್ಯರು ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಿ ಸಮಯ ಉಳಿದರೆ ತಾವೂ ಮಾತನಾಡಿ, ಇಲ್ಲಿದಿದ್ದರೆ ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ.

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಉಪಾಧ್ಯಕ್ಷರೇ, ನನ್ನ ಮುಂದೆ ಈ ಸರ್ಕಾರ ಬಂದ ಮೇಲೆ ಈ ಸದನವನ್ನು ಉದ್ದೇಶಿಸಿ ಸನ್ಮಾನ್ಯ ರಾಜ್ಯಪಾಲರು ಮಾಡಿರತಕ್ಕ ನಾಲ್ಕು ಭಾಷಣಗಳ ಪತ್ರಿಗಳು ಇವೆ. ನಾನು ಈ ಸಂದರ್ಭದಲ್ಲಿ ಸನ್ಮಾನ್ಯ ರಾಜ್ಯಪಾಲರು ಮಾಡಿರತಕ್ಕ ಭಾಷಣಗಳನ್ನು ಸ್ವಲ್ಪ ಗಂಭೀರವಾಗಿ ಅಭ್ಯಾಸ ಮಾಡಿದ್ದೇನೆ. ಆದರೆ ಈ ನಾಲ್ಕು ಭಾಷಣಗಳಲ್ಲಿ ಕೂಡ ಮೂಲಭೂತವಾದಂತಹ ಯಾವುದೇ ಒಂದು ವ್ಯತ್ಯಾಸ ಇಲ್ಲ. ಹಿಂದಿನ ಪ್ರಾರಂಭದ ಭಾಷಣದಲ್ಲಿ ಹೇಗೆ ಪ್ರಾರಂಭ ಮಾಡಿದ್ದರೋ, ಇವತ್ತು 11ನೇ ಫೆಬ್ರವರಿ 1997ರಂದು ಮಾಡಿದ ಭಾಷಣವೂ ಕೂಡ ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿದೆ. ನನ್ನ ಅಭಿಪ್ರಾಯದಲ್ಲಿ ರಾಜ್ಯಪಾಲರ ಭಾಷಣ ಅಂದರೆ ಯಾವುದೇ ಒಂದು ಸರ್ಕಾರದ ಒಂದು ಕಾರ್ಯಕ್ರಮ, ಒಂದು ಧ್ಯೇಯ ಉದ್ದೇಶಗಳನ್ನು ಪ್ರಸ್ತುತ ಪಡಿಸತಕ್ಕಂತಹ ಒಂದು ಭಾಷಣ. ಆದರೆ ಕಳೆದ ನಾಲ್ಕು ಬಾರಿಯಿದಂಲೂ ಮಾನ್ಯ ರಾಜ್ಯಪಾಲರು ಮಾಡಿರತಕ್ಕಂತಹ ಭಾಷಣಗಳಲ್ಲಿ ಮೂಲಭೂತವಾದಂತಹ ವ್ಯತ್ಯಾಸ ಒಂದೂ ಇಲ್ಲದೇ, ಹೇಳಿದ್ದನ್ನೇ ಹೇಳಿರತಕ್ಕಂತಹ, ಅಸಂಬದ್ಧವಾದಂತಹ, ಅಪ್ರಯೋಜಕವಾದಂತಹ, ಸುಳ್ಳಿನ ಕತೆ ಇದು. ಇದರಲ್ಲಿ ಬೇರೇನೂ ಇಲ್ಲ. ಆದಷ್ಟೆ ಎಲ್ಲಾ ರಾಜ್ಯಪಾಲರ ಭಾಷಣಗಳಲ್ಲೂ ಒಂದೇ ರೀತಿ ಮಾಡುವುದಾದರೆ, ನಾಲ್ಕು ಜನ ಈ ಸದನದಲ್ಲಿ ರಾಜ್ಯಪಾಲರಿಂದ ಭಾಷಣ ಮಾಡಿಸತಕ್ಕಂತಹ ಅವಶ್ಯಕತೆ ಇಲ್ಲ. ಐದು ವರ್ಷದಲ್ಲಿ ಒಂದೇ ಸಲ ಭಾಷಣ ಮಾಡಿಸಿಬಿಟ್ಟರೆ ಸಾಕಾಗುತ್ತದೆ. ನಾಲ್ಕು ಸಲ ಮಾಡಿಸಬೇಕಾದಂತಹ ಅವಶ್ಯಕತೆ ಇಲ್ಲ. ಆದರೂ ಇದರ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ನಾವು ಹೇಳಲೇಬೇಕಾಗುತ್ತದೆ. ಅವುಗಳನ್ನು ಹೇಳತಕ್ಕಂತಹ ಸಂದರ್ಭದಲ್ಲಿ ಈ ಒಂದು ಈ ರಾಜ್ಯಪಾಲರ ಭಾಷಣದಲ್ಲಿ ಎರಡನೆ ಪುಟದ ಐದನೇ ಪ್ಯಾರಾದಲ್ಲಿ ಬಹಳ ಮುಖ್ಯವಾದಂತಹ ಪ್ರಸ್ತಾಪವನ್ನು ಇಲ್ಲಿ ಮಾಡಿದ್ದಾರೆ. ಇದರ

ಬಗ್ಗೆ ಇಲ್ಲಿ ಚರ್ಚೆ ಮಾಡಬಹುದೇ? ಮಾಡಬಾರದೇ? ಎನ್ನತಕ್ಕ ಜಿಜ್ಞಾಸೆ ನನ್ನಲ್ಲೇ ಕಾಡುತ್ತಿದೆ. ಏಕೆ ಅಂತ ಹೇಳಿದರೆ ಇದು ಬಹಳ ಮುಖ್ಯವಾದಂತಹದು. ರಾಜ್ಯಪಾಲರ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ.

"ಈ ವರ್ಷ ಭಾರತೀಯರಿಗೆಲ್ಲ, ಅವರು ಎಲ್ಲಿಯೇ ಇದ್ದರೂ, ವಿಶೇಷ ಮಹತ್ವದ ವರ್ಷವಾಗಿದೆ ಎಂಬುದು ಮಾನ್ಯ ಸದಸ್ಯರಿಗೆ ತಿಳಿದೇ ಇದೆ. 50 ವರ್ಷಗಳ ಹಿಂದೆ ಭಾರತವು ವಿದೇಶಿಯರ ಆಳ್ವಿಕೆಯಿಂದ ಮುಕ್ತವಾಗಿ ಸ್ವಾತಂತ್ರ್ಯ ಪಡೆಯಿತು. ಆಗಿನಿಂದ ನಮ್ಮ ರಾಷ್ಟ್ರವು ಅನೇಕ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ"

ಇಲ್ಲಿಂದ ಪ್ರಾರಂಭವಾಗಿ ಮುಂದೆ ಈ ರೀತಿ ಹೇಳಿದ್ದಾರೆ.

"ನಮ್ಮನ್ನು ಮುಂದಿನ ಶತಮಾನಕ್ಕೆ ಕೊಂಡೊಯ್ಯುವ 9ನೇ ಪಂಚವಾರ್ಷಿಕ ಯೋಜನೆಯ ಪ್ರಾರಂಭದ ವರ್ಷವಾಗಿದೆ"

ಅಂತ ಹೇಳಿ ಇಲ್ಲಿಗೆ ಮುಕ್ತಾಯ ಮಾಡುತ್ತಾರೆ. ಈ ಸದನದಲ್ಲಿ ಈ ವಿಷಯದ ಬಗ್ಗೆ ಚರ್ಚೆ ಮಾಡಲಿಕ್ಕೆ ಸಾಧ್ಯತೆ ಇದೆಯೆ? ಇಲ್ಲವೇ? ಎಂಬುದು ನನಗೆ ಇರತಕ್ಕಂತಹ ಒಂದು ಗುಮಾನಿ. ಆದರೆ ರಾಜ್ಯಪಾಲರ ಭಾಷಣದಲ್ಲಿ ಅದು ಅಡಕವಾಗಿರುವುದರಿಂದ ನಾವು ಅದರ ಬಗ್ಗೆ ಚರ್ಚೆ ಮಾಡಲೇಬೇಕಾಗುತ್ತದೆ. ಇನ್ನೊಂದು ಕಡೆ ರಾಜ್ಯಪಾಲರ ಭಾಷಣದಲ್ಲಿ ನಾವು ಹೆಮ್ಮೆಪಡಬೇಕಾದಂತಹ ವರ್ಷ ಎಂದು ಸರ್ಕಾರ ಹೇಳುತ್ತದೆ. ಸನ್ಮಾನ್ಯ ಉಪಾಧ್ಯಕ್ಷರೇ, ಯಾವ ಕಾರಣಕ್ಕೋಸ್ಕರ ನಾವು ಹೆಮ್ಮೆ ಪಡಬೇಕು? ನಮ್ಮ ದೇಶ 47 ವರ್ಷಗಳ ಹಿಂದೆ ಬ್ರಿಟಿಷರ ಆಳ್ವಿಕೆಯಲ್ಲಿದ್ದರಿಂದ ಸಂದರ್ಭದಲ್ಲಿ ಅವರನ್ನು ಈ ದೇಶದಿಂದ ಓಡಿಸಿ ನಮ್ಮದೇ ಸರ್ಕಾರವನ್ನು ಪಡೆಯಬೇಕು, ನಮ್ಮದೇ ಸರ್ಕಾರ ಪಡೆದರೆ, ನಮ್ಮದೇಶದ ಸರ್ವತೋಮುಖ ಅಭಿವೃದ್ಧಿಯಾಗುತ್ತದೆ, ಎಲ್ಲರಿಗೂ ಉದ್ಯೋಗ ಸಿಗುತ್ತದೆ. ಬಡತನ ಹೋಗುತ್ತದೆ, ಉಳುವವನಿಗೆ ಭೂಮಿ ಸಿಗುತ್ತದೆ, ಎಲ್ಲರಿಗೂ ಆರೋಗ್ಯ ಸಿಗುತ್ತದೆ, ವಸತಿ ಸಿಗುತ್ತದೆ, ಬಟ್ಟೆ ಸಿಗುತ್ತದೆ, ಎಲ್ಲರಿಗೂ ವಿದ್ಯಾಭ್ಯಾಸ ಸಿಗುತ್ತದೆ ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ ನಾವು ಬ್ರಿಟಿಷರ ವಿರುದ್ಧ ಹೋರಾಟ ಮಾಡಿದೆವು. ಆದರೆ ಅವತ್ತು ಕಂಡಂತಹ ಕನಸು ಇವತ್ತಿಗೂ ಕೂಡ ನನಸಾಗಿಲ್ಲ. ಆದರೆ, ಎಂಟು ಪಂಚವಾರ್ಷಿಕ ಯೋಜನೆಗಳನ್ನು ದಾಟಿ ಒಂಭತ್ತನೇ ಪಂಚವಾರ್ಷಿಕ ಯೋಜನೆಗೆ ನಾವು ಹೋಗುತ್ತಿದ್ದೇವೆ. ಒಂಭತ್ತನೇ ಪಂಚವಾರ್ಷಿಕ ಯೋಜನೆಗೆ ಯಾವ ಹಂತದಲ್ಲಿ ಹೋಗುತ್ತಿದ್ದೇವೆ? 21 ನೇ ಶತಮಾನಕ್ಕೆ ನಾವು ನಮ್ಮ ದೇಶದ ಎಂಟು ಕೋಟಿ ವಿದ್ಯಾವಂತ ನಿರುದ್ಯೋಗಿಗಳನ್ನು ತೆಗೆದುಕೊಂಡು ಹೋಗುತ್ತಿದ್ದೇವೆ. ಒಂದು ಸೆಕೆಂಡಿಗೆ ಜಗತ್ತಿನಲ್ಲಿ ಸಾಯತಕ್ಕಂತಹ ಮೂರುಸಾವಿರ ಮಕ್ಕಳ ಸಂಖ್ಯೆ, ಮೂರನೇ ಎರಡು ಭಾಗ ಸಾಯುವ ಮಕ್ಕಳನ್ನು ತೆಗೆದುಕೊಂಡು ನಾವು 21ನೇ ಶತಮಾನಕ್ಕೆ ಹೋಗಲಿದ್ದೇವೆ. ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ 100ಕ್ಕೆ 40 ಜನ ಬಡತನ ರೇಖೆಯಿಂದ ಕೆಳಗೆ ಜೀವನ ಮಾಡತಕ್ಕಂತಹ ಜನರನ್ನು ತೆಗೆದುಕೊಂಡು 21ನೇ ಶತಮಾನಕ್ಕೆ ಹೋಗುತ್ತಿದ್ದೇವೆ. ಇಡೀ ಜಗತ್ತಿನಲ್ಲಿ ತಮ್ಮ ಶರೀರಗಳನ್ನು ಮಾರಾಟ ಮಾಡಿಕೊಂಡು ಜೀವನ ಮಾಡತಕ್ಕಂತಹ ಜನರ ಸಂಖ್ಯೆಯಲ್ಲಿ ಅರ್ಧದಷ್ಟು ನಮ್ಮ ದೇಶದಲ್ಲಿ ಇರತಕ್ಕಂತಹ ಜನರನ್ನು ತೆಗೆದುಕೊಂಡು ನಾವು 21ನೇ ಶತಮಾನಕ್ಕೆ ಹೋಗುತ್ತಿದ್ದೇವೆ. ಕಳೆದ ನವೆಂಬರ್ ತಿಂಗಳ ಪ್ರಾರಂಭದಲ್ಲಿ

ರೋಮನಲ್ಲಿ ನಡೆದಂತಹ ಆಹಾರ ಸಮ್ಮೇಳನದಲ್ಲಿ ಕೊಟ್ಟಿರತಕ್ಕಂತಹ ಅಂಕಿ ಅಂಶಗಳ ಪ್ರಕಾರ ಜಗತ್ತಿನಲ್ಲಿ ಇವತ್ತು 30 ಮಿಲಿಯನ್ ಜನರು ಹಸಿವಿನಿಂದ ಸಾಯುತ್ತಿದ್ದಾರೆ. ಅದರಲ್ಲಿ ಒಂದುವರೆ ಮಿಲಿಯನ್ ಜನ ಭಾರತ ದೇಶದಲ್ಲಿ ಸಾಯುತ್ತಿದ್ದಾರೆಂದು ಅಂಕಿ ಅಂಶಗಳು ನಮ್ಮ ಮುಂದೆ ಇವೆ. ಇವೆಲ್ಲವನ್ನು ತೆಗೆದುಕೊಂಡು ನಾವು 21ನೇ ಶತಮಾನಕ್ಕೆ ಹೋಗಲಿದ್ದೇವೆ. ಇದಕ್ಕೋಸ್ಕರ ನಾವು ಹೆಮ್ಮೆ ಪಡಬೇಕಾ? ಇದಕ್ಕೋಸ್ಕರ ನಮ್ಮ ದೇಶದ ಲಕ್ಷಾಂತರ ಜನ, ಮಿಲಿಯನ್ ಜನ ಪ್ರಾಣ ಬಲಿ ಕೊಟ್ಟು ಸ್ವಾತಂತ್ರ್ಯ ಪಡೆಯಬೇಕಾಗಿತ್ತಾ? ನಮ್ಮ ದೇಶದ ಜನತೆ ಒಪ್ಪೊತ್ತಿನ ಊಟಕ್ಕೋಸ್ಕರ ಬೀದಿಯಲ್ಲಿ ನಿಂತು ಹೋರಾಟ ಮಾಡತಕ್ಕಂತಹ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಒಂದು ನಾಯಿಯ ಜೊತೆ ಎಂಜಲು ಎಲೆಗಾಗಿ ಫುಟ್ ಪಾತಿನಲ್ಲಿ ಇರತಕ್ಕಂತಹ ತೊಟ್ಟಿಯಲ್ಲಿ ಒಬ್ಬ ಮನುಷ್ಯ ನಾಯಿಯ ಜೊತೆ ಕುಸ್ತಿ ಮಾಡತಕ್ಕಂತಹ ಪರಿಸ್ಥಿತಿಯನ್ನು ನಾವು ಈ ದೇಶದಲ್ಲಿ ನೋಡುತ್ತಿದ್ದೇವೆ. ಅದನ್ನು ತೆಗೆದುಕೊಂಡು 20ನೇ ಶತಮಾನಕ್ಕೆ ಹೋಗಬೇಕಾ? ಇದಕ್ಕೋಸ್ಕರ ನಾವು ಹೆಮ್ಮೆ ಪಡಬೇಕಾ? ಒಂಭತ್ತನೇ ಪಂಚವಾರ್ಷಿಕ ಯೋಜನೆ ಏನನ್ನು ಹೇಳುತ್ತಿದ್ದೆ, ನಿರುದ್ಯೋಗ ಸಮಸ್ಯೆಗೆ ಪರಿಹಾರ ಇಲ್ಲ, ಅನಕ್ಷರತೆಗೆ ಪರಿಹಾರ ಇಲ್ಲ, ಕರ್ನಾಟಕ ರಾಜ್ಯಕ್ಕೆ ಉದಾಹರಣೆ ಕೊಡುವುದಾದರೆ, ಶೇಕಡ 40 ಲಕ್ಷ ಇವತ್ತು ಬಡತನ ರೇಖೆಯಿಂದ ಕೆಳಗೆ ಜೀವನ ಮಾಡತಕ್ಕಂತಹವರ ಸಂಖ್ಯೆ ಇದೆ. ಆಹಾರೋತ್ಪಾದನೆ ಕರ್ನಾಟಕ ರಾಜ್ಯದಲ್ಲಿ ಕಡಿಮೆಯಾಗುತ್ತಿದೆ. ಯಾವುದಕ್ಕೋಸ್ಕರ ಹೆಮ್ಮೆ ಪಡಬೇಕು? ಆ ಹೆಮ್ಮೆ ಪಡತಕ್ಕಂತಹ ಕಾರ್ಯಕ್ರಮವನ್ನು ಏನಾದರೂ ರಾಜ್ಯಪಾಲರ ಭಾಷಣದಲ್ಲಿ ಎಲ್ಲಿಯಾದರೂ ತೋರಿಸಿದ್ದೀರಾ? ಯಾವ ಕಾರಣಕ್ಕೋಸ್ಕರ ನಾವು ಇವತ್ತು ವಿಶೇಷವಾಗಿ 50ನೇ ವರ್ಷ ಎಂದು ಹೇಳಬೇಕಾಗಿದೆ? ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಈ ಸರ್ಕಾರ ಯಾವುದಾದರೂ ಕಾರ್ಯಕ್ರಮವನ್ನು ಇದರಲ್ಲಿ ತೋರಿಸಿದೆಯಾ? ಯಾವುದೇ ಕಾರ್ಯಕ್ರಮವನ್ನು ತೋರಿಸಿಲ್ಲ. ಅದರ ಜೊತೆಗೆ ಅದೇ ಪ್ಯಾರಾದಲ್ಲಿ ಹೇಳುತ್ತಾರೆ, ಜಾತ್ಯಾತೀತತೆ, ಕೋಮು ಸೌಹಾರ್ದ, ಸಾಮಾಜಿಕ ನ್ಯಾಯ, ಈ ಸಮಸ್ಯೆಗಳಿಗೋಸ್ಕರ ಪ್ರಸ್ತಾಪ ಮಾಡಿದ್ದಾರೆ. ಜಾತ್ಯಾತೀತತೆ ಎಂದರೆ ನನನಗೆ ಬಹಳ ತಮಾಶೆಯಾಗುತ್ತದೆ. ಮೊನ್ನೆ ನಮ್ಮ ಮಾನ್ಯ ಮುಖ್ಯ-ಮಂತ್ರಿಗಳು, ಮಾನ್ಯ ಬಿ.ಜೆ.ಪಿ. ಸದಸ್ಯರು ಕೇಳಿದ ಯಾವುದೇ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದರು, ನೀವು ಮಸೀದಿ ಕಟ್ಟುವುದಾದರೆ ನಾವು ಖಂಡಿತ ಹಣ ಕೊಡುತ್ತೇವೆಂದು ಹೇಳಿದರು. ಇವರ ಜಾತ್ಯಾತೀತತೆ ಯಾವ ಸ್ಥಿತಿಗೆ ಬಂದಿದೆ ಎಂದರೆ, ಮಸೀದಿ ಕಟ್ಟುವವರಿಗೆ, ಗುಡಿ ಕಟ್ಟುವವರಿಗೆ, ಚರ್ಚ ಕಟ್ಟುವವರಿಗೆ ದುಡ್ಡು ಕೊಟ್ಟರೆ ಜಾತ್ಯಾತೀತ ಮೌಲ್ಯಗಳನ್ನು ಈ ದೇಶದಲ್ಲಿ ನಾವು ಸ್ಥಾಪನೆ ಮಾಡಿದ ಹಾಗೆ ಆಗುತ್ತದೆ ಎಂಬ ಕಲ್ಪನೆ ಅವರಿಗೆ ಇದೆ. ಜಾತ್ಯಾತೀತತೆ ಎನ್ನತಕ್ಕಂತಹ ವ್ಯವಸ್ಥೆ ಬಹಳಮುಖ್ಯವಾದ ಒಂದು ವಿಷಯದ ಬಗ್ಗೆ ಸ್ಪಷ್ಟ ಕಲ್ಪನೆ ಇಲ್ಲ. ಯಾವುದೇ ಒಂದು ಸರ್ಕಾರ, ರಾಜ್ಯ ಯಾವುದೇ ರೀತಿಯಾಗಿ ಧಾರ್ಮಿಕ ಅಂಗಗಳಲ್ಲಿ, ವ್ಯವಹಾರಗಳಲ್ಲಿ ಅದು ಹಸ್ತಕ್ಷೇಪ ಮಾಡಬಾರದು. ಧರ್ಮನಿರಪೇಕ್ಷತೆಯಿಂದ ಇರತಕ್ಕಂತಹ ಸರ್ಕಾರದಲ್ಲಿ ಮಾತ್ರ ಜಾತ್ಯಾತೀತ ಮೌಲ್ಯಗಳನ್ನು ಸ್ಥಾಪನೆ ಮಾಡಲಿಕ್ಕೆ ಸಾಧ್ಯತೆ ಇದೆಯೇ ಹೊರತು, ಗುಡಿ ಕಟ್ಟಿಸಿ, ಮಸೀದಿ ಕಟ್ಟಿಸಿ, ಚರ್ಚ ಕಟ್ಟಿಸಿದರೆ ಜಾತ್ಯಾತೀತ ಮೌಲ್ಯಗಳನ್ನು ತರಲಿಕ್ಕೆ ಸಾಧ್ಯವಿಲ್ಲ. ಅಂತಹ ಪೊಳ್ಳು ಜಾತ್ಯತೀತ ವ್ಯವಸ್ಥೆಯನ್ನು ನಾವು ಇವತ್ತು ಈ ದೇಶದಲ್ಲಿ ನೋಡುತ್ತಿದೇದವೆ.

ಅದರ ಜೊತೆಗೆ ಸಾಮಾಜಿಕ ನ್ಯಾಯ. ಏನು ಸಾಮಾಜಿಕ ನ್ಯಾಯ ಎಂದರೆ, ಸಾಮಾಜಿಕ ನ್ಯಾಯ ಎಂದರೆ, ಸಮಾಜದಲ್ಲಿರತಕ್ಕಂತಹ ಪ್ರತಿಯೊಬ್ಬರಿಗೂ ಈ ದೇಶದ ಸಂಪತ್ತಿನಲ್ಲಿ ಸಮವಾದ ಭಾಗ ಸಿಕ್ಕಿದಾಗ ಮಾತ್ರ ಅದು ನಿಜವಾದ ಸಾಮಾಜಿಕ ನ್ಯಾಯ. ಅದು ಬಿಟ್ಟು ಬೇರೆ ಯಾವುದೇ ರೂಪದಲ್ಲಿ ಸಾಮಾಜಿಕ ನ್ಯಾಯ ತರಲಿಕ್ಕೆ ಸಾಧ್ಯವಿಲ್ಲ. ಅಂತಹ ಸಾಮಾಜಿಕ ನ್ಯಾಯ ತರುವುದಕ್ಕೆ ರಾಜ್ಯಪಾಲರ ಭಾಷಣದಲ್ಲಿ ಈ ಸರ್ಕಾರ ಏನು ಕಾರ್ಯಕ್ರಮ ಹಾಕಿದೆ ಎನ್ನುವುದು ನನ್ನ ಮೂಲಭೂತವಾದ ಪ್ರಶ್ನೆ. ಇಂತಹ ಯಾವುದೇ ವಿಷಯಗಳ ಬಗ್ಗೆ ಕಾರ್ಯಕ್ರಮ ಹಾಕದೆ, ಪ್ರತಿ ವರ್ಷ ಶಾಸ್ತ್ರೋಕ್ತವಾಗಿ ನಮ್ಮ ಕಡೆ ಶ್ರಾದ್ಧ ಮಾಡುತ್ತಾರೆ. ಪ್ರತಿವರ್ಷ ರಾಜ್ಯಪಾಲರಿಂದ ಒಂದು ಭಾಷಣ ಮಾಡಿಸುವುದು, ಅದರ ಮೇಲೆ ನಾವು ಎಂಟು ದಿವಸಗಳ ಕಾಲ ಇಲ್ಲಿ ಚರ್ಚೆ ಮಾಡುವುದು. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಾಗ ದೇಶದಲ್ಲಿರತಕ್ಕಂತಹ ಯಾವುದೇ ವಿಷಯವನ್ನು ಚರ್ಚೆ ಮಾಡಬಹುದು. ಈ ದೇಶದಲ್ಲಿ 47 ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ಆಗಿದ್ದು ಮಾತ್ರ ಏನೂ ಇಲ್ಲ. ಹಾಗಾಗಿ ಇದರಲ್ಲಿ ಸೇರಿಸತಕ್ಕಂತಹ ಈ ಅಂಶಗಳ ಬಗ್ಗೆ ಮೂಲಭೂತವಾದ ಕನಿಷ್ಟ ಕಾರ್ಯಕ್ರಮಗಳು ಇಲ್ಲದೆ ಹೋದರೆ ನಾವು ಇವತ್ತು ಏನು ಸಾಧಿಸಿದ ಹಾಗೆ ಆಗುತ್ತದೆ? ಕನಿಷ್ಠ ಈ ದೇಶದ ಜನತೆಗೆ ಪ್ರತಿಯೊಬ್ಬರಿಗೂ ವಿದ್ಯಾಭ್ಯಾಸ, ಪ್ರತಿಯೊಬ್ಬರಿಗೂ ಕೆಲಸ, ಉಳುವವನಿಗೆ ಭೂಮಿ, ಕೆಲಸ ಮಾಡತಕ್ಕಂತಹ ಜನತೆಗೆ ಭದ್ರತೆ, ಇಂಥ ಯಾವುದೇ ಕಾರ್ಯಕ್ರಮ ಇಲ್ಲ. ಆರನೇ ಪ್ಯಾರಾದಲ್ಲಿ ಬಹಳ ಮುಖ್ಯವಾದ ವಿಷಯ ಇದೆ, ಕಾನೂನು ಪಾಲನೆ, ಕಾನೂನು ಸುವ್ಯವಸ್ಥೆ ಪರಿಣಾಮಕಾರಿಯಾಗಬೇಕು, ನಾನು ಈ ಸರ್ಕಾರ ಬಂದ ಮೇಲೆ ಕಾನೂನು ಪಾಲನೆ ಹೇಗೆ ವಿಫಲವಾಗಿದೆ ಎಂದು ಪಟ್ಟಿ ಮಾಡುವುದಕ್ಕೆ ಹೋಗುವುದಿಲ್ಲ. ನನ್ನ ಹತ್ತಿರ ದೊಡ್ಡ ಪಟ್ಟಿ ಇದೆ. ಫೈಲ್ ಇದೆ, ಗೋಲಿಬಾರ್ ಎಷ್ಟು ಆಗಿದೆ, ಕಳ್ಳತನ ಎಷ್ಟಾಗಿದೆ, ಫೈರಿಂಗ್ ಎಷ್ಟಾಗಿದೆ, ಕೊಲೆ ಎಷ್ಟು ನಡೆದಿದೆ, ಸುಲಿಗೆ ಎಷ್ಟು ನಡೆದಿದೆ, ಡಕಾಯಿತಿ ಎಷ್ಟು ನಡೆದಿದೆ, ಲಾಕಅಪ ನಲ್ಲಿ ಎಷ್ಟು ಸಾವು ಆಗಿದೆ ಎಂದು ಹೇಳುವುದಕ್ಕೆ ನನ್ನ ಹತ್ತಿರ ದಾಖಲೆ ಇದೆ. ಅವೆಲ್ಲವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇಡೀ ಸದನದ ಗಮನ ಸೆಳೆದು, ಮತ್ತು ಎಲ್ಲ ಸದಸ್ಯರಲ್ಲಿ ನಾನು ವಿನಂತಿ ಮಾಡುತ್ತೇನೆ, ಕಾನೂನು ಪಾಲನೆ ಎಂದರೆ ಏನು, ಏಕೆ ಕಾನೂನು ಪಾಲನೆ ಮಾಡಬೇಕು, ಕಾನೂನು ಪಾಲನೆ ಎಂದರೆ ಯಾವ ದೃಷ್ಟಿಯಲ್ಲಿ ಕಾನೂನು ಪಾಲನೆ ಮಾಡಬೇಕು, ಕಾನೂನು ಪಾಲನೆ ಮಾಡಬೇಕಾಗಿರುವಂತಹ ಮನುಷ್ಯನೊಬ್ಬನ ಪ್ರಾಥಮಿಕ ಹಕ್ಕುಗಳನ್ನು ಕಾಪಾಡಲಿಕ್ಕೋಸ್ಕರ ಕಾನೂನನ್ನು ಪಾಲನೆ ಮಾಡಬೇಕೋ ಅಥವಾ ಮನುಷ್ಯನೊಬ್ಬನು ತನ್ನ ಪ್ರಾಥಮಿಕ ಹಕ್ಕುಗಳನ್ನು ರಕ್ಷಣೆ ಮಾಡಲಿಕ್ಕೆ, ಪಡೆಯಲಿಕ್ಕೆ, ಅದಕ್ಕೋಸ್ಕರ ಹೋರಾಟ ನಡೆಸತಕ್ಕಂತಹ ಸಂದರ್ಭದಲ್ಲಿ ಆ ಹಕ್ಕುಗಳನ್ನು ಮೊಟಕು ಮಾಡಲಿಕ್ಕೆ ಕಾನೂನುಪಾಲನೆ ಹೆಸರಿನಲ್ಲಿ ಕಾನೂನು ಪಾಲನೆಮಾಡಬೇಕೇ? ಇದು ನಾವೆಲ್ಲರೂ ಗಂಭೀರವಾಗಿ ಚಿಂತನೆ ಮಾಡಬೇಕಾಗಿರುವಂತಹ ವಿಷಯ. ನಾವು ಇವತ್ತು ಬಹಳ ಕಡೆ ಕೇಳುತ್ತಿದ್ದೇವೆ. violation of human rights. What is that violation of human rights? What is the relationship between the violation of human rights and maintenance of law and order? should the law and order be maintained at the cost of violating human rights? ಕಾನೂನು ಪಾಲನೆ ಹೆಸರಿನಲ್ಲಿ ಮನುಷ್ಯನೊಬ್ಬನ ಸಾಮಾನ್ಯ ಹಕ್ಕುಗಳನ್ನು ತುಳಿದು ಕಾನೂನು ಪಾಲನೆ ಮಾಡಬೇಕೇ? ಅಥವಾ

ಕಾನೂನು ಇರತಕ್ಕಂಥದ್ದು, ಸಂವಿಧಾನ ತತ್ವವಾಗಿ ಸಾಮಾನ್ಯ ಮನುಷ್ಯನೊಬ್ಬನಿಗೆ ಸಿಕ್ಕಿರತಕ್ಕಂತಹ ಆ ಪ್ರಾಥಮಿಕ ಹಕ್ಕುಗಳನ್ನು ದಮನ ಮಾಡಲಿಕ್ಕೆ ಕಾನೂನು ಪಾಲನೆಯನ್ನು, ಸ್ಟೇಟ ಪವರನ್ನು, ರಾಜ್ಯ ಅಧಿಕಾರವನ್ನು ಉಪಯೋಗಿಸಬೇಕೇ? ಇದು ಚರ್ಚೆ ಮಾಡಬೇಕಾಗಿರತಕ್ಕಂತಹ ವಿಷಯ. ಇವತ್ತು ಇಡೀ ಜಗತ್ತಿನಲ್ಲಿ ಏನು ಹೇಳುತ್ತಿದ್ದಾರೆ, ಜಗತ್ತಿನಲ್ಲಿ ಅಷ್ಟೇ ಅಲ್ಲ ನಮ್ಮ ಸುಪ್ರೀಂ ಕೋರ್ಟಿನಲ್ಲಿ ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯ ಯಾದವ್ಟ್ ಟ/ ಉತ್ತರ ಪ್ರದೇಶದ 22.1.85ರ ಕೇಸನಲ್ಲಿ ಈ ರೀತಿ ಹೇಳಿದ್ದಾರೆ. ಪೋಲಿಸ್ ಬಂಧನದಲ್ಲಿ ಉಂಟಾದ ಸಾವಿನ ಪ್ರಕರಣಗಳಿಗೆ, ಅತಿ ಹೆಚ್ಚಿನ ಸಮೂಹ ಮಾಧ್ಯಮ ಪ್ರಚಾರ ಸಿಗಬೇಕು. ಏಕೆಂದರೆ ಕಾನೂನು ನಿರ್ವಹಣಾಧಿಕಾರಿಗಳು ತಮ್ಮ ವಿಚಿತ್ರ ಭ್ರಾತೃತ್ವ ಬಂಧನದ ಪ್ರಕಾರವಾಗಿ ಸತ್ಯದ ಮೇಲೆ ತಮ್ಮದೇ ಆದ ಒಂದು ರಂಗಿನ ಪಟ್ಟಿಯನ್ನು ಬಳಿದು, ನಿಜವನ್ನು ಮರೆಮಾಚುತ್ತಾರೆ, ಅನೇಕ ವೇಳೆ ಬಂಧಿಸಿದ್ದರೂ ಕಾಗದ ಪತ್ರಗಳನ್ನು ಸುಡುವುದು, ಸಾಮಾನ್ಯ ಅಥವಾ ತಾವು ಬಂಧಿಸಿಯೇ ಇಲ್ಲವೆಂದು ವಾದವನ್ನು ಪೋಲಿಸರ ಮುಂದಿಡುತ್ತಾರೆ. ಅಂತಹ ಸಂದರ್ಭದಲ್ಲಿ ಬಂಧಿತ ವ್ಯಕ್ತಿ ಸತ್ತಾಗ ಬಹಳ ಕಷ್ಟವಾಗುತ್ತದೆ. 1994ರಲ್ಲಿ ಜೋಗೆಂದರೆ ಸಿಂಗ್ ವೆರ್ಸನ ಸ್ಟೇಟ ಆಫ್ ಉತ್ತರ ಪ್ರದೇಶ ಎಂಬ ಕೇಸನಲ್ಲಿ ಸುಪ್ರೀಂ ಕೋರ್ಟನವರು ಏನು ಹೇಳುತ್ತಾರೆ ಎಂದರೆ, ವ್ಯಕ್ತಿ ಒಬ್ಬನನ್ನು ಬಂಧಿಸಿದ ಕೂಡಲೇ ಬಂಧಿತ ವ್ಯಕ್ತಿಯ ಬಂಧನದ ಸಮಾಚಾರ ತಿಳಿಸಬೇಕು. ಪೋಲೀಸ್ ಅಧಿಕಾರಿ ಠಾಣೆಗೆ ಕರೆದು ತಂದ ತಕ್ಷಣ ಈ ಹಕ್ಕಿನ ಬಗ್ಗೆ ತಿಳುವಳಿಕೆ ನೀಡಬೇಕು. ಸಂವಿಧಾನದ 22-21ನೇ ವಿಧಿಯಂತೆ ಪ್ರತಿ ವ್ಯಕ್ತಿಗೂ ಈ ಹಕ್ಕು ಪ್ರಾಪ್ತವಾಗಿದೆ ಎಂದು ಹೇಳಿದ್ದಾರೆ.

4.20 ಪಿ.ಎಂ.

ಆದರೆ ಇವೊತ್ತು ಪೋಲೀಸ್ ಠಾಣೆಯಲ್ಲಿ ಈ ರಾಜ್ಯದ ಪೋಲೀಸ್ ಅಧಿಕಾರಿಗಳು ಮಾಡತಕ್ಕಂಥದ್ದು ಏನು? ಯಾರ ರಕ್ಷಣೆಯನ್ನು ಇವರು ಮಾಡಲಿಕ್ಕೆ ಹೊರಟಿದ್ದಾರೆ. ಇವೊತ್ತು ಅವರು ಹೇಳುತ್ತಾರೆ, ಗೋಲೀಬಾರ್ ಮಾಡಿದ್ದು ಏಕೆ ಎಂದು ಕೇಳಿದರೆ, ಜನರು ಕಾನೂನನ್ನು ಕೈಗೆ ತೆಗೆದುಕೊಂಡಿದ್ದರು ಅದಕ್ಕೋಸ್ಕರ ಮಾಡಿದ್ದೇವೆಂದು ಹೇಳುತ್ತಾರೆ. ಲಾಕಪ ಡೆಥ ಏತಕ್ಕೆ ಆಯಿತು ಎಂದರೆ ಅಪರಾಧಿಯನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಬಂದಿದ್ದೆವು ಅವನನ್ನು ಇಂಟರಾಗೇಟ್ ಮಾಡುವಾಗ ಅವನು ಸತ್ತಿದ್ದಾನೆ ಎಂದು ಹೇಳುತ್ತಾರೆ. ಸರ್ಕಾರಕ್ಕೆ ನಾನೊಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಕಾನೂನನ್ನು ಯಾರು ಕೈಗೆ ತೆಗೆದುಕೊಳ್ಳುತ್ತಾರೆ? ಏಕೆ ಕೈಗೆ ತೆಗೆದುಕೊಳ್ಳುತ್ತಾರೆ? ನಾನು ಆಗ ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಹೇಳಿದೆ, 1947ರಲ್ಲಿ ನಮಗೆ ಸ್ವಾತಂತ್ರ್ಯ ಬರಬೇಕಾದರೆ ಆಗಿದ್ದಂಥ ಕಾನೂನುಗಳು ಎಲ್ಲವನ್ನೂ ನಾವು ಮುರಿದ್ದೇವೆ. None other than the father of the nation. ಮಹಾತ್ಮಾ ಗಾಂಧೀಜಿಯವರು ಈ ದೇಶದ ಕಾನೂನು ಭಂಗ ಚಳುವಳಿ ಜನತೆಗೆ ಮಾಡುವುದಕ್ಕೆ ಕರೆ ಕೊಟ್ಟಿದ್ದಾರೆ. We never agreed with the Britishers, that is why we are breaking the rule. That is why Mahatma Gandhi called Civil Disobedience Movement. ಅದೇ ರೀತಿ ಪಂಡಿತ್ ಜವಾಹರಲಾಲ್ ನೆಹರುರವರು ಲಾಹೋರನಲ್ಲಿ ವಿದ್ಯಾರ್ಥಿಗಳ ಜೊತೆ ಮಾತನಾಡಿದ ಸಂದರ್ಭದಲ್ಲಿ who lives if India dies? Who dies if India lives? ಎಂದು ಅವರು ಹೇಳಿದ್ದಾರೆ. ಏಕೆ ಈ ಮಾತನ್ನು ಹೇಳಿದ್ದಾರೆ ಗೊತ್ತಾ? ಭಾರತ ದೇಶದ ವಿದ್ಯಾರ್ಥಿಗಳು

ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಗೆ ಬರಬೇಕು ಎನ್ನತಕ್ಕಂಥ ಸಂದರ್ಭದಲ್ಲಿ ನೆಹರೂರವರು ಹೀಗೆ ಹೇಳಿದ್ದಾರು. If India dies everybody will die. If India lives, none of us will die. ಅದಕ್ಕೋಸ್ಕರ ಹೋರಾಟಕ್ಕೆ ಬನ್ನಿ ಎಂದು ಹೇಳಿದ್ದಾರೆ. ಕಾನೂನನ್ನು ಮುರಿಯಿರಿ ಎಂದು ಹೇಳಿದ್ದಾರೆ. ಇದು ಎಲ್ಲಕ್ಕಿಂತ ಮುಖ್ಯವಾಗಿ ಇಂದು ಜನತಾದಳದ ಸರ್ಕಾರದವರು ಶ್ರೀ ಜಯಪ್ರಕಾಶ್ ನಾರಾಯಣರವರು ಫೋಟೋ ಹಾಕುತ್ತಾರೆ. 1921 ಮತ್ತು 75, ಜೂನ ತಿಂಗಳ 21ನೇ ತಾರೀಖು ರಾಮಲೀಲಾ ಪರೇಡ ಮೈದಾನದಲ್ಲಿ ಶ್ರೀಜಯಪ್ರಕಾಶನಾರಾಯಣರವರು ಮಾಡಿದ ಭಾಷಣ ಏನು? ಇಂದಿರಾ ಗಾಂಧಿಯವರ ಸರ್ಕಾರಕ್ಕೆ ನೇರ ಸವಾಲು ಹಾಕಿದರು. ಜೊತೆಗೆ ಜನರಿಗೆ ಕರೆ ಕೊಟ್ಟರು ಅದು ಏನೆಂದರೆ ಅಕ್ರಮವಾಗಿ ಕಾನೂನುಗಳನ್ನು ಸರ್ಕಾರ ಜಾರಿಗೆ ತಂದರೆ, ಅದನ್ನು ಮುರಿಯತಕ್ಕಂಥದ್ದು ನಮ್ಮ ಹಕ್ಕು ಎಂದು ಶ್ರೀಜಯಪ್ರಕಾಶ್ ನಾರಾಯಣ್ ರವರು ಕರೆ ಕೊಟ್ಟರು. ಅದು ಒಂದೇ ಕಾರಣವನ್ನು ಇಟ್ಟು ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು ಹೇಳಿದರು, ಕಾನೂನನ್ನು ಮುರಿಯತಕ್ಕಂಥ ಕಾನೂನನ್ನು ಕೈಗೆ ತೆಗೆದುಕೊಳ್ಳಲಿಕ್ಕೆ ಜಯಪ್ರಕಾಶ್ ನಾರಾಯಣರವರು ಬಹಿರಂಗವಾಗಿ ಕರೆ ಕೊಟ್ಟಿದ್ದಾರೆ, ಅದಕ್ಕೋಸ್ಕರ ನಾನು ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡುತ್ತೇನೆ ಎಂದು ಹೇಳಿದರು. ಏನು ಇದರ ಅರ್ಥ? ನಾವು ಅನುಕೂಲಗಳಿಗೋಸ್ಕರ ಕಾನೂನನ್ನು ರಚನೆ ಮಾಡಿ, ನಮ್ಮ ಅಧಿಕಾರವನ್ನು ಭದ್ರವಾಗಿ ಇಟ್ಟುಕೊಳ್ಳುವುದಕ್ಕೋಸ್ಕರ ಪೋಲೀಸನವರನ್ನು ಉಪಯೋಗಿಸಿ ನಮ್ಮ ಅಧಿಕಾರಕ್ಕೆ ಧಕ್ಕೆ ಬಂದಂಥ ಸಂದರ್ಭದಲ್ಲಿ ಅದೇ ಪೋಲೀಸಿನವರನ್ನು ಬಿಟ್ಟು ಜನರ ಹಕ್ಕುಗಳನ್ನು ಮೊಟಕುಗೊಳಿಸಲಿಕ್ಕೆ ಇವೊತ್ತು ಈ ಪೋಲೀಸ್ ವ್ಯವಸ್ಥೆ ಇದೆ. ಎಲ್ಲಾ ಸಂದರ್ಭಗಳಲ್ಲೂ ಪೋಲೀಸರು ಯಾರ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದ್ದಾರೆ? ಜನಸಾಮಾನ್ಯರ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದ್ದಾರೆ. ಜನಸಾಮಾನ್ಯರ ಹಕ್ಕನ್ನು ಮೊಟಕುಗೊಳಿಸಲಿಕ್ಕೆ ಪೋಲೀಸ್ ನವರ ಶಕ್ತಿಯನ್ನು ಇವೊತ್ತು ಸರ್ಕಾರ ಉಪಯೋಗಿಸುತ್ತಿದೆ. violation of human rights. ಯಾವುದೇ ಸರ್ಕಾರಕ್ಕೆ ಇವೊತ್ತು ನಾನು ಕಾನೂನು ಪಾಲನೆ ಮಾಡುತ್ತಿದ್ದೇನೆ ಎಂದು ಹೇಳುವ ನೈತಿಕ ಹಕ್ಕಿಲ್ಲ. ಏಕೆಂದರೆ ಸ್ವಾತಂತ್ರ್ಯ ಬಂದು 47 ವರ್ಷಗಳಾದರೂ ನಮ್ಮ ದೇಶದ ಜನಸಂಖ್ಯೆಯಲ್ಲಿ ಅರ್ಧ ಜನಸಂಖ್ಯೆ ಇರತಕ್ಕಂಥ ಮಹಿಳೆಯರು ಇವೊತ್ತು ತಮ್ಮ ಬೆಳಗಿನ ಜಾವದ ಕೆಲಸಕ್ಕೆ, ಅಂದರೆ ಲ್ಯಾಟ್ರೀನಗೆ ಹೋಗಬೇಕಾದರೆ ಅವರು ಬೀದಿಯಲ್ಲಿ ಕೂಡತಕ್ಕಂಥ ಪರಿಸ್ಥಿತಿ ಇದೆ. ಬೀದಿಯಲ್ಲಿ ಕುಳಿತು ಬಟ್ಟೆ ಬಿಚ್ಚಿ ಸ್ನಾನ ಮಾಡತಕ್ಕಂಥ ಪರಿಸ್ಥಿತಿ ಇದೆ. ಅದು ನಿಜವಾಗಿ violation of human rights ಇದನ್ನು ರಕ್ಷಣೆ ಮಾಡಲು ಪೋಲೀಸರನ್ನು, ತಮ್ಮ ರಕ್ತವನ್ನು ಬೆವರಾಗಿ ಮಾಡಿ ದುಡಿಯುತ್ತಿರುವ ಕಾರ್ಮಿಕರು ತಮ್ಮ ದುಡಿತದ ಫಲಿತಕ್ಕೆ ಕೂಲಿಯನ್ನು ಕೇಲಿದರೆ, ಪೋಲೀಸರನ್ನು ಬಳಸುತ್ತಾರೆ. ಇದು Violation of human rights ಅಲ್ಲವಾ? ಒಬ್ಬ ನಾಗರೀಕನಿಗೆ ಸಂವಿಧಾನ ಬದ್ಧವಾಗಿ ಬಂದಿರತಕ್ಕಂಥ ತಮ್ಮ ಹಕ್ಕುಗಳನ್ನು ಬಲಿತೆಗೆದುಕೊಳ್ಳಲಿಕ್ಕೆ, ಮೊಟಕುಗೊಳಿಸಲಿಕ್ಕೆ ಪೋಲೀಸರನ್ನು ಉಪಯೋಗಿಸತಕ್ಕಂಥದ್ದು. ಇದು Violation of human rights ಈ ದೃಷ್ಟಿಯಲ್ಲಿ ನಾನು ತಮ್ಮ ಮುಖಾಂತರ ಈ ಸದನಕ್ಕೆ ಮನವಿ ಮಾಡುತ್ತಿದ್ದೇನೆ, ಕಾನೂನು ಪಾಲನೆ ಎನ್ನತಕ್ಕಂಥ ಸೈನ್ ಬೋರ್ಡ ಹಾಕಿಕೊಂಡು ಮನುಷ್ಯನ ಮೂಲಭೂತ ಹಕ್ಕುಗಳನ್ನು ತುಳಿಯುವುದಕ್ಕೆ, ಸಾಮಾನ್ಯ ಮನುಷ್ಯನ ನಾಗರೀಕ ಹಕ್ಕುಗಳನ್ನು ಕಿತ್ತುಕೊಳ್ಳಲಿಕ್ಕೆ ಈ ಲಾ ಲ್ಯಾಂಡ್ ಸೈನ್ ಬೋರ್ಡ ಹಾಕಬೇಕಾಗಿಲ್ಲ. ಅ ಲಾ ಆಂಡ್ ಸೈನ್ ಬೋರ್ಡ

ಕೆಳಗೆ ಇವರು ಸಾಮಾನ್ಯ ಮನುಷ್ಯರ ಹಕ್ಕುಗಳನ್ನು ತುಳಿಯುತ್ತಿದ್ದಾರೆ. ಈ ಪೋಲೀಸ್ ವ್ಯವಸ್ಥೆ ಹೋಗಬೇಕು. ಹಾಗಾದರೆ ಇವರು ಕೇಳಬಹುದು ನೀವು ಅರಾಜಕತೆಗೆ ಪ್ರೋತ್ಸಾಹ ಕೊಡುತ್ತಿದ್ದೀರಿ ಎಂದು. 1947ನೇ ಇಸ್ವಿಯಿಂದ 1997ನೇ ಇಸ್ವಿಯವರೆಗೆ ಭಾರತದ ದೇಶದ ಎಲ್ಲಾ ರಾಜ್ಯಗಳ ಕಾನೂನು ಪಾಲನೆಯ ಇತಿಹಾಸವನ್ನು ತೆಗೆದು ನೋಡಿ, ಯಾವುದಾದರೂ ಸಂದರ್ಭದಲ್ಲಿ ಈ ಅರಾಜಕತೆಯನ್ನು ಈ ಪೋಲೀಸರು ನಿಲ್ಲಿಸಿದ್ದಾರಾ? ನಿಜವಾಗಿ ಅರಾಜಕತೆ ನಿಲ್ಲಿಸಿದ್ದಾರಾ? ನಿಜವಾದ ಕಳ್ಳರಿಗೆ ಹಿಡಿಯುವುದಕ್ಕೆ ಕಾನೂನು ಉಪಯೋಗಿಸಿದ್ದಾರೆಯೇ? ನಿಜವಾದ ದರೋಡೆಕೋರರಿಗೆ ಹಿಡಿಯುವುದಕ್ಕೆ ಪೋಲೀಸರು ಏನಾದರೂ ಉಪಯೋಗ ಆಗಿದ್ದಾರೆಯೇ? ತಾವು ಇತಿಹಾಸವನ್ನು ತೆಗೆದುಕ ನೋಡಿ. ಇಡೀ ದೇಶದ ಇತಿಹಾಸವನ್ನು ತೆಗೆದು ನೋಡಿದರೆ, ಹೆಚ್ಚಿನ ಭಾಗ ಎಲ್ಲಾ ಅರಾಜಕತೆಗೆ ಮೂಲ ಕಾರಣ ಪೋಲೀಸನವರು. ನಾನು ಒಂದೇ ಒಂದು ಉದಾಹರಣೆ ಹೇಳುತ್ತೇನೆ. ಮುಳಬಾಗಿಲು ಗೋಲಿಬಾರಿಗೆ ಯಾರು ಕಾರಣರು? ಜನತೆ ಅಲ್ಲ. ಯಾರೂ ಯಾರಿಗೆ ಹೊಡೆಯಲಿಲ್ಲ. ಪೋಲೀಸನವರು ಒಂದು ಪೂಜಾ ಸ್ಥಳದಲ್ಲಿ ಹಂದಿ ಮಾಂಸವನ್ನು ತೆಗೆದುಕೊಂಡಿ ಹೋಗಿ ಹಾಕಿ, ಜನರಲ್ಲಿ ಗೊಂದಲ ಹುಟ್ಟಿಸಿ, ಅರಾಜಕತೆ ಏರ್ಪಾಡು ಮಾಡಿದ್ದುದು ಪೋಲೀಸರು. ಸಾಮಾನ್ಯ ಜನರು ಅಲ್ಲ. ಇದು ಒಂದೇ ಒಂದು ಅರಾಜಕತೆಯ ಮಾತು ನಿಮ್ಮ ಗಮನಕ್ಕೆ ತರುತ್ತೇನೆ. ಅದೇ ರೀತಿಯಲ್ಲಿ ಎಲ್ಲಾ ಸಂದರ್ಭಗಳಲ್ಲಿ ನೀವು ನೋಡಬೇಕು. ಅದಕ್ಕಿಂತ ಮುಖ್ಯವಾಗಿ ಸನ್ಮಾನ್ಯ ಉಪಾಧ್ಯಕ್ಷರೇ, ಜನವರಿ 23ನೇ ತಾರೀಖು ನಮಗೆಲ್ಲಾ ಹೆಮ್ಮೆ ಪಡಬೇಕಾದಂಥ ದಿವಸ ಎಂದು ಶ್ರೀ ಸುಭಾಷಚಂದ್ರ ಬೋಸರವರ ಜನ್ಮಶತಾಬ್ಧಿಯನ್ನು ಆಚರಣೆ ಮಾಡಿದರು. ಸುಭಾಷಚಂದ್ರ ಬೋಸರನ್ನು ಹೊಗಲಿ ಹೊಗಳಿ ಹೊನ್ನಶೂಲಕ್ಕೇರಿಸಿದರು. ಆದರೆ ವಿಪರ್ಯಾಸ ಏನೆಂದರೆ ಆ ಸುಭಾಷಚಂದ್ರ ಭೋಸರವರು ಸ್ಥಾಪನೆ ಮಾಡಿದಂಥ ಇಂಡಿಯನ ನ್ಯಾಶನಲ್ ಆರ್ಮಿಯ ಮಹಿಳಾ ಘಟಕದ ಕ್ಯಾಪ್ಟನ್ ಆಗಿದ್ದಂಥ ಶ್ರೀಮತಿ ಕ್ಯಾಪ್ಟನ್ ಲಕ್ಷ್ಮಿ ಸೈಗಲ್, 1996, 17ನೇ ತಾರೀಖು ಸೌಂಧರ್ಯ ಸ್ಪರ್ಧೆಯನ್ನು ಪ್ರತಿಭಟನೆ ಮಾಡಲಿಲ್ಲ ಬಂದಿದ್ದರು. ಆ ಸ್ವಾತಂತ್ರ್ಯ ಸಂಗ್ರಾಮದ ವೀರ ಸೇನಾನಿ ಕ್ಯಾಪ್ಟನ್ ಲಕ್ಷ್ಮಿ ಸೈಗಲ್ ಅವರ ಜೊತೆ ನಿಮ್ಮ ಪೋಲೀಸರು ನಡೆಮಕೊಂಡಂಥ ವರ್ತನೆ ಹೇಗೆ? 80 ವರ್ಷ ವಯಸ್ಸಿನ ವೃದ್ಧ ಸೇನಾನಿ ಸೌಂದರ್ಯ ಸ್ಪರ್ಧೆಯ ಬಗ್ಗೆ ಪ್ರತಿಭಟನೆಯನ್ನು ಮಾಡಲಿಕ್ಕೆ ಕಾನಪೂರದಿಂದ ಬೆಂಗಳೂರಿಗೆ ಬಂದರೆ, ಅವರಿಗೆ 80 ವರ್ಷ ವಯಸ್ಸಾಗಿದೆ ಎನ್ನತಕ್ಕಂಥ ಮಾನವೀಯ ದೃಷ್ಟಿಕೋನವನ್ನು ಇಡದೆ ಅವರ ಜಡೆ ಹಿಡಿದು ಎಳೆದಾಡಿದ್ದಾರೆ, ಈ ರೀತಿ ಮಾಡಿ ಜನವರಿ 23ನೇ ತಾರೀಖು ನೀವು ಸುಭಾಷಚಂದ್ರ ಭೋಸರ ಜನ್ಮಶತಾಬ್ದಿಯ್ನು ಆಚರಣೆ ಮಾಡುತ್ತಿದ್ದೀರೋ? It is way that we are giving the respect to great patriots? What sin she committed.?

SRI SURESH KUMAR : Subhashachandra Bose is not a vote getter. Unless some person gets us vote.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕ್ಯಾಪ್ಟನ್ ಲಕ್ಷ್ಮಿ ಸೈಗಲ್ ಅಷ್ಟೇ ಅಲ್ಲ, ಅವರ ಜೊತೆಯಲ್ಲಿ ಅವರ ಮಗಳು ಸುಭಾಷಿಣಿ ಹಾಲಿ, ಮಾಜಿ ಲೋಕಸಭಾ ಸದಸ್ಯೆ ಅವರು ಕೂಡ ಬಂದಿದ್ದರು. ಆನಂದರಾವ್ ಸರ್ಕಲನಲ್ಲಿ ಆ ಇಬ್ಬರ ಜಡೆ ಹಿಡಿದುಕೊಂಡು ಎಳೆದಿದ್ದಾರೆ. ಆ ಇಬ್ಬರ ಫೋಟೋ ಪತ್ರಿಕೆಯಲ್ಲಿ

ಬಂದಿದ್ದು ನಾನು ನಿಮಗೆ ತೋರಿಸುತ್ತೇನೆ. ಇದು ಈ ದೇಶದ ಪೋಲೀಸರು ಕಾನೂನು ರಚನೆ ಮಾಡತಕ್ಕಂಥ ವಿಧಾನ ಮಹಿಳೆಯರ ರಕ್ಷಣೆ ಮಾಡತಕ್ಕಂಥ ವಿಧಾನ! ಮಹಿಳೆಯರ ಮಾನ, ಪ್ರಾಣ ರಕ್ಷಣೆ ಮಾಡತಕ್ಕಂಥ ವಿಧಾನ! ನಾನು ಕೂಡ ಸೌಂದರ್ಯ ಪ್ರತಿಭಟನೆ ಸ್ಪರ್ಧೆಯಲ್ಲಿ ಶ್ರೀಮತಿ ಕ್ಯಾಪಟನ್ ಲಕ್ಷ್ಮಿ ಸೈಗಲ್ ರವರ ಜೊತೆಯಲ್ಲಿ ಪಾಲ್ಗೊಂಡಿದ್ದ. ನಾನು ಒಬ್ಬ ಶಾಸಕ ಒಂದು ಗೊತ್ತಿದ್ದರೂ ಕೂಡ ಒಬ್ಬ ಪೋಲೀಸ್ ನನ್ನನ್ನು ಯಾವ ರೀತಿ ನೋಡಿದ್ದಾನೆ ಎಂದರೆ ಅದು ಹೇಳುವುದು ಕಷ್ಟ. ಆದರೆ ಆತನ ಬಗ್ಗೆ ನನಗೆ ವೈಯಕ್ತಿಕವಾದ ದೋಷ ಇಲ್ಲ. ಏಕೆಂದರೆ ಪೋಲೀಸ್ ವ್ಯವಸ್ಥೆಯನ್ನು ನಮ್ಮ ದೇಶದಲ್ಲಿ ಬೆಳೆಸಿರತಕ್ಕಂಥ ವಿಧಾನ, ಪೋಲೀಸರ ಮನದಲ್ಲಿ ನಾಟಿರತಕ್ಕಂಥ ದೃಷ್ಟಿ. ಇಲ್ಲಿ ಮೂಲ ದೋಷ ಇರತಕ್ಕಂಥದ್ದು. ಅವರನ್ನು ಬೆಳೆಸಿರತಕ್ಕಂಥ ವಿಧಾನದಲ್ಲಿ ತಪ್ಪಿದೆ. ಪೋಲೀಸರಿಗೆ ಯಾವ ರೀತಿ ಬೆಳೆಸಿದ್ದೀರಿ ನೀವು? ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದು ಏನೆಂದರೆ ಆ ಪೋಲೀಸರು ಏನೂ ಮಾಡುವುದು ಬೇಡ, ಅವರನ್ನು ಮನುಷ್ಯರಾಗಿ, ಮಾನವೀಯತೆಯಿಂದ ವರ್ತನೆ ಮಾಡಿ, ಮಾತನಾಡತಕ್ಕಂಥದ್ದನ್ನು ಆ ಪೋಲೀಸರಿಗೆ ಕಲಿಸಿ. ನಿಮ್ಮಲ್ಲಿ ಒಬ್ಬರು ಪೋಲೀಸ್ ಡಿ.ಜಿ. ಇದ್ದಾರೆ. ಅವರ ಹೆಸರು ಕೂಡ ಸರಿಯಾಗೇ ಇದೆ. ದೊರೈ ಎಂದು . ನಿಜವಾಗಲೂ ಅವರು ದೊರೆಗಳ ಕಾಲದಲ್ಲಿ ದೊರೆ ಆಗಿರಬೇಕಾಗಿತ್ತು. ಅವರು ಪ್ರಜಾಪ್ರಭುತ್ವದಲ್ಲಿ ಆಫೀಸರ್ ಆಗಿರಲು ಲಾಯಕ್ಕಿಲ್ಲ. ಅವರಿಗೆ ದೊರೆಗಳ ಕಾಲದಲ್ಲಿ ಯಾರಾದರು ಚೆನ್ನಾಗಿ ಸೆಲೆಕ್ಟ್ ಮಾಡಿ ಹೆಸರನ್ನು ದೊರೈ ಎಂದು ಇಟ್ಟಿದ್ದಾರೆ. ಆತ ಹಿಂದಿನ ಕಾಲದ ದೊರೆಗಳ ರಾಜ್ಯಭಾರಲ್ಲಿ ಇರಬೇಕಾಗಿತ್ತು. ಅವರು ಪೋಲೀಸ್ ನವರಿಗೆ ಹೀಗೆ ಹೇಳುತ್ತಾರೆ. You are licking the boots of politicians ಎಂದು I wanted to ask the Mr. Dorai, by licking who's boots you have to the position?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) : ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡಲಿ, ನನ್ನದೇನೂ ತಕರಾರು ಇಲ್ಲ. ಆದರೆ ಬೇರೆ ಬೇರೆ ರಾಜಕೀಯ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಅಲ್ಲಿಯ ಪೋಲಿಸರು ಹೇಗಿದ್ದಾರೆ ಮತ್ತು ಅವರು ಯಾವ ರೀತಿಯಲ್ಲಿ ವರ್ತನೆ ಮಾಡುತ್ತಾರೆ ಮತ್ತು ಪತ್ತೆ ಹಚ್ಚುತ್ತಾರೆ ಎಂಬ ಬಗ್ಗೆ ಎಲ್ಲರಿಗೂ ಗೊತ್ತಿರುವಂಥದ್ದೇ. ಒಬ್ಬ ಡಿ.ಜಿ.ಪಿ. ಆಗಿರುವಂಥವರ ಬಗ್ಗೆ ಇವರು ಹೆಸರನ್ನು ಹಿಡಿದು ಮಾತನಾಡುವುದು ಸರಿಯಲ್ಲವೆನ್ನುವುದು ನನ್ನ ಅಭಿಪ್ರಾಯ. ಏಕೆಂದರೆ ಅಧಿಕಾರಿಯ ಹೆಸರನ್ನು ಉಲ್ಲೇಖಿಸಿ ಅದರ ಬಗ್ಗೆ ಮಾತನಾಡುವುದು ಈಸಭೆಗೆ ಮತ್ತು ಚರ್ಚೆಗೆ ಗೌರವ ತರುತ್ತದೆಯೇ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಆದುದರಿಂದ ಸ್ವಲ್ಪ ನಾವೆಲ್ಲ ಪಕ್ಷವನ್ನು ಬಿಟ್ಟು ಮಾತನಾಡಿದರೆ ಒಳ್ಳೆಯದೆನಿಸುತ್ತದೆ. ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಇವರಿಗೆಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮ್ಮ ಸರ್ಕಾರಕ್ಕೂ ಇದೆ. ಪೋಲಿಸ್ ವ್ಯವಸ್ಥೆ ಬಗ್ಗೆ ಟೀಕೆ ಮಾಡಲಿ, ಡಿ.ಜಿ.ಪಿ ಬಗ್ಗೆ ಟೀಕೆ ಮಾಡಲಿ, ಆದರೆ ಅವರ ಹೆಸರನ್ನು ಹೇಳಿ ಮಾತನಾಡುವುದು ಅಷ್ಟು ಸಮಂಜಸವಿದೆಯೇ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಸರ್ಕಾರದಲ್ಲಿ ಎಲ್ಲವೂ ಮಾಡುವುದೆಲ್ಲಾ ಸರಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಸರ್ಕಾರದಲ್ಲಿ ಎಲ್ಲವೂ ಮಾಡುವ ಸರಿಯಾಗಿಯೇ ನಡೆದಿದೆ ಎಂದೂ ನಾನು ಹೇಳುತ್ತಿಲ್ಲ. Hon. Member has got every right to criticise the Goverrnment, the action of various departments annd the Heads of Departments and everybody. ಅದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ಆದರೆ

ಡಿ.ವಿ.ಜಿ.ಯವರ ಹೆಸರನ್ನು ಹೇಳಿ ಇಲ್ಲಿ ಮಾತನಾಡುವುದು ಅಷ್ಟೇನೂ ಗೌರವ ತರುವುದಿಲ್ಲ ಎಂಬುದನ್ನು ಅವರು ಯೋಚನೆ ಮಾಡಬೇಕಾಗುತ್ತದೆ .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆ ರೀತಿ ಸುಮಾರು ಜನರು ಮಾತನಾಡಿದ್ದಾರೆ. ಆದ್ದರಿಂದ ನಾನೇನೂ ದೊಡ್ಡ ಅಪರಾಧವೆಂದು ತಿಳಿದುಕೊಳ್ಳುವ ರೀತಿಯಲ್ಲಿ ಮಾತನಾಡಿಲ್ಲ. ಮಾನ್ಯ ಸಿಂಧ್ಯಾರವರಿಗೆ ನಾನು ಈ ರೀತಿಯಲ್ಲಿ ಮಾತನಾಡಿದ್ದು ದೊಡ್ಡ ಅಪರಾಧವೆಂದು ಅನ್ನಿಸಿದ್ದರೆ ನಾನು ಬೇಕಾದರೆ ಅವರಲ್ಲಿ ಕ್ಷಮೆ ಕೇಳುತ್ತೇನೆ. ಇವರಲ್ಲಿ ನನ್ನದೇನೂ ಸ್ವಪ್ರತಿಷ್ಠೆಯಿಲ್ಲ. ಪೋಲಿಸಿನವರು ಬಹಳ ಪ್ರಾಮಾಣಿಕರೆಂದು ನೀವು ಹೇಳುವುದೇ ಆದರೆ ಯಾವ ರಂಗದಲ್ಲಿ ಪ್ರಾಮಾಣಿಕರಾಗಿದ್ದಾರೆ ಎಂದು ಹೇಳಲಿ. ಇವರು ಕಾನೂನು ಪರಿಪಾಲನೆ ಮಾಡುವುದರಲ್ಲಿ ಪ್ರಾಮಾಣಿಕರಾಗಿದ್ದಾರೆಯೇ, ಆಡಳಿತವನ್ನು ನಡೆಸತಕ್ಕಂಥ ವಿಚಾರದಲ್ಲಿ ಪ್ರಾಮಾಣಿಕವಾಗಿ ವರ್ತನೆ ಮಾಡಿದ್ದಾರೆಯೇ ಎಂಬುದನ್ನು ಹೇಳಬೇಕು. ನಾನು ಕೋಲಾರ ಜಿಲ್ಲೆಯಿಂದ ಬಂದಿರತಕ್ಕಂತ ಮನುಷ್ಯ. ನಮ್ಮ ಪಕ್ಕದ ಆಂಧ್ರದಲ್ಲಿ ಪೂರ್ಣ ಪ್ರಮಾಣದ ಪಾನ ನಿಷೇಧ ಇದೆ. ನಾವೆಲ್ಲಾ ಗಡಿ ಪ್ರದೇಶದ ತಾಲ್ಲೂಕಿನಲ್ಲಿರತಕ್ಕವರು. ಈ ಗಡಿ ಪ್ರದೇಶದ ಒಂದೊಂದು ತಾಲ್ಲೂಕಿನಿಂದ ಒಂದು ದಿವಸಕ್ಕೆ ಸುಮಾರು ಒಂದು ಲಕ್ಷ ರೂ.ಗಳವರೆಗೆ ಕಳ್ಳತನದ ಸಾರಾಯಿ ಆಂಧ್ರಪ್ರದೇಶಕ್ಕೆ ಹೋಗುತ್ತಿದೆ. ಯಾರು ಇದಕ್ಕೆ ಸಹಾಯ ಮಾಡುತ್ತಿದ್ದಾರ ಗೊತ್ತೇ, ಈ ಪ್ರಾಮಾಣಿಕ ಪೋಲಿಸ್ ಅಧಿಕಾರಿಗಳು!! ಇವರ ಸಹಾಯದಿಂದ, ಇವರ ಬೆಂಗಾವಲಿನಿಂದ ಮತ್ತು ಕೆಲವು ಸಂದರ್ಭಗಳಲ್ಲಿ ಇವರ ಜೀಪಗಳಲ್ಲೇ ಈ ಕಳ್ಳತನದ ಸಾರಾಯಿ ಸರಬರಾಜಾಗುತ್ತಿದೆ. ಇವರ ಜೊತೆ ಎಕ್ಸೈಸ್‌ನವರೂ ಇರುತ್ತಾರೆ. ಇವರು ಪ್ರಾಮಾಣಿಕ ಅಧಿಕಾರಿಗಳೇ? ಮುಳುಬಾಗಿಲು, ಚಿಂತಾಮಣಿ, ಪಾವಗಡ, ಬಾಗೇಪಲ್ಲಿ, ಗೌರಿಬಿದನೂರು ಇನ್ನ ಕೆಲವು ಕಡೆ ಇದು ನಡೆಯುತ್ತಿದೆ. ಪ್ರಾಮಾಣಿಕ ಅಧಿಕಾರಿಗಳು ಇದ್ದಾರೆ, ಇಲ್ಲವೇ ಇಲ್ಲ ಎಂದು ನಾನು ಹೇಳುವುದಿಲ್ಲ. ಈ ಮೇಲಿನ ಎಲ್ಲವೂ ಇವರ ಕಾನೂನು ಪಾಲನೆ ವ್ಯಾಪ್ತಿಗೆ ಬರುವುದಿಲ್ಲ. ಇವರ ಕಾನೂನು ಪರಿಪಾಲನೆ ವ್ಯಾಪ್ತಿಗೆ ಬರುವುದು ಯಾವುದೆಂದರೆ ಸಾಮ್ರಾಟ್ ಅಶೋಕಾದಲ್ಲಿ ಕೆಲಸ ಮಾಡುತ್ತಾ ಇರತಕ್ಕಂಥ ಸುಮಾರು 6 ಸಾವಿರ ಮಹಿಳೆಯರು ಕನಿಷ್ಠ ಕೂಲಿಯನ್ನು ಕೊಡಬೇಕೆಂದು ಬಜಾರ್‌ಗೆ ಬಂದರೆ ಆಗ ಇವರ ಕಾನೂನು ಪರಿಪಾಲನೆ ಪ್ರಶ್ನೆ ಬಂದು ಬಿಡಡುತ್ತದೆ, ವೆಳ್ಳಿಯಪ್ಪ ಕಾರ್ಖಾನೆಯ 600 ಜನರು ತಮ್ಮ ಕೆಲಸವನ್ನು ಖಾಯಂ ಮಾಡಿ ಎಂದು ಬಜಾರಗೆ ಬಂದರೆ ಆಗ ಇವರಿಗೆ ಕಾನೂನು ಪರಿಪಾಲನೆ ಮಾಡಬೇಕು ಎನ್ನುವ ಪ್ರಶ್ನೆ ಬಂದು ಬಿಡುತ್ತದೆ. ಬೆಂಗಳೂರಿನಲ್ಲಿ ಹಾಗೂ ಕರ್ನಾಟಕ ರಾಜ್ಯದಲ್ಲಿ ಡಕಾಯಿತಿಗಳು ಮಾಡುತ್ತಿರತಕ್ಕಂಥ ಬಗ್ಗೆ ಇವರ ಕಾನೂನು ಪರಿಪಾಲನೆ ವಿಷಯ ಇವರಿಗೆ ಬರುವುದಿಲ್ಲ. ಇದನ್ನು ಕೇಳಿದರೆ ಪೋಲಿಸಿನವರು ತಮ್ಮದೇ ಆದ ಉತ್ತರವನ್ನು ಕೊಡುತ್ತಾರೆ. ಏನ್ರಿ ಡಕಾಯಿತಿ ಮಾಡುವವರು ನಮಗೆ ಹೇಳಿಬಿಟ್ಟು ಡಕಾಯಿತಿ ಮಾಡುವುದಕ್ಕೆ ಹೋಗುತ್ತಾರೇನು, ನಮ್ಮನ್ನು ಹಿಡಿದುಕೊಳ್ಳಿ ಎಂದು ಮಾಡುತ್ತಾರೇನು ಎನ್ನುತ್ತಾರೆ. ನಾನು ಹೇಳುವುದೇನೆಂದರೆ ಇವರಿಗೆ ಹೇಳಿಬಿಟ್ಟು ಡಕಾಯಿತಿ ಮಾಡುವುದಾದರೆ ಈ ಕಳ್ಳರನ್ನು ಹಿಡಿಯುವುದಕ್ಕೆ ಪೋಲಿಸರು ಏಕೆ ಬೇಕು? ಆದುದರಿಂದ ಕಾನೂನು ಪರಿಪಾಲನೆ ವಿಚಾರವಾಗಿ ಬರೀ ಪುಸ್ತಕದಲ್ಲಿ ಇರತಕ್ಕಂಥದ್ದನ್ನು ಹೇಳಬಾರದು. ಕಾನೂನು ಪಾಲನೆ ಮಾಡಬೇಕಾಗಿರತಕ್ಕಂಥದ್ದು ಸಂವಿಧಾನದ ದತ್ತವಾಗಿ ಪ್ರತಿಯೊಂದು ಮನುಷ್ಯನಿಗೂ ಸಿಕ್ಕಿರತಕ್ಕಂಥ ಹಕ್ಕುಗಳನ್ನು ರಕ್ಷಣೆ ಮಾಡತಕ್ಕಂಥದ್ದು. ಕ್ರಿಮಿನಲ್ಸ್ ಬಗ್ಗೆ ನೀವು ಕ್ರೂರವಾಗಿ ವರ್ತನೆ

ಮಾಡಿ, ಡಕಾಯಿತರ ಬಗ್ಗೆ ಮತ್ತು ಕಳ್ಳತನ ಮಾಡುವವರ ಬಬಗ್ಗೆ ಕ್ರೂರವಾಗಿ ನೀವು ವರ್ತನೆ ಮಾಡಿ ಕಟ್ಟುನಿಟ್ಟಾಗಿ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಪೋಲೀಸರು ಆ ರೀತಿಯಲ್ಲಿ ಕ್ರೂರವಾಗಿ ನಡೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ; that is the direction of the Human Rights Commission and that is the conviction of this Government. ಅಪರಾಧಿ ಎಂದು ಗೊತ್ತಿದ್ದರೂ ಕೂಡ ಅವರ ಮೇಲೆ ಕ್ರೂರವಾಗಿ ನಡೆದುಕೊಳ್ಳುವುದಕ್ಕೆ ಆಗುವುದಿಲ್ಲ, ಇದೊಂದೇ ಪ್ರಶ್ನೆಯಲ್ಲ, ಜೈಲಿನಲ್ಲಿದ್ದರೂ ಕೂಡ ಕ್ರೂರವಾಗಿ ನಡೆದುಕೊಳ್ಳುವುದಕ್ಕೆ ಪೋಲಿಸಿನವರಿಗೆ ಸಾಧ್ಯವಾಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಸಿಂಧ್ಯಾರವರು ಸತ್ಯಾಂಶವನ್ನು ಹೇಳಿದ್ದಾರೆ. ಸರ್ಕಾರ ಕಳ್ಳರ, ಡಕಾಯಿತರ, ಕ್ರಿಮಿನಲಗಳ ಮಾನವ ಹಕ್ಕುಗಳನ್ನು ಕಾಪಾಡುತ್ತೇವೆಯೇ ಹೊರತು ನಾಗರೀಕರ ಹಕ್ಕುಗಳನ್ನು ಕಾಪಾಡುವುದಿಲ್ಲ ಎಂದು ಹೇಳುವ ರೀತಿಯಲ್ಲಿ ಹೇಳಿದ್ದಾರೆ. ಇದು ಸತ್ಯ. ಇವರ ದೃಷ್ಟಿಯಲ್ಲಿ ಯಾರ ಹಕ್ಕುಗಳು ಮತ್ತು ಯಾರು ಮುಖ್ಯ ಎಂಬುದಾಗಿದೆ. ಇಲ್ಲಿರತಕ್ಕಂಥ ಪ್ರಶ್ನೆ, ಆಡಳಿತ ನಡೆಸುತ್ತಿದ್ದೇವೆ ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ, ಆಡಳಿತ ಯಂತ್ರವನ್ನು ಸಮರ್ಥನೆ ಮಾಡಿಕೊಳ್ಳಬೇಕು ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ ಯಾಂತ್ರಿಕವಾಗಿ ಮಾತನಾಡಬಾರದು. ನಾವು ಮೂಲತಃ ಮನುಷ್ಯರಾದ ಕಾರಣ ಮಾನವೀಯ ದೃಷ್ಟಿಯಿಂದ ಆಲೋಚನೆಯನ್ನು ಮಾಡಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ಮಾನ್ಯ ವೀರಪ್ಪಮೊಯಲಿಯವರ ಕಾಲದಲ್ಲಿ ಜನರನ್ನು ನೀರನ್ನು ಹೊಡೆದು ಚದುರಿಸತಕ್ಕಂಥ ರೀತಿಯಲ್ಲಿ ಒಂದು ಹೊಸ ಚಾಲನೆಯನ್ನು ತಂದರು. ಬಹುಶಃ ಅದರ ಪ್ರಯೋಗ ಮೊಟ್ಟ ಮೊದಲನೆಯದಾಗಿ ನನ್ನ ಮೇಲೆಯೇ ಆಯಿತು ಎಂದು ತಿಳಿದುಕೊಂಡಿದ್ದೇನೆ. ಏಕೆಂದರೆ ಬೇರೆ ಯಾರ ಮೇಲೂ ಆಗಿಲ್ಲವೆಂದೆನಿಸುತ್ತದೆ. ಇದು ರಾಜ್ಯ ಭವನದಲ್ಲಿ ಆಗಿದ್ದು. ನಾವೇನು ರಾಜ್ಯಪಾಲರನ್ನು ಹೊಡೆಯುವುದಕ್ಕೆ ಹೋಗಿರಲಿಲ್ಲ, ಅಥವಾ ದರೋಡೆ ಮಾಡುವುದಕ್ಕೆ ರಾಜಭವನಕ್ಕೆ ಹೋಗಿರಲಿಲ್ಲ. ನಾವು ಹೋಗಿದ್ದು ಒಂದು ನಿರ್ಧಿಷ್ಟವಾದ ಮತ್ತು ವಾಸ್ತವಿಕವಾದ ಹೊಸ ಆರ್ಥಿಕ ಧೋರಣೆಯನ್ನು ಪ್ರತಿಭಟನೆ ಮಾಡುವ ಸಲುವಾಗಿ ಅಲ್ಲಿಗೆ ಹೋಗಿದ್ದೆವು. ನಮ್ಮ ಮೇಲೆ ಏಕೆ ಈ ನೀರನ್ನು ಹೊಡೆದು ಜನರನ್ನು ಚದುರಿಸುವ ಪ್ರಯೋಗವನ್ನು ಮಾಡಬೇಕು ? ಇದರಲ್ಲಿ ಕಾನೂನು ಪಾಲನೆ ಇದೆಯೇ ? ನನ್ನ ಪಕ್ಕದಲ್ಲಿ ವಾಟಾಳ ನಾಗರಾಜರವರು ಇಂದು ಇದ್ದಾರೆ. 1996ರ ನವೆಂಬರ್ 23ನೇ ತಾರಿಖು ಸೌಂದರ್ಯ ಸ್ಪರ್ಧೆ ನಡೆಯುವ ಸಂಬಂಧ ನಾವು ಪ್ರತಿಭಟನೆಯನ್ನು ಮಾಡಿದೆವು. ನಮ್ಮ ಅಭಿಪ್ರಾಯದಲ್ಲಿ ಸೌಂದರ್ಯ ಸ್ಪರ್ಧೆ ನಮಗೆ ವಿರುದ್ಧವಾದುದು. ಆದರೆ ನಿಮ್ಮ ಅಭಿಪ್ರಾಯದಲ್ಲಿ ನೀವು ಅದಕ್ಕೆ ಪರ ಇರಬಹುದು, ಆದರೆ ನಾವೇನು ಪರ ಇರಬೇಡಿ ಎಂದೇನೂ ಹೇಳುವುದಿಲ್ಲ. ನಿಮಗೆ ಅದರ ಪರವಾಗಿ ಮಾತನಾಡುವುದಕ್ಕೆ ಏನು ಹಕ್ಕಿದೆಯೋ ಅದೇ ರೀತಿ ನಾವು ಅದನ್ನು ವಿರೋಧ ಮಾಡುವುದಕ್ಕೂ ನಮಗೆ ಹಕ್ಕು ಇದೆ. ವಿರೋಧ ಮಾಡಿದವರ ಮೇಲೆ ನಿಮ್ಮ ಪೋಲಿಸಿನವರು ಮತ್ತು ನಿಮ್ಮ ಸರ್ಕಾರ ನಡೆದುಕೊಂಡಂಥ ವಿಧಾನ ಏನಿತ್ತು, ಅದು ನಮಗೆ ಬಹಳ ಮುಖ್ಯವಾದಂಥ ವಿಚಾರವಾಗಿದೆ. ಅವೊತ್ತು ಅನೇಕ ಶಾಸಕರು ಇದ್ದರು, ಪ್ರಮೀಳಾರವರು, ವಾಟಾಳ್ ನಾಗರಾಜರವರು, ನಾನು ಇದ್ದ

ಮತ್ತು ಸ್ವಾತಂತ್ರ್ಯ ಹೋರಾಟಗಾರು ಇದ್ದರು, ಯಾರನ್ನೂ ಕೂಡ ಗಣನೆಗೆ ತೆಗೆದುಕೊಳ್ಳದೇ ಎಲ್ಲರನ್ನೂ ದರದರನೇ ನಾಯಿಗಳನ್ನು ಎಳೆವ ಹಾಗೆ ಪೋಲಿಸಿನವರು ಬಜಾರನಲ್ಲಿ ಎಳೆದುಕೊಂಡು ಹೋದರಲ್ಲ, ಯಾವ ಕಾರಣಕ್ಕೋಸ್ಕರ? ಆ ದಿನ ಇಡೀ ಬೆಂಗಳೂರಿನಲ್ಲಿ ಪೋಲಿಸಿನವರನ್ನು ಬಿಟ್ಟರೆ ಬೇರೆ ಯಾರೂ ಕಾಣಲಿಲ್ಲ. ಏಕೆ? ಏನಾದರೂ ಯುದ್ಧ ನಮಗೆ ಮತ್ತು ಪಾಕಿಸ್ತಾನದವರಿಗೆ ನಡೆಯುತ್ತಿತ್ತೆ? ಅಥವಾ ಚೈನಾದವರು ನಮ್ಮ ಮೇಲೆ ಧಾಳಿ ಮಾಡಿದ್ದರೆ? ಏತಕ್ಕೋಸ್ಕರ ನೀವು ಆ ದಿನ ಅರೆ ಮಿಲಿಟರಿ ಪೋಲಿಸಿನವರನ್ನು ತಂದಿರಿ? ಯಾವ ಸಾಧನೆಯನ್ನು ಮಾಡುವುದಕ್ಕೆ ಪೋಲಿಸಿನವರನ್ನು ತಂದಿರಿ? ಕಾನೂನು ಪಾಲನ, ಏನು ಕಾನೂನು ಪಾಲನೆಯನ್ನು ನೀವು ಆ ದಿನ ಮಾಡಿದಿರಿ. ಅಂಥ ಗಂಭೀರವಾದ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಉಂಟಾಗಿತ್ತೇ? ನಿಮ್ಮ ಯಾವುದೋ ತೆವಲಿಗೋಸ್ಕರ ಇಡೀ ಪೋಲಿಸಿನವರನ್ನು ದುರುಪಯೋಗಪಡಿಸಿಕೊಂಡಿದ್ದೀರಿ. ರಕ್ಷಣಾ ಇಲಾಖೆಗೆ ಸಂಬಂಧಪಟ್ಟ ಡಿಫೆನ್ಸ ಫೀಲ್ಡನ್ನು ಸೌಂದರ್ಯ ಸ್ಪರ್ಧೆಗೋಸ್ಕರ ಕೊಟ್ಟಿರಿ. ಇದಕ್ಕೆ ಯಾರು ನಿಮಗೆ ಅಧಿಕಾರ ಕೊಟ್ಟವರು? ಈ ರಾಜ್ಯದ ಗೃಹಮಂತ್ರಿಗಳು ಒಂದು ಪತ್ರ ಬರೆಯುತ್ತ ಆ ಜಾಗವನ್ನು ಸೌಂದರ್ಯ ಸ್ಪರ್ಧೆಗೆ ಕೊಡಿ ಒಂದು ಹೇಳುತ್ತಾರೆ. ಯಾವ ಅಧಿಕಾರದ ಆಧಾರದ ಮೇಲೆ ಆ ರೀತಿ ಬರೆಯುತ್ತೀರಿ? ಇಲ್ಲಿ ನನ್ನ ಪ್ರಶ್ನೆ ಏನೆಂದರೆ ಪೋಲಿಸರನ್ನು ಸರ್ಕಾರ ಯಾವ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಿದೆ ಎಂಬ ಬಗ್ಗೆ ನಾವೆಲ್ಲರೂ ಗಂಭೀವರಾಗಿ ಚಿಂತನೆ ಮಾಡಬೇಕಾದ ಅವಶ್ಯಕತೆ ಇದೆ. ಮಾನ್ಯ ಸಿಂಧ್ಯಾರವರು ಮಾತನಾಡುತ್ತಾ ಹೇಳಿದರು, ಬೇರೆ ಬೇರೆ ರಾಜಕೀಯ ಪಕ್ಷಗಳಳು ಬೇರೆಬೇರೆ ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಕಥೆ ಪೋಲಿಸಿನವರ ವರ್ತನೆನೆ ಬಗ್ಗೆ ಹೇಳಿದರು. ನಾನು ಹೇಳಿದ್ದು ಇಡೀ ಪೋಲಿಸ್ ವ್ಯವಸ್ಥೆ ಬಗ್ಗೆ. ಎಲ್ಲಾ ರಾಜ್ಯಗಳಲ್ಲಿ ಪೋಲಿಸ್ ವ್ಯವಸ್ಥೆ ಸರಿಯಿದೆ, ಆದರೆ ಇಲ್ಲಿ ಮಾತ್ರ ಕಿತ್ತುಹೋಗಿದೆ ಎಂದು ನಾನು ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ : ಮಾನ್ಯ ಉಪಾಧ್ಯಕ್ಷರೇ, ವಿಶ್ವಸುಂದರಿ ಸ್ಪರ್ಧೆ ದಿನ ನಡೆದಂಥ ಒಂದು ಘೋರ ಕೃತ್ಯ, ಒಂದು ಕಡೆ ವಿಶ್ವ ಸುಂದರಿಯರಿಗೆ ಅವರ ಹೆಜ್ಜೆ ಹೆಜ್ಜೆಗೂ ಎಲ್ಲಾ ರೀತಿಯ ವ್ಯವಸ್ಥೆಯನ್ನು, ಬಂದೋಬಸ್ತನ್ನು ಮಾಡಿದಂಥ ಸಂದರ್ಭದಲ್ಲಿ ಇಡೀ ಕರ್ನಾಟಕದ (xx) ಅದನ್ನು ವಿರೋಧ ಮಾಡಿದಾಗ, ಅವರ ಜಡೆಯನ್ನು ಹಿಡಿದು ಎಳೆದು ರಸ್ತೆಯನ್ನು ಪೋಲಿಸಿನವರು ಬೂಡ್ಸ್‌ನಿಂದ ಒದ್ದಿರತಕ್ಕಂಥ ದೃಶ್ಯ ಪತ್ರಿಕೆಗಳಲ್ಲಿ ಬಂತು. ಬಹುಶಃ ನನಗೆ ಅನ್ನಿಸಿತು, ಇಡೀ ಹೆಣ್ಣು ಮಕ್ಕಳ ಕುಲಕ್ಕೇ ಆ ಸಂದರ್ಭದಲ್ಲಿ ಅವಮಾನವಾಯಿತು ಎಂದುಕೊಂಡೆ. ಏನು ಪ್ರಮೀಳಾರವರೇ ಏನಾಯಿತು ಹೇಳಿ, ಸುಮ್ಮನೇ ಕುಳಿತಿದ್ದೀರಲ್ಲ, ಆ ಕಡೆ ಇರುವವರೆಲ್ಲಾ ಅಂದು ರಾಜೀನಾಮೆ ಕೊಟ್ಟು ಈ ಕಥೆ ಈ ಸಂದರ್ಭದಲ್ಲಿ ಬರಬೇಕಾಗಿತ್ತು. ಅಂದು ವಿಶ್ವಸುಂದರಿ ಸ್ಪರ್ಧೆಯನ್ನು ಯಾವ ಮಹಿಳೆಯರರು ವಿರೋಧಿಸುವುದಕ್ಕೆ ಹೋದರೋ ಆದ ಅವಮಾನ ಇಡೀ ಕುಲಕ್ಕೇ ಆದ ಅವಮಾನವಾಗಿದೆ.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಂದು ಯಾವ ಮಹಿಳಾ ಶಾಸಕರಾಗಲೀ ಅಥವಾ ಬೇರೆ ಶಾಸಕರಾಗಲೀ ಒಬ್ಬರೂ ಕೂಡ ವಿರೋಧ ಮಾಡುವುದಕ್ಕೆ ಬರಲಿಲ್ಲ.

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಕುಳಿತುಕೊಳ್ಳಿ ವಾಟಾಳ್‌ರೇ, ಅದೇನೋ ಹೇಳಲಿ ಅವರು.

ಶ್ರೀ ವಾಟಾಳ್ ನಾಗರಾಜ : ನಾವು ಕೇಳುತ್ತೇವೆ. ನೀವು ಸುಮ್ಮನಿರಿ.

(ಗೊಂದಲ)

ಉಪಾಧ್ಯಕ್ಷರು : ಅವರು ಏನು ಹೇಳುತ್ತಾರೆ ಕೇಳಿ.

ಶ್ರೀಮತಿ ಎನ್. ಜ್ಯೋತಿರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕದ ಎಲ್ಲಾ (xx) ಅಪೋಸ್ ಮಾಡಿದ್ದಾರೆ ಸೌಂದರ್ಯ ಸ್ಪರ್ಧೆಯನ್ನು ಎನ್ನುವ ಮಾತನ್ನು ಮಾನ್ಯ ವಾಟಾಳ್ ನಾಗರಾಜರವರು ಏನು ಹೇಳಿದ್ದರು, ಅದು ಕಡತದಲ್ಲಿ ಇರುವುದು ಬೇಡ. ಕರ್ನಾಟಕ ಎಲ್ಲಾ ಮಹಿಳೆಯರು ಅಪೋಜ ಮಾಡಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅದು ಇರಲೇಬೇಕಾಗಿರುವುದು. ಎಲ್ಲಾ ಸಮಗ್ರ ಮಹಿಳೆಯರೂ ಮಾಡಿದರು.

ಶ್ರೀಮತಿ ಎನ್. ಜ್ಯೋತಿರೆಡ್ಡಿ : ಕರ್ನಾಟಕದ ಎಲ್ಲಾ ಮಹಿಳೆಯರು ಅಪೋಜ ಮಾಡಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನೀವು ನಾಲ್ಕು ಜನ ಮಾಡದೇ ಇರಬಹುದು. ಎಲ್ಲಾ ಸಮಗ್ರ ಮಹಿಳೆಯರು ಮಾಡಿದರು.

ಶ್ರೀಮತಿ ಎನ್. ಜ್ಯೋತಿರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ಎಲ್ಲಾ ಮಹಿಳೆಯರು ಮಾಡಿಲ್ಲ, ದಯವಿಟ್ಟು ಅದನ್ನು ಕಡತದಿಂದ ತೆಗೆದುಹಾಕಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೇ, ಸೀತೆ ಇರುವ ಕಡೆ ಶೂರ್ಪನಖಿಯರು ಇದ್ದಾರೆ ಎನ್ನುವುದನ್ನು ಇಲ್ಲಿ ಸರಿಯಾಗಿ ತೋರಿಸಿದ್ದಾರೆ.

ಸದಸ್ಯರೊಬ್ಬರು : ಶೂರ್ಪನಖಿ ಯಾರು ಎನ್ನುವುದನ್ನು ಹೇಳಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅದರ ಜೊತೆಗೆ ದುಶ್ಯಾಸನ, ದುರ್ಯೋಧನ ಎಲ್ಲಾ ಅಲ್ಲಿ ಇದ್ದಾರೆ.

ಉಪಾಧ್ಯಕ್ಷರು : ಅವರು ಮಾತು ಮುಗಿಸಿಲ್ಲ ಅವರು ಏನೋ ಹೇಳುತ್ತಾರೆ ಕೇಳಿ.

ಶ್ರೀಮತಿ ಎನ್. ಜ್ಯೋತಿರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ಶೂರ್ಪನಖಿ ಸಹ ಒಬ್ಬ ಮಹಿಳೆ. ಆ ಮಹಿಳೆ ಬಗ್ಗೆ ತುಂಬಾ ಅಧ್ವಾನವಾಗಿ ಮಾತನಾಡುವುದು ಬೇಡ. ಅದರ ಜೊತೆಯಲ್ಲಿ ರಾವಾಣಾಸುರರು ಇದ್ದಾರೆ.

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಉಪಾಧ್ಯಕ್ಷರೇ, ಶೂರ್ಪನಖಿ ಒಬ್ಬ ದಲಿತ ಮಹಿಳೆ. ಸೀತೆಯನ್ನು ವೈಭವೀಕರಿಸಿ ನಾವು ಶೂರ್ಪನಖಿಯನ್ನು ತೆಗಳುತ್ತೇವಲ್ಲ. ಅವರಿಗೆ ಆದಂತಹ ನೋವು, ಅವಳನ್ನು ತಾತ್ಸಾರ ಮಾಡಿದ್ದಕ್ಕೆ ಇಡೀ ರಾಮಾಯಣದ ಕಥೆ ನಡೆಯುವುದಕ್ಕೆ ಕಾರಣವಾಯಿತು. ಆದುದರಿಂದ ಮಹಿಳೆಯನ್ನು ಕಡೆಗಾಣಿಸಬಾರದು ಎನ್ನುವುದಕ್ಕೆ ಶೂರ್ಪನಖಿ ಸಾಕ್ಷಿಯಾಗಿದ್ದಾಳೆ. ರಾಮ ಮತ್ತು ಲಕ್ಷಣರು ಏನು ಮಾಡಿದರೆಂದರೆ ಒಬ್ಬ ಮಹಿಳೆಯ ಮೂಗು ಕೊಯ್ದರು. ಅನ್ಯಾಯ ಮಾಡಿದರು. ಅವಳು ಮದುವೆ ಆಗುತ್ತೀಯ ಎಂದು ಕೇಳಿದ್ದಕ್ಕೆ, ಆಗುವುದಿಲ್ಲವೆಂದು ಹೇಳಬಹುದಾಗಿತ್ತು, ಇವರು ಬುದ್ಧಿವಂತರು ಆಗಿದ್ದಾರೆ, ಹಾಗೂ ಎಂತಹ ಕ್ರೂರಿಗಳು ಎಂದರೆ ಅವಳ ಮೂಗು ಕೊಯ್ದರು. ಇದು ಸರಿಯಲ್ಲ.

(ಗೊಂದಲ)

ಶ್ರೀ ಕುಂಬ್ಳೆ ಸುಂದರ್‌ರಾವ್ : ಮಾನ್ಯ ಉಪಾಧ್ಯಕ್ಷರೇ, ನಾನು ರಾಮಯಣ ಮಹಾಭಾರತ ಅಭ್ಯಾಸ ಮಾಡಿದವನು. ರಾಮಾಯಣದಲ್ಲಿ ಬರುವ ಶೂರ್ಪನಖಿ ಒಬ್ಬ ದಲಿತ ಮಹಿಳೆ ಎಂದು ನನಗೆ ಗೊತ್ತಿರಲಿಲ್ಲ. ನಾನು ತಿಳಿದ ಹಾಗೆ ಅವಳು ಕಲಿತ ಮಹಿಳೆ. ದುರ್ಬುದ್ಧಿಯಲ್ಲಿ ಕಲಿತ ಮಹಿಳೆ. ಅವಳು ದಲಿತ ಮಹಿಳೆಯಲ್ಲ. ಮದುವೆಯಾಗಿ ಮಗುವನ್ನು ಪಡೆದವಳು; ಮತ್ತೊಬ್ಬನನ್ನು ಬಯಸಿದರೆ ಆಗುವುದು ಇದೆ.

ಶ್ರೀ ಹೆಚ್. ಶಿವಪ್ಪ : ಮಾನ್ಯ ಉಪಾಧ್ಯಕ್ಷರೇ, ಪ್ರಮೀಳಾ ನೇಸರ್ಗಿಯವರು ಒಂದು ಮಾತು ಹೇಳಿದರು, ಅದು ಕಡತದಲ್ಲಿ ಹೋಗಿದೆಯೋ ಇಲ್ಲವೊ ಗೊತ್ತಿಲ್ಲ. ಅವರು ಮೈಮೇಲೆ ಬಿದ್ದರೆ ಏನು ಮಾಡಬೇಕು, ಅದಕ್ಕೆ ಮೂಗು ಕೊಯ್ದರು ಎಂದು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಇಡೀ ಸಮಗ್ರ ಮಹಿಳಾ ಕುಲಕ್ಕೆ ಅಪಮಾನವಾಗಿದೆ ಎಂದತಕ್ಷಣ ಅದನ್ನು ಕಡತದಿಂದ ತೆಗೆಯುವುದಕ್ಕೆ ಅದೇನು ನಗ್ನವೇ? ಮಡಿವಂತಿಕೆಯೇ?

ಉಪಾಧ್ಯಕ್ಷರು : ಎಲ್ಲಾ ಮಹಿಳೆಯರು ಸೌಂದರ್ಯ ಸ್ಪರ್ಧೆಯನ್ನು ವಿರೋಧ ಮಾಡಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಎಂ.ಎಲ್. ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷರೇ, ಅದು ಅವರ ಅಭಿಪ್ರಾಯ. ಇವರ ಅಭಿಪ್ರಾಯ ಹೇಳಿದಾಗ ಅದು ಕಡತಕ್ಕೆ ಹೋಗಬಾರದು ಎಂದು ಏನಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಈ ಸದನಕ್ಕೆ ಮಾನ್ಯ ವಾಟಾಳ ನಾಗರಾಜ್ ಮತ್ತು ಪ್ರಮೀಳಾ ನೇಸರ್ಗಿಯವರೇ ತೀರ್ಪು ಕೊಡತಕ್ಕಂಥವರಲ್ಲ. ಎಲ್ಲ ಅಭಿಪ್ರಾಯವನ್ನು ಮಂಡಿಸುವುದಕ್ಕೆ ಅವಕಾಶವಿದೆ. ದಯಮಾಡಿ ಅವರ ಅಭಿಪ್ರಾಯವನ್ನು ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಹೆಚ್. ಶಿವಪ್ಪ : ಮಾನ್ಯ ಉಪಾಧ್ಯಕ್ಷರೇ, ಅವರು ಸಮಗ್ರ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೇ, ಶಿವರಾಮೇಗೌಡರು ಹೇಳುವುದರಲ್ಲಿ ಅರ್ಥವಿದೆ. ಬರೀ ಸೀತೆ ಬಗ್ಗೆ ಏಕೆ ಹೇಳುತ್ತಿದ್ದೀರಿ, ದುಶ್ಯಾಸನ ನಾನು ಇದ್ದೇನೆ ನನ್ನ ಬಗ್ಗೆ ಏಕೆ ಹೇಳುತ್ತಿಲ್ಲವೆಂದು ಹೇಳುತ್ತಿದ್ದಾರೆ. ಸರಿ, ಒಪ್ಪಿದೆ.

ಶ್ರೀಮತಿ ಎನ್. ಜ್ಯೋತಿರೆಡ್ಡಿ : ಶ್ರೀಮಾನ್ ವಾಟಾಳ ನಾಗರಾಜರವರು ಹೇಳಿದಹಾಗೆ ಸಮಗ್ರ ಕರ್ನಾಟಕದ ಮಹಿಳೆಯರರಿಗೆ ಅಪಮಾನವಾಗಿದೆ ಎಂದಿದ್ದಕ್ಕೆ ನಾನು ಅಪೋಜ್ ಮಾಡಿಲ್ಲ. ಸೌಂದರ್ಯ ಸ್ಪರ್ಧೆಯನ್ನು (xx) ಅಪೋಜ್ ಮಾಡಿದ್ದಾರೆ ಎಂದು ಅವರು ಏನು ಹೇಳಿದ್ದಾರೆ, ಅದು ಕಡತದಲ್ಲಿ ಹೋಗಬಾರದು ಎಂದು ಹೇಳಿದ್ದೇನೆ.

ಉಪಾಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಿ. ಎಲ್ಲರೂ ಮಾಡಿಲ್ಲ ಎನ್ನುವುದಕ್ಕೆ ತಾವು ಹೇಳಿದ್ದೀರಿ, ಅದನ್ನು ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಎಲ್ಲಾ ಎಂದು xx ಎಂದು ಅವರು ಹೇಳಿದ್ದಾರೆ.

ಉಪಾಧ್ಯಕ್ಷರು : ಈ ತರಹ ಮಾಡಿದರೆ ಸದನವನ್ನು ಹೇಗೆ ನಡೆಸುವುದು?

(ಗೊಂದಲ)

ಶ್ರೀ ಹೆಚ್. ಶಿವಪ್ಪ : ಮಾನ್ಯ ಉಪಾಧ್ಯಕ್ಷರೇ, ಬಹಳ ಸೀರಿಯಸ್ ಅಟ್ರಿಬ್ಯೂಷನನ್ನು ನಮ್ಮ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಮಾಡುತ್ತಾರೆ. ಸಜ್ಜನ ಮಹಿಳೆಯರು ಎಲ್ಲರೂ ಮಾಡಿದ್ದಾರೆ ಎಂದರೆ ಅರ್ಥ ಏನು? ಇವರೆಲ್ಲಾ ದುರ್ಜನ ಮಹಿಳೆಯರು, ಕೆಟ್ಟವರು ಎಂದೇ? ಇದು ಕಡತದಲ್ಲಿ ಹೋಗಬಾರದು. ಅವರು ಮಾತ್ರ ಸಜ್ಜನರು ಎಂದು ಅರ್ಥವೇ?

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷರೇ, ಸದನದಲ್ಲಿ ಈ ಮಾತಿಗೆ ಪ್ರಮೀಳಾ ನೇಸರ್ಗಿಯವರು ಕ್ಷಮೆ ಕೇಳಬೇಕಾಗುತ್ತದೆ. ಹಾಗಾದರೆ ಇವರು ಮಾತ್ರ ಸಜ್ಜನರು ಉಳಿದವರು ಸಜ್ಜನವರಲ್ಲ ಎಂದಾಯಿತು.

ಉಪಾಧ್ಯಕ್ಷರು: ಈಗ ನಾನು ಸ್ಪಷ್ಟವಾಗಿ ಹೇಳುತ್ತೇನೆ, ಈಗ ಯಾರಾದರೂ ಮಾತನಾಡಿದರೆ ಕಡತಕ್ಕೆ ಹೋಗುವುದಿಲ್ಲ. ತಾವುಗಳು ದಯಮಾಡಿ ಸಭೆಯ ಕಲಾಪಗಳನ್ನು ಮಾಡುವುದಕ್ಕೆ ಅವಕಾಶ ಮಾಡಿ.

(ಉಪಾಧ್ಯಕ್ಷರ ಆದೇಶದ ಮೇರೆಗೆ ರಿಕಾರ್ಡ ಮಾಡಲಾಗಿಲ್ಲ)

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ನೀವು ಏನು ಮಾತನಾಡಿದರೂ ಕಡತಕ್ಕೆ ಹೋಗುವುದಿಲ್ಲ. ಶ್ರೀರಾಮರೆಡ್ಡಿಯವರು ಮಾಡನಾಡಲಿ. ಮಾನ್ಯ ಶಿವಪ್ಪನವರೇ ತಾವು ದಯಮಾಡಿ

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಕುಳಿತುಕೊಳ್ಳಿ. ಮಾನ್ಯ ವಾಟಾಳ್ ನಾಗರಾಜ್‌ರವರೇ, ಅವರು ಭಾಷಣ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಕುಳಿತಿದ್ದಾರೆ, ನಾನು ಕೇಳಿಕೊಂಡಿದ್ದೇನೆ.

ಉಪಾಧ್ಯಕ್ಷರು: ಇಲ್ಲ, ಅವರು ಮುಕ್ತಾಯ ಮಾಡಬೇಕು. ಇನ್ನು ಕೆಲವು ಜನ ಮಾತನಾಡುವವರು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೇ, ತಾವು ನಮ್ಮ ಪರವಾಗಿ ಇರಬೇಕು. ಅಷ್ಟು ಜನ ಮಹಿಳೆಯರು ಮೈಮೇಲೆ ಬೀಳುವಾಗ ತಾವು ಸಹಕಾರ ಕೊಡುವುದಿಲ್ಲವೆಂದರೆ ಹೇಗೆ?

ಶ್ರೀ ಹೆಚ್. ಶಿವಪ್ಪ : ಅವರು ತಪ್ಪುದಾರಿಗೆ ಹೋಗುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ತಾವು ಮಾತನಾಡುವುದು ಬೇಡ ಎಂದರೆ ಕುಳಿತುಕೊಂಡು ಬಿಡುತ್ತೇನೆ.

ಉಪಾಧ್ಯಕ್ಷರು : ತಾವು ಏನಾದರೂ ತಪ್ಪು ಮಾತನಾಡಿದ್ದಾರೆ ಅದನ್ನು ಕಡತದಿಂದ ತೆಗೆಯುತ್ತೇನೆ.

ಶ್ರೀಮತಿ ಬಿ. ಟಿ. ಲಲಿತಾ ನಾಯಕ್ : ಮಾನ್ಯ ಉಪಾಧ್ಯಕ್ಷರೇ, ಸಜ್ಜನರು, ದುರ್ಜನರು ಯಾರು ಎಂದು ಹೇಳಬೇಕು. ಮಾನ್ಯ ಸದಸ್ಯರು ಸಜ್ಜನರು, ದುರ್ಜನರು ಎನ್ನುವ ಪದವನ್ನು ಬಳಸಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ದುರ್ಜನರು ಎನ್ನುವ ಪದ ಬರಲೇ ಇಲ್ಲ.

ಶ್ರೀಮತಿ ಬಿ.ಟಿ. ಲಲಿತನಾಯಕ : ನಿಮಗೆ ಅಲ್ಲ, ನಮಗೂ ಸೇರಿಸಿಕೊಂಡು ಹೇಳುತ್ತಿದ್ದೇವೆ. ಮಾನ್ಯ ಉಪಾಧ್ಯಕ್ಷರೇ, ಒಂದು ಕಥೆ ಹೇಳುತ್ತೇನೆ, ಈಶ್ವರನಿಗೆ ಬ್ರಹ್ಮನೋಡಪ್ಪ ನಾನು ರಜೆ ಮೇಲೆ ಹೋಗುತ್ತಿದ್ದೇನೆ ಎಂದು, ಆದುದರಿಂದ ಕೆಲವು ಜೀವ ಸೃಷ್ಟಿ ಮಾಡು ಎಂದು ಹೇಳಿ ಹೋದ.

ಶ್ರೀ ವಾಟಾಳ್ ನಾಗರಾಜ್ : ಯಾವತ್ತು? ಎಲ್ಲಿ?

ಶ್ರೀಮತಿ ಎನ್. ಜ್ಯೋತಿರೆಡ್ಡಿ : ನಾವು ಮಾತನಾಡುವಾಗ ಈ ತರಹ ಅಬ್ಜೆಕ್ಟ್ ಮಾಡುವುದು ಸರಿಯಲ್ಲ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಉಪಾಧ್ಯಕ್ಷರೇ, ನಾವೆಲ್ಲಾ ಏನು ಏನ್ನುವುದನ್ನು ಹೇಳಬೇಕಾಗುತ್ತದೆ. ಬ್ರಹ್ಮ ಈಶ್ವರನಿಗೆ ಹೇಳಿದಾಗ ಈಶ್ವರ ಸೃಷ್ಠಿ ಮಾಡಿಬಿಟ್ಟ. ಸೃಷ್ಟಿ ಮಾಡಬೇಕಾದರೆ ಅವನು ಏನು ಮಾಡಿದನೆಂದರೆ ತಲೆಯಲ್ಲಿ ಮೆದುಳು ಹಾಕುವಾಗ ಕೆಲವು ಜನರಿಗೆ ಸ್ವಲ್ಪ ಬಾಕಿ ಇತ್ತು, ಅಷ್ಟರಲ್ಲಿ ಗಣೇಶ ಬಂದ. ಈಶ್ವರ ಹೊರಗಡೆ ಹೋಗುವುದು ಇತ್ತು. ಗಣೇಶನಿಗೆ ಜೀವ ತುಂಬಿಡು ಎಂದು ಹೇಳಿ ಹೋದ. ಗಣೇಶ ಜೀವ ತುಂಬಬಿಟ್ಟು ನಂತರ ನನ್ನ ಕೆಲಸ ಮುಗಿಯಿತು, ಎಂದು ಎಲ್ಲರನ್ನೂ ಭೂಲೋಕಕ್ಕೆ ಕಳುಹಿಸಿದ. ಇದಾದನಂತರ ಈಶ್ವರ ಬಂದ, ಇನ್ನು ಕೆಲವು ಜನರ ತಲೆಗೆ

ಮೆದುಳು ಹಾಕಿರಲಿಲ್ಲ ಎಲ್ಲಿ ಅವರೆಲ್ಲಾ ಎಂದು ಕೇಳಿದ. ಅದಕ್ಕೆ ಗಣೇಶ ಅಯ್ಯೋ ಅದು ನನಗ ಗೊತ್ತಿರಲಿಲ್ಲ; ಅವರನ್ನು ಭೂಲೋಕಕ್ಕೆ ಕಳುಹಿಸಿಬಿಟ್ಟೆ ಎಂದು ಹೇಳಿದ. ಅದಕ್ಕೆ ಈಶ್ವರ ತಕ್ಷಣ ಹೋಗಿ ಅವರನ್ನು ಹುಡುಕಿ ಹಿಡಿದುಕೊಂಡು ಬಾ ಎಂದು ಹೇಳಿದ. ಗಣೇಶ ಬಂದು ನೋಡಿದರೆ ಎಲ್ಲಾ ವಿಧಾನಸಭೆಯಲ್ಲಿ, ಅದರಲ್ಲಿ ಕೆಲವರು ಗ್ಯಾಲರಿಯಲ್ಲಿ ಇದ್ದರು. ಆದುದರಿಂದ ಅವನು ವಾಪಸ್ಸು ಹೊರಟು ಹೋದ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇಲ್ಲ ಇಲ್ಲ. ಎಲ್ಲಾ ಅಲ್ಲಿ (ಆಡಳಿತ ಪಕ್ಷದಲ್ಲಿ) ಬಂದು ಕುಳಿತಿದ್ದಾರೆ. ಅಪ್ಪಿತಪ್ಪಿ ಇಲ್ಲಿಬ್ಬರು ಶಿವಪ್ಪನವರು, ಶಿವರಾಮೇಗೌಡರಂತಹವರು ಬಂದು ಕುಳಿತಿದ್ದಾರೆ

ಶ್ರೀವಾಟಾಳ ನಾಗರಾಜ : ಎಲ್ಲಾ ಸಂಪೂರ್ಣವಾಗಿ ಆಡಳಿತ ಪಕ್ಷದಲ್ಲಿ ಇದ್ದಾರೆ.

ಉಪಾಧ್ಯಕ್ಷರು : ಈಗ ಎಲ್ಲಾ ಕುಳಿತುಕೊಳ್ಳಿ. ಶ್ರೀರಾಂರೆಡ್ಡಿಯವರೆ ತಾವುಮಾತನಾಡಿ ಈಗಾಗಲೇ 45 ನಿಮಿಷವಾಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ಈಗ ಚರ್ಯೆಯಾಗಿರತಕ್ಕಂಥ ಸಮಯವನ್ನು ನನ್ನ ಲೆಕ್ಕಕ್ಕೆ ದಯವಿಟ್ಟು ಹಾಕಬೇಡಿ.

ಉಪಾಧ್ಯಕ್ಷರು: ನೀವು ಏಕೆ ಯೀಲ್ಡ ಆಗುತ್ತೀರಿ? ತಾವು ಮಾತನಾಡಿ. ಅಲ್ಲಿ ಅಕ್ಕಪಕ್ಕದವರು ಹೇಳಿದಹಾಗೆ ತಾವು ಕೇಳುತ್ತೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ಕಾನೂನು ಪಾಲನೆ ಹೆಸರಿನಲ್ಲಿ ಈ ಪೊಲೀಸರು ನಡೆಸುತ್ತಿರತಕ್ಕಂಥ ದಬ್ಬಾಳಿಕೆ, ದೌರ್ಜನ್ಯ, ಮಾನವ ಹಕ್ಕುಗಳ ಹರಣ, ಇವತ್ತು ನಿಲ್ಲಿಸಬೇಕಾಗಿದೆ. ಅದು ಯಾವುದೇ ರಾಜ್ಯದಲ್ಲಿ ಆಗಿರಲಿ. ಆದರೆ ನಾನು ಈ ರಾಜ್ಯದಲ್ಲಿ ಇರುವುದರಿಂದ ಈ ರಾಜ್ಯದಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅದರಲ್ಲೂ ಬಹಳ ಮುಖ್ಯವಾಗಿ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಯಾದಮೇಲೆ ಆಗಿರತಕ್ಕಂಥ ಪೊಲೀಸರ ದೌರ್ಜನ್ಯವನ್ನು ನಾನು ಈ ರಾಜ್ಯದ ಜನತೆಯ ಪರವಾಗಿ ಹೇಳುತ್ತಿದ್ದೇನೆ; ಈ ರಾಜ್ಯದ ಜನತೆ ಕ್ಷಮಿಸುವುದಿಲ್ಲ. 1980ರಲ್ಲಿ ಮಾನ್ಯ ಗುಂಡುರಾಯರಿಗೆ ಏನು ಸಮಸ್ಯೆ ಬಂತು ಗೋಲಿಬಾರ್ ಮಾಡಿಸಿದ್ದಕ್ಕಾಗಿ ಎನ್ನುವುದು ಇವರಿಗೆ ಜ್ಞಾಪಕ ಇರಬೇಕು. ಅಧಿಕಾರ ನಡೆಸುತ್ತಿದ್ದೀರಿ, ಐದು ವರ್ಷ ಅಧಿಕಾರ ನಡೆಸುವುದಕ್ಕೆ ಈ ರಾಜ್ಯದ ಜನತೆ ನಿಮಗೆ ಅವಕಾಶ ಕೊಟ್ಟಿದ್ದಾರೆ. ಆದರೆ ಗೋಲಿಬಾರ್ ನಡೆಸುವುದಕ್ಕೆ ಅಲ್ಲ. ಯಾರಮೇಲೆ ನಡೆಸಿದಿರ ನೀವು ಗೋಲಿಬಾರನ್ನು, ನಿಮ್ಮ ಅಂಕಿಅಂಶಗಳನ್ನು ತೆಗೆದು ನೋಡಿ. ರೈತರು ಹೋರಾಟ ಮಾಡಿದರೆ, ಪೊಲೀಸರನ್ನು ಬಿಡುತ್ತೀರಿ, ಕಾರ್ಮಿಕರ ಹೋರಾಟ ಮಾಡಿದರೆ ಪೊಲೀಸರನ್ನು ಬಿಡುತ್ತೀರಿ, ವಿದ್ಯಾರ್ಥಿಗಳು ಹೋರಾಟ ಮಾಡಿದರೆ ಪೊಲೀಸರನ್ನು ಬಿಡುತ್ತೀರಿ.

4.50 ಪಿ.ಎಂ.

ಯುವಜನರು ಹೋರಾಟ ಮಾಡಿದರೆ ಪೊಲೀಸರನ್ನು ಬಿಡುತ್ತೀರಿ, ರೈತರು ತಮ್ಮ ನ್ಯಾಯಯುತವಾದ ಬೇಡಿಕೆಗಳಿಗೆ ಹೋರಾಟ ಮಾಡತಕ್ಕಂಥ ಸಂದರ್ಭದಲ್ಲಿ ಪೊಲೀಸಿನವರು

ರೈತರಿಗೆ ಬೆಂಬಲವಾಗಿ ನಿಲ್ಲಬೇಕೋ ಅಥವಾ ಯಾರಿಗೆ ಬೆಂಬಲವಾಗಿ ನಿಲ್ಲಬೇಕು? ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರು ತಮ್ಮ ಕನಿಷ್ಠ ವೇತನಕ್ಕೋಸ್ಕರ, ತಮ್ಮ ಹಕ್ಕುಗಳಿಗೋಸ್ಕರ ಹೋರಾಟ ಮಾಡುತ್ತಾ ಇರತಕ್ಕಂಥ ಸಂದರ್ಭದಲ್ಲಿ ನಿಜವಾಗಿ ಇವರು ಕಾನೂನು ಪಾಲನೆ ಮಾಡುವುದಾದರೆ ಕಾರ್ಮಿಕರ ಪರವಾಗಿ ನಿಲ್ಲುವುದರ ಬದಲು ಮಾಲೀಕರ ಪರವಾಗಿ ನಿಲ್ಲುತ್ತಾರೆ. ನೀವು ಕರ್ನಾಟಕ ರಾಜ್ಯದ ಪೋಲೀಸ್ ಇತಿಹಾಸವನ್ನು ತೆಗೆದು ನೋಡಿ. ಕಾರ್ಮಿಕರು ಹೋರಾಟ ಮಾಡತಕ್ಕಂಥ ಪ್ರತಿಯೊಂದು ಸಂದರ್ಭದಲ್ಲೂ ಪೋಲಿಸರು ಮಾಲೀಕರ ಪರವಾಗಿ ವರ್ತನೆ ಮಾಡಿದ್ದಾರೆಯೆ ಹೊರತು, ಕಾರ್ಮಿಕರ ಪರವಾಗಿ ಒಂದೇ ಒಂದು ದಿವಸ ವರ್ತನೆ ಮಾಡಿಲ್ಲ; ಯಾಕೆ ಸ್ವಾಮಿ? ಇದು ಇಲ್ಲಿರತಕ್ಕಂಥ ಮೂಲಭೂತವಾದ ಪ್ರಶ್ನೆ? ರಾಜ್ಯದ ಅಧಿಕಾರ, ರಾಜ್ಯಾಧಿಕಾರ, ಅದನ್ನೆ ಜಯಪ್ರಕಾಶ್ ನಾರಾಯಣರವರು ಹೇಳಿದ್ದುದು, ರಾಜ್ಯಶಕ್ತಿ ಯಾರಮೇಲೆ ಉಪಯೋಗ ಮಾಡುತ್ತಿದ್ದೀರಿ ನೀವು, ರಾಜ್ಯಶಕ್ತಿಯನ್ನು ಉಪಯೋಗ ಮಾಡುತ್ತಿರುವುದು ಜನಗಳ ಮೇಲೆ, ಜನಗಳ ಹಕ್ಕುಗಳ ಮೇಲೆ ನೀವು ಉಪಯೋಗ ಮಾಡುತ್ತಿದ್ದೀರಿ. ಆದ್ದರಿಂದ ನಾನು ಇವೊತ್ತು ಕೇಳುತ್ತಾ ಇರುವಂಥದ್ದು, ನಿಜವಾಗಿಯೂ ಕಾನೂನು ಪಾಲನೆ ಎಂದು ಹೇಳಿದರೆ ಸಾಮಾನ್ಯ ಜನರ, ನಾಗರೀಕ ಹಕ್ಕುಗಳನ್ನು ರಕ್ಷಣೆ ಮಾಡತಕ್ಕಂಥ ಕಾಲದಲ್ಲಿ ಪೊಲೀಸರು ಅವರ ರಕ್ಷಣೆಗೆ ಬಂದಾಗ, ನಿಜವಾದ ಕಾನೂನುಪಾಲನೆ ಆಗುತ್ತದೆ. ಈ ರಾಜ್ಯದ ದಲಿತರು ಅವರಮೇಲೆ ನಡೆಯತಕ್ಕಂಥ ದೌರ್ಜನ್ಯಗಳ ಬಗ್ಗೆ ಪ್ರತಿಭಟನೆ ಮಾಡಿದರೆ ಪೊಲೀಸರನ್ನು ಕಳುಹಿಸುತ್ತೀರಿ, ನೀವು, ಕೇಸಗಳನ್ನು ಹಾಕುತ್ತೀರಿ. ಈ ರಾಜ್ಯದಲ್ಲಿ ಇವೊತ್ತು ಕಾನೂನು ಪಾಲನೆ ಹೇಗಾಗಿದೆಯೆಂದರೆ ಸನ್ಮಾನ್ಯ ಉಪಾಧ್ಯಕ್ಷರೆ ನಾನು ಪ್ರಶ್ನೆ ಕೇಳುತ್ತೇನೆ, ಏಕೆ ಈ ಕಾನೂನು ಪ್ರಶ್ನೆ ಬರುತ್ತೇ? ಏಕೆ ಉಲ್ಲಂಘನೆ ಆಗುತ್ತೆ, ಹೆಜ್ಜಾಲದಲ್ಲಿ ಏಕೆ ಗೋಲಿಬಾರ್ ಆಯಿತು, ರಸ್ತೆ ರೋಕೊ ಮಾಡತಕ್ಕ ವಾತಾವರಣವನ್ನು ಸೃಷ್ಟಿ ಮಾಡಿದಂಥ ವೆಳ್ಳಿಯಪ್ಪನಿಗೆ ಇವೊತ್ತು ಶಿಕ್ಷೆ ಇಲ್ಲ. ಅವನೇ ಮೂಲಕಾರಣ, ಅವನ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಆದರೆ ಅವನ ಪರವಾಗಿ ನೀವು ನೂರಾರು ಕಾರ್ಮಿಕರ ಹಕ್ಕುಗಳನ್ನು ಸದೆಬಡಿಯುವುದಕ್ಕೆ, ಸಾವಿರಾರು ನಾಗರೀಕನಿಗೆ, ಆ ರಸ್ತೆಯಲ್ಲಿ ಓಡಾಡತಕ್ಕಂಥ ಜನರಿಗೆ ತೊಂದರೆ ಮಾಡತಕ್ಕಂಥ ಪರಿಸ್ಥಿತಿಯನ್ನು ಉಂಟುಮಾಡಿದಂಥ ಒಬ್ಬ ಕಾರ್ಖಾನೆಯ ಮಾಲೀಕನ ಪರವಾಗಿ ನೀವು ನಿಂತಿರೇ ಹೊರತು, ನಿಮ್ಮ ಪೊಲೀಸಿನವರು ಜನರ ಪರವಾಗಿ ನಿಲ್ಲಲಿಲ್ಲ. It is not an exagggeration if I say that State's power has been used byany Government to suppress the fundamental rights of the individuals. ಈ ರಾಜ್ಯಶಕ್ತಿ ಹೋಗಬೇಕು, ಅದಕ್ಕೆ ಜಯಪ್ರಕಾಶ್ ನಾರಾಯಣ ರವರು ಹೇಳಿದ್ದುದು, ಜನಶಕ್ತಿ ವರ್ಸಸ ರಾಜ್ಯಶಕ್ತಿ, ಪೀಪಲ್ಸ ಪವರ್ಸ್ ವರ್ಸಸ್ ಸ್ಟೇಟ ಪವರ್, ಯಾರು ನಿಲ್ಲಬೇಕು ಪ್ರಜಾಪ್ರಭುತ್ವದಲ್ಲಿ; ಮಾನ್ಯ ಸದಸ್ಯರಿಗೆ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ನಾವು ಇದನ್ನು ಚರ್ಚೆ ಮಾಡಬೇಕಾಗಿದೆ. Whether you should be with the people's power State's power. ರಾಜ್ಯಶಕ್ತಿ ಏತಕ್ಕೆ ಇರಬೇಕು, ಜನರನ್ನು ರಕ್ಷಣೆ ಮಾಡಲಿಕ್ಕೆ ರಾಜ್ಯಶಕ್ತಿ ಇರಬೇಕೋ, ಜನರನ್ನು ತುಳಿಯಲಿಕ್ಕೆ ರಾಜ್ಯಶಕ್ತಿ ಇರಬೇಕೋ, ಪ್ರಜಾಪ್ರಭುತ್ವದಲ್ಲಿ ಜನಶಕ್ತಿಯನ್ನು ರಕ್ಷಣೆ ಮಾಡಲಿಕ್ಕೆ, ಜನತೆಯ ಅಧಿಕಾರವನ್ನು ಉಳಿಸಲಿಕೆ ರಾಜ ದ ಶಕಿ ಇರಬೇಕೋ ಹೊರತು ರಾಜ ದ ಶಕಿ ಆಡಳಿತದ ಹೆಸರಿನಲ್ಲಿ ಆ ಅಸ್ತ್ರಗಳನ್ನು

ದಮನ ಮಾಡಲಿಕ್ಕೆ ಉಪಯೋಗಿಸಬಾರದು, ಇದು ನಿಜವಾಗಿರತಕ್ಕ ಕಾನೂನು ಪಾಲನೆ. ಆ ಕಾನೂನು ಪಾಲನೆಯನ್ನು ಬಿಟ್ಟು, ನೀವು ಪೊಲೀಸಿನವರು ... ಸ್ವಾಮಿ ಇವೊತ್ತು ಪೊಲೀಸಿನವರಿಗೆ ಲಾಠಿ ಕೊಟ್ಟಿದ್ದಾರೆ, ಬಂದೂಕು ಕೊಟ್ಟಿದ್ದಾರೆ, ಕೊಡಲಿ ಸಂತೋಷ. ಆದರೆ ಕೊಟ್ಟಿರುವಂಥದ್ದು ಯಾಕೆ? ಇವರು ಪುಕ್ಕಲು ಜನ ಪೊಲೀಸಿನವರು, ಲಾಠಿ ಇಲ್ಲದೆ ಇವರ ಕೈಯಲ್ಲಿ ಓಡಾಡುವುದಕ್ಕಾಗುವುದಿಲ್ಲ, ಇವರು ಹೆದರುತ್ತಾರೆ. ಇವರು ಲಾಠಿ ಬಿಟ್ಟು ಓಡಾಡಲಿ, ಅದಕ್ಕೆ ಸಾಧ್ಯವಿಲ್ಲ. ಯಾರ ಮೇಲೆ ಇವರು ಲಾಠಿ ಪ್ರಯೋಗಿಸುವುದು, ಯಾರ ಮೇಲೆ ಇವರ ಬಂದೂಕು ಪ್ರಯೋಗಿಸುವುದು? ನಿರಾಯುಧರ ಮೇಲೆ, ಮುಗ್ಧರ ಮೇಲೆ, ಅಸಹಾಯಕರ ಮೇಲೆ ಲಾಠಿ, ಗುಂಡು, ಬಂದೂಕವನ್ನು ಉಪಯೋಗಿಸುತ್ತೀರಿ ನೀವು ಇದು ಪ್ರಜಾಪ್ರಭುತ್ವದ ಮೌಲ್ಯವೆ? ಸಾಮಾನ್ಯ ರಾಜು ಆಳ್ವಿಕೆ ಮಾಡುತ್ತಿದ್ದಂಥ ಸಂದರ್ಭದಲ್ಲೂ ಕೂಡ ಯುದ್ಧ ಬಂದರೆ ನಿರಾಯುಧರ ಮೇಲೆ ಯುದ್ಧ ಮಾಡಬಾರದು ಎಂದು ಹಿಂದಿನಿಂದ ನಿಯಮ ಇದೆ. ನಿರಾಯುಧರ ಮೇಲೆ ಆಯುಧಗಳನ್ನು ಎತ್ತಬಾರದು ಎಂದು ನಮ್ಮ ಶಾಸ್ತ್ರಗಳಲ್ಲಿ ನಿಯಮ ಇದೆ. ಆದರೆ ನಿಮ್ಮ ಪೊಲೀಸಿನವರು ಮಾಡುವುದು ಏನು? ನಿರಾಯುಧರಾಗಿರತಕ್ಕ ರೈತರಮೇಲೆ, ನಿರಾಯುಧರಾಗಿರತಕ್ಕ ಕಾರ್ಮಿಕರ ಮೇಲೆ ಲಾಠಿ, ಗುಂಡನ್ನು ಹಾರಿಸುತ್ತೀರಿ ನೀವು. ಇದು ಮಾನವೀಯ ಮೌಲ್ಯವೆ ಅಥವಾ ಪ್ರಜಾ ಪ್ರಭುತ್ವದ ಮೌಲ್ಯಗಳೆ ಎಂದು ನಾವು ಇವೊತ್ತು ಚರ್ಚೆಗೆ ಒಳಪಡಿಸಬೇಕಾಗುತ್ತದೆ. ಹಾಗಾಗಿ ಇವೊತ್ತು ಸನ್ಮಾನ್ಯ ಅಧ್ಯಕ್ಷರೆ ನಾನು ವಿನಂತಿ ಮಾಡಿಕೊಳ್ಳುವಂಥದ್ದು, ಈ ಕಾನೂನುಪಾಲನೆ ಹೆಸರಿನಲ್ಲಿ ನಡೆಯತಕ್ಕಂಥ ಈ ದಬ್ಬಾಳಿಕೆ, ದೌರ್ಜನ್ಯ ನಿಲ್ಲಬೇಕಾದರೆ ನಾವೆಲ್ಲರೂ ಕೂಡ ಆತ್ಮಾವಲೋಕನ ಮಾಡಬೇಕಾಗಿದೆ.

ಶ್ರೀ ಎಚ್. ಶಿವಪ್ಪ : ಪಶ್ಚಿಮಬಂಗಾಳದಲ್ಲಿ ಪೊಲೀಸಿನವರಿಗೆ ಲಾಠಿ ಇಲ್ಲ;

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಇದು ವಿಕೃತ ಸ್ವಭಾವದ ಅಸ್ತ್ರರೂಪ, ನಾನು ಪ್ರಾರಂಭದಲ್ಲೇ ಹೇಳಿದ್ದೇನೆ. ಯಾವುದೇ ಒಂದು ರಾಜ್ಯದ ಪ್ರಶ್ನೆಯಲ್ಲ ನಾನು ಹೇಳುತ್ತಿರುವಂಥದ್ದು. ಇಡೀ ಪೊಲೀಸ್ ವ್ಯವಸ್ಥೆ ಬಗ್ಗೆ ನಾನು ಮಾತನಾಡುತ್ತಿದ್ದೇನೆ, ಯಾವುದೇ ಒಂದು ರಾಜ್ಯದ ಪ್ರಶ್ನೆ ಅಲ್ಲ. ಈ ರೀತಿ ಮಾತನಾಡತಕ್ಕಂಥದ್ದು ನಮಗೂ ಗೊತ್ತಿದೆ, ನೀವು ಅಲ್ಲಿ ಹೇಳಿದರೆ ನಾನು ಇಲ್ಲಿ ಹೇಳುತ್ತೇನೆ, ಈ ರಾಜ್ಯದಲ್ಲಿ ನೀವು ಇದ್ದೀರಿ, ಈ ರಾಜ್ಯದ ಬಗ್ಗೆಯೇ ಮಾತನಾಡಿ. ಪ್ರತಿಯೊಂದಕ್ಕೂ ಮಿತಿ ಇರುತ್ತದೆ, ಆದರೆ ತಾಳ್ಮೆಯನ್ನು ಪರೀಕ್ಷೆ ಮಾಡಬಾರದು.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಉಪಾಧ್ಯಕ್ಷರೆ, ಶ್ರೀರಾಂರೆಡ್ಡಿಯವರು ಒಂದು ಮುಖ್ಯವಾದುದರ ಬಗ್ಗೆ ಮಾತನಾಡುತ್ತಿದ್ದಾರೆ, ಇದಕ್ಕೆ ಬರೀ ಪೊಲೀಸಿನವರೇ ಕಾರಣವೆ, ಇಲ್ಲ ಆಡಳಿತ ವ್ಯವಸ್ಥೆ ಮತ್ತು ಪೊಲೀಸಿನವರಿಗೆ ಕೊಡುತ್ತಾ ಇರತಕ್ಕಂಥ ತರಬೇತಿಯೂ ಕಾರಣವೆ ಅದನ್ನೂ ತಾವು ದಯವಿಟ್ಟು ಹೇಳಬೇಕು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ನಾನು ಪ್ರಾರಂಭದಲ್ಲೇ ಹೇಳಿದ್ದೇನೆ. ಅವರನ್ನು ಬೆಳೆಸುತ್ತಾ ಇರತಕ್ಕಂಥ ವಿಧಾನದಲ್ಲೆ ದೋಷ ಇದು. ಹಾಗಾಗಿ ಇವೊತ್ತು ಇಡೀ ಪೊಲೀಸ್ ವ್ಯವಸ್ಥೆ, ನಾನು ಹೇಳಿದ್ದೇನೆ ರಾಜ್ಯ ವ್ಯವಸ್ಥೆ, ರಾಜ್ಯಶಕ್ತಿ. ಇಡೀ ರಾಜ್ಯಶಕ್ತಿಯೇ ಆ ಸ್ಥಿತಿಯಲ್ಲಿದೆ ಎಂಬ ವಿಷಯವನ್ನು

ನಾನು ಹೇಳಿದ್ದೇನೆ. ಆದರೆ ಈ ಕಾನೂನಿನ ಅವ್ಯವಸ್ಥೆ ಉಂಟಾಗತಕ್ಕಂಥದ್ದು ಸರ್ಕಾರಗಳು ಮೂಲಭೂತವಾಗಿ ಅನುಸರಿಸತಕ್ಕಂಥ ಧೋರಣೆಗಳ ಪ್ರತಿಫಲವಾಗಿ. ರೈತವಿರೋಧಿ ಧೋರಣೆ ಅನುಸರಿಸಿದಾಗ ರೈತರು ನಿಡಿದೇಳುತ್ತಾರೆ. ಕಾರ್ಮಿಕರ ವಿರೋಧಿ ಧೋರಣೆ ತಳೆದಾಗ ಕಾರ್ಮಿಕರು ಹೋರಾಟಕ್ಕೆ ಬರುತ್ತಾರೆ. ವಿದ್ಯಾರ್ಥಿ ವಿರೋಧಿ ಧೋರಣೆಗಳನ್ನು ನೀವು ರೂಪಿಸಿದಾಗ ವಿದ್ಯಾರ್ಥಿಗಳು ಹೋರಾಟಕ್ಕೆ ಬರುತ್ತಾರೆ. ಅದರಲ್ಲಿ ಹೇಗೆ ಕಾನೂನು ರಕ್ಷಣೆ ಎಂದು ಕೇಳುತ್ತೀರಿ ನೀವು? ಅದು ಕೇಳಲಿಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಆ ಕಾನೂನು ಪರಿಪಾಲನೆ ಅವ್ಯವಸ್ಥೆಯಾಗಿದೆ ಎಂದರೆ ಆ ಕಾನೂನು ಅವ್ಯವಸ್ಥೆ ಆಗಲಿಕ್ಕೆ ಸರ್ಕಾರ ಅನುಸರಿಸತಕ್ಕ ಧೋರಣೆಗಳೇ ಮೂಲಭೂತವಾದ ಕಾರಣಗಳು. ಆ ಸಮಸ್ಯೆಗಳನ್ನು ಪರಿಹಾರ ಮಾಡುವುದರ ಬದಲು ಪೊಲೀಸಿನವರನ್ನು ಉಪಯೋಗಿಸಿ ಧಮನ ಮಾಡತಕ್ಕಂಥದ್ದು ಇದೆಯಲ್ಲ ಅದು ಬಹಳ ಕೆಟ್ಟದಾದಂಥ ನೀತಿ. ಸನ್ಮಾನ್ಯ ಉಪಾಧ್ಯಕ್ಷರೆ, ಇನ್ನು ಬಹಳ ಮುಖ್ಯವಾದಂಥ ಅಂಶ ಇದೆ. ಇದು ಎಲ್ಲಾ ಭಾಷಣಗಳಲ್ಲೂ ಇದೆ. ವಿದ್ಯುಚ್ಛಕ್ತಿ ಸಮಸ್ಯೆ, ಏನು ನೀವು ವಿದ್ಯುಚ್ಛಕ್ತಿ ಸಮಸ್ಯೆ ಪರಿಹಾರ ಮಾಡಿರತಕ್ಕಂಥದ್ದು. ಎರಡು ವರ್ಷ ಮೂರು ತಿಂಗಳಾಯಿತು ನೀವು ಬಂದು ಎರಡು ವರ್ಷ ಮೂರು ತಿಂಗಳ ಹಿಂದೆ ರಾಜ್ಯಪಾಲರ ಭಾಷಣದಲ್ಲಿ ವಿದ್ಯುಚ್ಛಕ್ತಿ ಸಮಸ್ಯೆ ಬಗ್ಗೆ ಏನು ಹೇಳಿದ್ದೀರಿ, ಅದೇ ವಿಷಯ ಮತ್ತೆ ಪುನರಾವರ್ತನೆಯಾಗಿದೆಯೆ ಹೊರತು ಪರಿಸ್ಥಿತಿ ಸುಧಾರಿಸಿದೆ ಎನ್ನುವುದಕ್ಕೆ ಏನಾದರೂ ಪುರಾವೆ ಈ ರಾಜ್ಯದಲ್ಲಿ ಇದೆಯೆ? ನಾನು ಒಂದೇ ಒಂದು ಉದಾಹರಣೆಯನ್ನು ನಿಮಗೆ ಹೇಳುತ್ತೇನೆ. ನಮ್ಮಲ್ಲಿ ಇವೊತ್ತು ವಿದ್ಯುಚ್ಛಕ್ತಿ ಉತ್ಪಾದನೆ ಹೆಚ್ಚು ಕಡಿಮೆ ಸ್ಥಗಿತ ಆಗಿದೆ ಎಂದೇ ಹೇಳಬಹುದು. ಅದಕ್ಕೆ ಯಾವುದೇ ಒಂದು ಸರ್ಕಾರವೆ ಕಾರಣ ಎಂದೂ ಕೂಡ ನಾನು ಹೇಳುತ್ತಾ ಇಲ್ಲ. ಹಿಂದೆ ಇದ್ದಂಥ ಸರ್ಕಾರಗಳೂ ಇದಕ್ಕೆ ಕಾರಣ ಇದೆ, ಈಗಿದ್ದಂಥ ಸರ್ಕಾರವೂ ಕಾರಣ ಇದೆ, ಆದರೆ ಎಲ್ಲಾ ಸರ್ಕಾರಗಳು ಕಾರಣ ಇದೆ ಎಂದು ಹೇಳಿಬಿಟ್ಟು ತನ್ನ ಜವಾಬ್ದಾರಿಯಿಂದ ನುಣಚಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಯಾರ ಮೇಲೋ ಹೇಳಿಬಿಟ್ಟು ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ನಾನು ಒಂದೇ ಒಂದು ವಿಷಯವನ್ನು ನಿಮ್ಮ ಗಮನಕ್ಕೆ ತರುತ್ತೇನೆ. ವಿದ್ಯುಚ್ಛಕ್ತಿಯ ಉತ್ಪಾದನೆ ಇಲ್ಲ, ಬೇಡಿಕೆ ಹೆಚ್ಚಾಗಿದೆ, ಸೋರಿಕೆ ಹೆಚ್ಚಾಗಿದೆ ಇದೆಲ್ಲವೂ ನಿಜ. ಆದರೆ ಅದನ್ನು ತಡೆಯಲಿಕ್ಕೆ ನೀವು ಏನು ಕಾರ್ಯಕ್ರಮ ಹಾಕಿದ್ದೀರಿ. ವಿದ್ಯುಚ್ಛಕ್ತಿಯ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ, ವಿದ್ಯುಚ್ಛಕ್ತಿಯ ವಿತರಣೆಯಲ್ಲಿ ಆಗತಕ್ಕ ಲೋಪದೋಷಗಳ ಬಗ್ಗೆ ಗಮನ ನೀಡಬೇಕಾಗಿದೆ.

ಶಿವನಸಮುದ್ರದಲ್ಲಿ ವಿದ್ಯುತ್ ಉತ್ಪಾದನೆ ಮಾಡುವಂತಹ ಅತೀ ಹಳೆಯದಾದಂತಹ ಒಂದು ಘಟಕವಿದೆ. ಅಲ್ಲಿ ಆರು ಬಾಯ್ಲರಗಳಿವೆ. ಆ ಆರರಲ್ಲಿ ಕೆಲಸ ಮಾಡುತ್ತಿರುವಂಥಾದ್ದು ಮೂರು ಬಾಯ್ಲರ್ ಗಳು ಮಾತ್ರ. ಇವು ಸುಮಾರು 12 ವರ್ಷಗಳಿಂದ ಕೆಲಸ ಮಾಡುತ್ತಿಲ್ಲ. ಕಾರಣವೇನು ಎಂದು ಕೇಳಿದರೆ ಕೆಟ್ಟು ಹೋಗಿದೆ ಎಂದು ನಾನು ಸ್ಥಳಕ್ಕೆ ಹೋಗಿದ್ದಂತಹ ಸಂದರ್ಭದಲ್ಲಿ ಅಲ್ಲಿ ತಿಳಿಸಿದರು. ರಿಪೇರಿ ಏಕೆ ಮಾಡಲಿಲ್ಲ? ಇದಕ್ಕೆ ಬೇಕಾದಂತಹ ಸಾಮಾನುಗಳು ಸಿಗುವುದಿಲ್ಲವೇ ಎಂದು ಕೇಳಿದರೆ ಅವರು ಈ ಜನರೇಟರಗಳನ್ನು ತೆಗೆದುಕೊಂಡಾಗಲೆ ಇವುಗಳ ಸ್ಪೇರ್ ಪಾರ್ಟ್ಸ್‌ಗಳನ್ನು ತಂದಿದ್ದೇವೆ. ಅದನ್ನು ಜೋಡಿಸಲು ಆಗಲಿಲ್ಲವೆಂದು ಹೇಳುತ್ತಾರೆ. ಆ ಸ್ಪೇರ್ ಪಾರ್ಟ್ಸ್‌ಗಳನ್ನು ಜೋಡಿಸಿ ವಿದ್ಯುತ್ ಉತ್ಪಾದನೆಯನ್ನು ಮಾಡುವುದಕ್ಕೆ 10-12 ವರ್ಷಗಳು ಬೇಕೇ? ಈ ವಿಚಾರದಲ್ಲಿ

ನಿಮಗೆ ಪ್ರಾಮಾಣಿಕವಾದಂತಹ ಕಳಕಳಿ ಇದ್ದಿದ್ದರೆ ಇವತ್ತು ಅಲ್ಲಿ ಕೆಲಸ ಮಾಡದೇ ಇರುವಂತಹ ಜನರೇಟರಗಳನ್ನು ಸರಿಪಡಿಸಿ ಕೆಲಸ ಮಾಡಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದೇ ರೀತಿಯಲ್ಲಿ ಶರಾವತಿಯಲ್ಲಿ ಮೂರು ಜನರೇಟುಗಳು ಕೆಲಸ ಮಾಡುತ್ತಿಲ್ಲ. ಅಲ್ಲಿ ವಿದ್ಯುತ್ ಉತ್ಪಾದನೆಯಾಗುತ್ತಿಲ್ಲವೆಂದು ನೀವು ಹೇಳುತ್ತೀರಿ. ಅದು ಏಕೆ ಆಗುತ್ತಿಲ್ಲ? ಇದರಲ್ಲಿ ನೀವು ಹಲವಾರು ಪಟ್ಟಿಗಳನ್ನು ಹೇಳಿದ್ದೀರಿ. ಈ ಯೋಜನೆಗಳನ್ನು ಕಾರ್ಯಗತ ಮಾಡುತ್ತೇವೆ, ಆ ಯೋಜನೆಗಳನ್ನು ಹೇಳುತ್ತೇನೆ. ಇದರ ಕೆಲಸ 1992ನೇ ಇಸವಿಗೆ ಮುಗಿಯಬೇಕಾಗಿತ್ತು, ವಿದ್ಯುತ ಉತ್ಪಾದನೆಯಾಗಬೇಕಾಗಿತ್ತು. ಆದರೆ 1997ನೇ ಇಸವಿಗೆ ಬಂದರೂ ಕೂಡ ಇನ್ನು ವಿದ್ಯುತ್ ಉತ್ಪಾದನೆಯಾಗಿಲ್ಲ. ಏಕೆ ಆಗಿಲ್ಲವೆಂದರೆ ಒಂದು ಕಡೆ ಕೆ.ಪಿ.ಸಿ.ಯವರು ಆಡಳಿತಾತ್ಮಕವಾದಂತಹ ದೋಷಗಳು, ಇನ್ನೊಂದು ಕಡೆ ಸರ್ಕಾರದವರ ನಿರ್ಲಕ್ಷ್ಯ, ಮತ್ತೊಂದು ಕಡೆ ಪರಿಸರವಾದಿಗಳು ಕೇಸ್ ಹಾಕಿದರು. ಇದೆಲ್ಲಾ ಸಬೂಬನ್ನು ಹೇಳುತ್ತಿದ್ದೀರಿ. ಅಲ್ಲಿ ವಾಸ್ತವವಾಗಿ ಇವತ್ತು ಕೂಡ ಕೆಲಸ ನಡೆಯುತ್ತಿಲ್ಲ. ಇದನ್ನು ಸುಪ್ರೀಂಕೋರ್ಟ ಕೂಡ ರಿಜೆಕ್ಟ ಮಾಡಿತು. ಏಕೆಂದರೆ ಕೆ.ಪಿ.ಸಿಯವರ ಎಸ್.ಆರ. ರೇಟನಲ್ಲಿ ಪರಿಷ್ಕರಣ ಮಾಡಲಿಲ್ಲವೆಂಬುದು ಒಂದೇ ಒಂದು ಕಾರಣಕ್ಕೋಸ್ಕರ ಈ ಶರಾವತಿ ಟೇಲೇಸನ ಕೆಲಸ ನಿಂತಿದೆ. ಆ ಕೆಲಸವೂ ಪೂರ್ತಿಯಾಗಿಲ್ಲ. 2-3 ವರ್ಷಗಳಿಂದ ಕೆಲಸ ನಿಂತಿದೆ. ಸರ್ಕಾರಕ್ಕೆ ಇದರಿಂದ ಏನಾದರೂ ಲಾಭವಿದೆಯೇ? ಇಲ್ಲ ಸರ್ಕಾರಕ್ಕೆ ನಷ್ಟವೇ ಹೊರತು ಕೆಲಸ ನಿಂತಿರುವುದರಿಂದ ಲಾಭವಿಲ್ಲ. ಏಕೆಂದರೆ ಇವತ್ತು ಕಂಟ್ರಾಕ್ಟರ್ ಗಳು ಎಲ್ಲಾ ಬಿಲಗಳನ್ನು ಹಾಕುತ್ತಾರೆ. ಎರಡು ವರ್ಷದ್ದು ಮೂರು ವರ್ಷದ್ದು ಹಾಕುತ್ತಾರೆ. ಹೀಗಾಗಿ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಸರ್ಕಾರಕ್ಕೆ ಆಗುತ್ತಿದೆ. ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವಾಗುತ್ತಿದೆ. ಈ ರೀತಿಯಾದರೆ ವಿದ್ಯುತ್ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಿದೆಯೆ? ವಿದ್ಯುತ್ ಸಮಸ್ಯೆ ಇದೆ ಎಂದು ಹೇಳಿದರೆ, ವ್ಯಂಗ್ಯವಾಗಿ ಮಾತನಾಡುವಂಥಾದ್ದು, ಕರೆಂಟ್ ಎಲ್ಲಿದೆ ಎಂದರೆ ತಂತಿಯಲ್ಲಿದೆ ಮುಟ್ಟಿನೋಡಿ ಎನ್ನುವುದು, ವಿದ್ಯುತ್ ಸಮಸ್ಯೆ ಇದೆ ಎಂದು ಹೇಳಿದರೆ ನೀವು ಇದ್ದಾಗ ಏನು ಮಾಡಿದ್ದೀರಿ ಎಂದು ಕೇಳುವಂಥಾದ್ದು, ಇದು ಜವಾಬ್ದಾರಿಯುತವಾದಂತಹ ಸರ್ಕಾರ ಮಾತನಾಡುವಂಥಾದ್ದು ಅಲ್ಲ. ಇವತ್ತು ಪ್ರಾಮಾಣಿಕವಾಗಿ ಪರಿಣಾಮ ಬೀರಿರುವಂಥಾದ್ದು ಕೃಷಿರಂಗಕ್ಕೆ ತೀವ್ರವಾದಂತಹ ಸಮಸ್ಯೆಯಾಗಿದೆ. ಕೃಷಿರಂಗದಲ್ಲಿ ಉತ್ಪಾದನೆ ಸಂಪೂರ್ಣವಾಗಿ ಸ್ಥಗಿತವಾಗಿದೆ. ಏಕೆಂದರೆ ಇಡೀ ಕರ್ನಾಟಕ ರಾಜ್ಯದಲ್ಲಿ ಆಹಾರ ಸಾಮಗ್ರಿಗಳನ್ನು ಉತ್ಪಾದನೆಯ ಮೂರನೆ ಎರಡು ಭಾಗವನ್ನು ಉತ್ಪಾದನೆ ಮಾಡುತ್ತಿರುವಂಥಾದ್ದು ವಿದ್ಯುಚ್ಛಕ್ತಿಯಿಂದ, ಆಗುತ್ತಿದೆ. ಇತ್ತು ಆಹಾರದ ಉತ್ಪಾದನೆ ಎಷ್ಟು ಆಗಿದೆ ಎಂದು ಸರ್ಕಾರದ ಲೆಕ್ಕದ ಪ್ರಕಾರವೆ ನಮ್ಮ ರಾಜ್ಯದಲ್ಲಿ 84 ಲಕ್ಷ ಟನ ಆಗಿದೆ. ಇನ್ನು ಮೂರು ವರ್ಷಗಳಲ್ಲಿ ಸರ್ಕಾರ ಕೊಟ್ಟಿರುವಂತಹ ಅಂಕಿಅಂಶಗಳ ಪ್ರಕಾರ 2000 ಇಸವಿಯೊಳಗೆ ಕರ್ನಾಟಕ ಜನತೆಗೆ ಎರಡು ಹೊತ್ತು ಊಟವನ್ನು ಕೊಡಬೇಕಾದರೆ, ಒಂದು ಕೋಟಿ42 ಲಕ್ಷ ಟನ್ ಆಹಾರ ಸಾಮಗ್ರಿಗಳ ಉತ್ಪಾದನೆಯಾಗಬೇಕು. ಆದರೆ ಒಂದು ಕಡೆ ವಿದ್ಯುಚ್ಛಕ್ತಿ ಕಡಿತ, ಮತ್ತೊಂದು ಕಡೆ ಭೂ ಸುಧಾರಣೆಯನ್ನು ತಿದ್ದುಪಡಿ ಮಾಡಿದ್ದೀರಿ. ಇವತ್ತು ವ್ಯವಸಾಯದ ಭೂಮಿಯನ್ನು ಎಲ್ಲಾ ಬ್ಲಾಕ್ ಮಾರ್ಕೆಟ್ ಜನರಿಗೆ, ಕಪ್ಪು ಹಣ ಇರುವಂತಹ ಕೊಟ್ಯಾಧೀಶರು ಬಂದು ಕೊಂಡುಕೊಳ್ಳುತ್ತಿದ್ದಾರೆ. ಈ ರೀತಿಯಾಗಿ ವ್ಯವಸಾಯಕ್ಕೆ ಭೂಮಿ ಇಲ್ಲದ ಹಾಗೆ ಆಗುತ್ತಿದೆ. ನಿಮ್ಮ ಭೂ

ಸುಧಾರಣಾ ಕಾನೂನು ತಿದ್ದುಪಡಿಯಿಂದ ಇಡೀ ವ್ಯವಸಾಯದ ಭೂಮಿ ಇಂತಹ ವ್ಯಕ್ತಿಗಳಿಗೆ ಹೋಗುತ್ತಿದೆ. ಇವರು ಎಸ್ಟೇಟಗಳು, ರೆಸಾರ್ಟ್ ಮಾಡುತ್ತಿದ್ದಾರೆ. ಈ ರೀತಿಯಾದರೆ ಸಾಮಾನ್ಯ ಜನರ ಪರಿಸ್ಥಿತಿ ಏನು? ಭೂ ಸುಧಾರಣಾ ಕಾಯಿದೆಯ ತಿದ್ದುಪಡಿಯಿಂದ ಆಹಾರದ ಉತ್ಪಾದನೆ ಕಡಿಮೆಯಾಗುತ್ತಿದೆ. ಇನ್ನೊಂದು ಕಡೆ ವಿದ್ಯುತ್ ಕಡಿತದಿಂದ ಆಹಾರದ ಉತ್ಪಾದನೆ ಕಡಿಮೆಯಾಗುತ್ತಿದೆ.. ನೀವು 2000 ಇಸವಿಗೆ ಹೋಗುತ್ತೇವೆಂದು ಹೆಮ್ಮೆಯಿಂದ ಹೇಳುತ್ತಾ ಇದ್ದೀರಿ. ತಾವು ಯಾರನ್ನು ಕರೆದುಕೊಂಡು ಹೋಗುತ್ತೀರಿ? ಹೊಟ್ಟೆ, ಬಟ್ಟೆಗೆ ಇಲ್ಲದ ನೂರಕ್ಕೆ ನಲವತ್ತು ಜನರು ಈ ದೇಶದಲ್ಲಿ ಊಟ ಇಲ್ಲದೇ ಇರುವಂತಹ ಈ ಕರ್ನಾಟಕದ ಜನರನ್ನು ಕರೆದುಕೊಂಡು 21ನೇ ಶತಮಾನಕ್ಕೆ ಕರೆದುಕೊಂಡು ಹೋಗುವುದಕ್ಕೆ ಯೋಜನೆ ಹಾಕಿಕೊಂಡಿದ್ದೀರಿ. ಆದುದರಿಂದ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಬರೀ ಘೋಷಣೆಗಳನ್ನು ಏನು ಮಾಡಿದ್ದೀರಿ. ಅವರು ಇದ್ದಾಗ ಏನು ಮಾಡಿದ್ದಾರೆ, ಎಂದು ಹೇಳುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಜನರು ನಿಮಗೆ ಅಧಿಕಾರವನ್ನು ಕೊಟ್ಟಿರುವಂಥಾದ್ದು ನೀವು ಏನಾದರೂ ಮಾಡಿ ಎಂದು ಹೇಳಿ. ಯಾರು ಏನು ಮಾಡಲಿಲ್ಲ, ನೀವಾದರೂ ಏನಾದರೂ ಮಾಡಿ ಎಂದು ಅಧಿಕಾರವನ್ನು ಕೊಟ್ಟಿದ್ದಾರೆ. ನೀವು ಮಾಡಲಿಲ್ಲವೆಂದರೆ ನಿಮಗೂ ಪ್ರಜಾಪ್ರಭುತ್ವದಿಂದ ಶಿಕ್ಷೆ ಬರುತ್ತದೆ. ಆದುದರಿಂದ ನೀವು ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂದು ಹೇಳಿ ನಾನು ತಮಗೆ ಮನವಿ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಶ್ರೀ ಅಯನೂರು ಮಂಜುನಾಥ್‌ರವರೆ ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಚ್ಚೇಗೌಡರ ನೆಂಟರು ಜಿಲ್ಲಾ ಪಂಚಾಯತನ ಸದಸ್ಯರು ಆದಂತಹ ವೆಂಕಟೇಶ್ ಎನ್ನುವವರನ್ನು ಬಾಂಬ್ ಹಾಕಿ ಕೊಲೆ ಮಾಡಿದ್ದಾರೆ. ಇದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಉಪಾಧ್ಯಕ್ಷರು : ಈಗ ಮಾನ್ಯ ಅಯನೂರು ಮಂಜುನಾಥರವರು ಮಾತನಾಡುತ್ತಾರೆ. ನಾನು ಅವರನ್ನು ಕರೆದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಇಲ್ಲಿ ಸಭೆ ನಡೆಯುತ್ತಿದೆ. ಇದನ್ನು ಯಾರು ಕೇಳುವವರು ಹೇಳುವವರು ಯಾರು ಇಲ್ಲವೆಂದರೆ ಹೇಗೆ? ಇದಕ್ಕೆ ಕಾರಣವೇನು ಎಂಬುದನ್ನು ತಿಳಿಸಬೇಕು.

ಉಪಾಧ್ಯಕ್ಷರು : ಮಾನ್ಯ ಗೃಹ ಮಂತ್ರಿಗಳು ಇಲ್ಲ. ಯಾರು ಉತ್ತರವನ್ನು ಹೇಳುತ್ತಾರೆ. ಇವತ್ತು ತಾವು ವಿಷಯವನ್ನು ಪ್ರಸ್ತಾಪ ಮಾಡಿ ಆಗಿದೆ.

ಶ್ರೀ ವಾಟಾಳ್ ನಾಗರಾಜ್ : ಇವತ್ತು ಸಭೆ ನಡೆಯುತ್ತಿದೆ, ಮಾನ್ಯ ಮಂತ್ರಿಗಳಾದ ಬಚ್ಚೇಗೌಡರ ನೆಂಟರು ಆದ ವೆಂಕಟೇಶ್ ಎನ್ನುವವರು ಗ್ರಾಮಪಂಚಾಯತನ ಸದಸ್ಯರು ಆಗಿದ್ದಾರೆ. ಇವತ್ತು ಬೆಳಿಗ್ಗೆ 9.30ರ ಸಮಯದಲ್ಲಿ ಒಟ್ಟು 14ಮಂದಿ ಇದರಲ್ಲಿ ಒಬ್ಬ ಪೋಲೀಸರು ಇದ್ದಾರೆ. ಬಾಂಬ್ ಹಾಕಿದ್ದಾರೆ. ಮಾರಕಾಸ್ತ್ರಗಳಿಂದ..

ಉಪಾಧ್ಯಕ್ಷರು : ತಾವು ಏನಾದರೂ ವಿಷಯವನ್ನು ಪ್ರಸ್ತಾಪ ಮಾಡಬೇಕಾದರೆ ನಿಯಮಾನುಸಾರವಾಗಿ ಪ್ರಸ್ತಾಪ ಮಾಡಬೇಕು. ತಾವು ಪದೇ ಪದೇ ಎದ್ದು ಮಾತನಾಡಿದರೆ ಸಭೆಯನ್ನು ನಡೆಸುವುದು ಹೇಗೆ? ಈಗ ತಾವು ಸರ್ಕಾರಕ್ಕೆ ವಿಷಯವನ್ನು ತಿಳಿಸಿದ್ದೀರಿ. ಗೃಹಮಂತ್ರಿಗಳು ಇಲ್ಲ. ನಾಳೆ ಸರ್ಕಾರದಿಂದ ಉತ್ತರವನ್ನು ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಈ ವಿಷಯವನ್ನು ಅಷ್ಟು ಸುಲಭವಾಗಿ ಬಿಡುವುದಕ್ಕೆ ಆಗುವುದಿಲ್ಲ. ತಾವು ಹೀಗೆ ಹೇಳಬಾರದು.

ಉಪಾಧ್ಯಕ್ಷರು : ನೀವು ಯಾವುದಾದರೂ ವಿಷಯವನ್ನು ಪ್ರಸ್ತಾಪ ಮಾಡಬೇಕಾದರೆ ನಿಯಮಾನುಸಾರವಾಗಿ ಮಾಡಬೇಕು. ತಾವು ಯಾವ ನಿಯಮದ ಪ್ರಕಾರ ಪ್ರಸ್ತಾಪ ಮಾಡುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಅದನ್ನು ನಾನು ಪ್ರಮಾಣಿಕವಾಗಿ ಒಪ್ಪುತ್ತೇನೆ. ದಯಮಾಡಿ ಕ್ಷಮಿಸಬೇಕು, ನಾನು ವಿಧಿವಿಧಾನಗಳನ್ನು ಬಿಟ್ಟು ಮಾತನಾಡುತ್ತಿದ್ದೇನೆಂದು ತಾವು ತಪ್ಪು ತಿಳಿದುಕೊಳ್ಳಬಾರದು. ಪರಿಸ್ಥಿತಿ ಹೀಗೆ ಆದರೆ ಇವರು ನಾಳೆ ಶಾಸಕರ ಮೇಲೆ ಹಾಕಬಹುದು , ಶಾಸನ ಸಭೆಯ ಮೇಲೆ ಬಾಂಬ್ ಹಾಕಬಹುದು. ನಾನು ತಮ್ಮ ತಾಳ್ಮೆಯನನು ಪರೀಕ್ಷೆ ಮಾಡುತ್ತಾ ಇಲ್ಲ.

ಉಪಾಧ್ಯಕ್ಷರು : ಮಾನ್ಯ ಸಿಂಧ್ಯಾರವರೆ, ತಮಗೆ ಏನಾದರೂ ವಿಷಯ ಗೊತ್ತಿದ್ದರೆ, ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೆ, ಈ ಕೊಲೆಯಾದ ಬಗ್ಗೆ ಸರ್ಕಾರಕ್ಕೆ ಈಗಾಗಲೇ ಮಾಹಿತಿ ಬಂದಿದೆ. ನಮ್ಮ ಸಹೋದ್ಯೋಗಿಯಾದಂತಹ ಮಾನ್ಯ ಬಚ್ಚೇಗೌಡರು ನನ್ನನ್ನು ಭೇಟಿ ಮಾಡಿದಾಗ ಈ ವಿಚಾರವನ್ನು ಪ್ರಸ್ತಾಪ ಮಾಡಿದರು. ಕೊಲೆಯಾದ ವ್ಯಕ್ತಿ ಅವರ ಸಂಬಂಧಿಕರು ಹೌದು, ಮತ್ತು ಗ್ರಾಮಪಂಚಾಯತನ ಸದಸ್ಯರು ಹೌದು, ಇದು ನಿಜ. ನಾನು ಪತ್ರಿಕಾ ವರದಿಯನ್ನು ಓದಿಲ್ಲ. ಅದನ್ನು ಮಾನ್ಯ ವಾಟಾಳ ನಾಗರಾಜರವರು ಪ್ರಸ್ತಾಪ ಮಾಡಿದ್ದಾರೆ. ಉಳಿದಂತಹ ವಿವರಗಳಿಗೆ ಇದಕ್ಕೆ ಕಾರಣವೇನು ? ಏನು ಕ್ರಮ ತೆಗೆದುಕೊಳ್ಳಬೇಕು ? ತಪ್ಪು ಯಾರದು ಇದೆ ? ಎಂಬ ಬಗ್ಗೆ ತಿಳಿಯಲು ಸಂಬಂಧಪಟ್ಟು ಅಧಿಕಾರಿಗಳು ಈಗ ಕೋಲಾರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಈ ಎರಡು ಜಿಲ್ಲೆಯ ವರಿಷ್ಠ ಅಧಿಕಾರಗಳು ಸ್ಥಳಕ್ಕೆ ಭೇಟಿ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಯವರು ಹೋಗಿದ್ದಾರೆಂದು ನಾನು ತಿಳಿಯಪಟ್ಟಿದ್ದೇನೆ. ಆದುದರಿಂದ ಉಳಿದಂತಹ ವಿವರಗಳನ್ನು ಅವಶ್ಯಕತೆ ಇದ್ದಲ್ಲಿ ಸದನಕ್ಕೆ ನಾಳ ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈ ಘಟನೆ ಏನು ನಡೆಯದಿದೆ, ಇದರ ಬಗ್ಗೆ ಸರ್ಕಾಕ ಗಂಭೀರವಾಗಿ ಪರಿಗಣಿಸಬೇಕು. ಎಸ್.ಪಿ.ಯಾರು ? ನಾಡ ಬಾಂಬ ಹಾಕಿದಾರೆ. ಈಗ ಚರ್ಚೆಯನ್ನು ನಿಲ್ಲಿಸಿ ಕೂಜಲೇ ಈ ಪರಿಸ್ಥಿತಿಯಬಗ್ಗೆ ತಕ್ಷಣ ಸರ್ಕಾರ ಹೇಳಿಕೆಯನ್ನು ಕೊಡಬೇಕು. ಈ ಚರ್ಚೆ ಪ್ರಾಮುಖ್ಯವಲ್ಲ. ಇದು ಒಬ್ಬ ತಾಲ್ಲೂಕು ಪಂಚಾಯತ್ ಸದಸ್ಯರು ಹಾಗೂ ಒಬ್ಬ ಮಂತ್ರಿಯ ಸಂಬಂಧಿಕರಿಗೆ ಗುಂಡಿಟ್ಟು ಹೊಡೆದಿದ್ದಾರೆಂದರು ಈ ಬಗ್ಗೆ ಸರ್ಕಾರ ಮೌನವಾಗಿದೆ.

ಉಪಾಧ್ಯಕ್ಷರು : ಸರ್ಕಾರ ಮೌನವಾಗಿಲ್ಲ, ಜಿಲ್ಲಾ ಮಂತ್ರಿಗಳು ಎಷ್ಟು ವಿಷಯಗಳು ಗೊತ್ತಿದೆ, ಅಷ್ಟನ್ನು ಹೇಳಿದ್ದಾರೆ, ಇನ್ನು ಉಳಿದ ವಿಚಾರಗಳನ್ನು ಮಾನ್ಯ ಗೃಹ ಮಂತ್ರಿಗಳು ಬಂದಮೇಲೆ ಹೇಳುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಿ.

+ ಶ್ರೀ ಆಯನೂರು ಮಂಜುನಾಥ್ (ಹೊಸನಗರ ಕ್ಷೇತ್ರ) : ಮಾನ್ಯ ಉಪಾಧ್ಯಕ್ಷರೆ, ಈಗ ಸಮಯ 5 ಗಂಟೆ 10 ನಿಮಿಷವಾಗಿದೆ, ಇದನ್ನು ಪ್ರಾರಂಭದಲ್ಲೆ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಉಪಾಧ್ಯಕ್ಷರು : ತಾವು 5 ಗಂಟೆ 30 ನಿಮಿಷಕ್ಕೆ ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಆಯನೂರು ಮಂಜುನಾಥ್ : ಮಾನ್ಯ ರಾಜ್ಯಪಾಲರು ಈ ಸಾರಿಯು ಕೂಡ ಕಳೆದ ಸಾರಿಯಂತೆ ಇಲ್ಲಿ ಗಿಳಿಪಾಠವನನು ಓದಿದ್ದಾರೆ.

ಉಪಾಧ್ಯಕ್ಷರು : ಈಗಾಗಲೇ ನಿಮ್ಮ ಪಕ್ಷಕ್ಕೆ ಎಷ್ಟು ಸಮಯವನ್ನು ಕೊಟ್ಟಿದ್ದಾರೆ, ಅದನ್ನು ನೋಡಿಕೊಂಡು ಮಾತನಾಡಿ, ಹೆಚ್ಚಿಗೆ ಮಾತನಾಡಿದರೆ, ಮುಂದಿನವರಿಗೆ ಸಮಯ ಸಿಗುವುದಿಲ್ಲ ಅಷ್ಟೆ.

ಶ್ರೀ ಆಯನೂರು ಮಂಜುನಾಥ್ : ರಾಜ್ಯಪಾಲರು ಎಂದಿನಂತೆ ನಮ್ಮ ವಿವೇಚನೆ ಇಲ್ಲದಿರುವಂಥ ಒಂದು ಗಿಳಿಪಾಠವನ್ನು ಈ ಸದನದಲ್ಲಿ ಓದಿದ್ದಾರೆ. ಓದಿದ ಆ ಭಾಷಣದ ಪ್ರತಿಯಲ್ಲಿ, ಎರಡನೆ ಪುಟದ ಐದನೇ ಕಂಡಿಕೆಯಲ್ಲಿ, ಈ ವರ್ಷ ಭಾರತೀಯರಿಗೆಲ್ಲಾ ಬಹಳ ವಿಶೇಷವಾದ ವರ್ಷ, ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾಗಿದೆ; ಈಗ ಹಿಂದೆ ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡಿದಂಥ ಸಂವಿಧಾನದ ಶಿಲ್ಪಗಳಿಗೆ ಪ್ರೇರಣೆ ನೀಡಿದ ವಿಚಾರಧಾರೆಗಳ ಬಗ್ಗೆ ಪುನಶ್ಚೇತನ ಗೊಳಿಸಬೇಕೆಂದು ಹೇಳಿದ್ದಾರೆ. ಆದರೆ ಯಾರ ವಿಚಾರಧಾರೆಯನ್ನು ಪುನಶ್ಚೇತನ ಮಾಡಬೇಕೆಂದು ಈ ಭಾಷಣದಲ್ಲಿ ಹೇಳಿದ್ದಾರೋ ಅದಕ್ಕೆ ತದ್ವಿರುದ್ಧವಾಗಿ ನಮಗೆ ಕಳುಹಿಸುವ ಕಲಾಪದಲ್ಲಿ ಬರೆಯುತ್ತಾರೆ. ಐವತ್ತನೆ ಸ್ವಾತಂತ್ರ್ಯೋತ್ಸವದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆಂದು ಕೂಡ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ, ಇದರಲ್ಲಿ ಹೇಳಿ ಕಳುಹಿಸಿತ್ತೀರಿ, ತಮ್ಮ ಗಮನಕ್ಕೂ ಕೂಡ ಬಂದಿರುತ್ತದೆ. ರಾಜ್ಯಪಾಲರು ದಯಾಪಾಲಿಸಿದ ಭಾಷಣಕ್ಕಾಗಿ ಎಂದಿದೆ. ಅವರು ಏನು ದಯಪಾಲನೆ ಮಾಡುವುದು? ಸ್ವಾತಂತ್ರ್ಯ ಬಂದು ಐವತ್ತು ವರ್ಷವಾಯಿತು, ಬಹಳ ಪ್ರಗತಿ ಪರವಾದಂಥ ರಾಷ್ಟ್ರವಾಗುತ್ತಿದೆ, ಜಾಗೃತವಾದಂಥ ಬಲಿಷ್ಠವಾದಂಥ ಭಾರತವನ್ನು ಕಟ್ಟಬೇಕೆಂದು ರಾಜ್ಯಪಾಲರು ಭಾಷಣ ಮಾಡಿದ್ದಾರೆ, ಅವರ ಭಾಷಣವನ್ನು ಈ ಚುನಾಯಿತ ಪ್ರತಿನಿಧಿಗಳ ಸಭೆಗೆ ದಯಪಾಲಿಸಿದರು ಎನ್ನುವಂಥ ಪದ ಇಡೀ ಸದನಕ್ಕೆ ಅಗೌರವನ್ನುಂಟು ಮಾಡುವಂಥದ್ದು. ಅವರು ಈ ಸದನಕ್ಕೆ ದಯಪಾಲನೆ ಮಾಡುವುದಕ್ಕೆ ಅವರು ಯಾರು? ರಾಷ್ಟ್ರಪತಿಗಳಿಂದ ನೇಮಕವಾದ ಒಬ್ಬ ವ್ಯಕ್ತಿ, ಸಂವಿಧಾನದಲ್ಲಿ ದತ್ತವಾದ ಒಂದು ಅಧಿಕಾರವನ್ನು ಇಟ್ಟುಕೊಂಡವರು, ಸಂವಿಧಾನಬದ್ಧವಾಗಿ ಆಯ್ಕೆಯಾದ ಪ್ರತಿನಿಧಿಗಳ ಮಂಡಲಕ್ಕೆ ದಯಪಾಲನೆ ಮಾಡುತ್ತಾರೆಂದರೆ, ಅವರೇನು ಈ ವ್ಯವಸ್ಥೆಯೊಳಗೆ ಭಗವಂತರೇನು? ಆ ಭಾಷಣದಲ್ಲಿ ಎಲ್ಲಿಯೂ ಕೂಡ ಬಡವರ ಬಗ್ಗೆ ಇಲ್ಲ, ಕಾರ್ಮಿಕರ ಬಗ್ಗೆ ಇಲ್ಲ,

ಕಾರ್ಮಿಕರ ಕನಿಷ್ಠವೇತನದ ಬಗ್ಗೆ ಇಲ್ಲ, ಕಾರ್ಖಾನೆಗಳು ಮುಚ್ಚುತ್ತಿರುವ ಬಗ್ಗೆ ಇಲ್ಲ ಕಾರ್ಖಾನೆಗಳು ಮುಚ್ಚುತ್ತಿರುವ ಬಗ್ಗೆ ಇಲ್ಲ ವವಿದ್ಯುತ್ ಅಭಾದಿಂದಾಗಿ ಎಷ್ಟು ಕಾರ್ಖಾನಗಳು ಸಧ್ಯದಲ್ಲೇ ಮುಚ್ಚಿ, ಕಾರ್ಮಿಕರು ಬೀದಿಪಾಲಾಗುತ್ತಾರೆನ್ನುವ ಬಗ್ಗೆ ಇಲ್ಲ. ಎಸಜಿಎಫ, ಬಿಇಎಲ್, ಬಿಇಎಂ.ಎಲ್. ಸುಪ್ರೀಂ ಕೋರ್ಟ ತೀರ್ಪಿನ ಪ್ರಕಾರ ಎಂಎಂಎಲ್ ಕಾರ್ಖಾನೆಗಳಲ್ಲಿ ಲಕ್ಷಾಂತರ ಕಾರ್ಮಿಕರು ಬೀದಿಪಾಲುತ್ತಾರೆಂದರೂ ಕೂಡ ಅದರ ಬಗ್ಗೆ ಒಂದು ಮಾತಿಲ್ಲ. ಅದರ ಬದಲಾಗಿ, ದಯಪಾಲಿಸಿದ ಭಾಷಣ, your Lorship, My Lord, your Highness. ನಾವೇನು ಇನ್ನು ಬ್ರಿಟಿಷರ ಕಾಲದಲ್ಲಿದ್ದೇವೆಯೇ? ಈ ವರ್ಷ ಸ್ವಾತಂತ್ರ್ಯ ಬಂದು ಐವತ್ತು ವರ್ಷವಾಯಿತೆಂದು ನಾವು ಏತಕ್ಕೆ ಆಚರಣೆ ಮಾಡಬೇಕು? ಔಟ್ಟಿ ಔಘಾಬಟಟಿಟಿ, ಎಂದು ಯಾರಿಗೆ ಹೇಳುವುದು? ಇಲ್ಲಿ ಬ್ರಿಟಿಷ್ ರಾಣಿ, ವಿಕ್ಟೋರಿಯ ರಾಣಿ ಇದ್ದಾರಾ? ಇಲ್ಲಿ ಯಾರಿದ್ದಾರೆ? ಆ ಪದಗಳನ್ನು ಕಡತದಿಂದ ತೆಗೆಯಬೇಕು. ಅದು ಪ್ರಜಾಪ್ರಭುತ್ವಕ್ಕೆ ವಿರೋಧವಾಗಿರುವುದು ಮತ್ತು ಚುನಾಯಿತ ಪ್ರತಿನಿಧಿಗಳು ನಾವೇನು ಇಲ್ಲಿ ಕುಳಿತಿದ್ದೇವೆ ನಮಗೆ ಅವಮಾನ ಮಾಡುವ ಪದಗಳನ್ನು ಪ್ರಯೋಗ ಮಾಡುತ್ತಿದ್ದೀರಿ. My Lord, Your Lordship, His Highness. ಅಯ್ಯೋ ಕಥೆಯೇ, ಇದನ್ನು ಯಾರಿಗೆ ಹೇಳಿಕೊಳ್ಳಬೇಕು? ಅವರಿಂದ ಪಡೆದುಕೊಳ್ಳುವುದಿದ್ದರೆ, ಅವರ ಮರ್ಜಿಯಿಂದ ನಾವೇನಾದರೂ ಬದುಕುವುದಾಗಿದ್ದರೆ ಅವರನ್ನು ತಾಜ ಮಾಡುವುದಕ್ಕೋಸ್ಕರ ಹೇಳುವ ಪದಗಳನ್ನು ಪ್ರಯೋಗ ಮಾಡಲಾಗಿದೆ. ಬೀದಿಪಾಲಾಗುವ ಒಬ್ಬ ಕಾರ್ಮಿಕರ ಬಗ್ಗೆ ಇಡೀ ಭಾಷಣದಲ್ಲಿ ಎಲ್ಲಿಯೂ ಒಂದೇ ಒಂದು ಪದವನ್ನು ತಾವು ಹೇಳಲಿಲ್ಲ. ಸರ್ಕಾರ ತಾನೇ ಹೊರಡಿಸಿದ ಆಜ್ಞೆಗಳನ್ನು ಉಲ್ಲಂಘನೆ ಮಾಡಿದೆ. ಅದರ ಬಗ್ಗೆ ಹೇಳಲಿಲ್ಲ. ಜ್ಯುಡಿಶಿಯಲ್ ಅಕ್ಟಿವಿಸಂ ಬಗ್ಗೆ ಎರಡು ಸದನಗಳಲ್ಲಿ ಬಹಳ ಚರ್ಚೆ ನಡೆದಿದೆ . ಜ್ಯುಡಿಶಿಯಲ್ ಅಕ್ಟಿವಿಸಂ ಬಗ್ಗೆ ಟೀಕೆಗಳಾಗುತ್ತಿದ್ದಾವೆ, ಇಡೀ ದೇಶದ ಗಮನವನ್ನು ಆದರೂ ಒಂದು ಮುಖವನ್ನು ನಾನು ಒಪ್ಪುತ್ತೇನೆ ಇನ್ನೊಂದು ಮುಖದಲ್ಲಿ ಏನಾಗುತ್ತಿದೆ? ಎಪಿಸಿಎಂಸಿ ಸರ್ಕಾರದ ಒಂದು ಸಂಸ್ಥೆ, ಅಲ್ಲಿರತಕ್ಕಂಥ ಕಾರ್ಮಿಕರ ಕನಿಷ್ಟವೇತನಕ್ಕೋಸ್ಕರ ಹೋರಾಟವನ್ನು ಮಾಡುತ್ತಿದ್ದಾರೆ. ಕರ್ನಾಟಕ ಸರ್ಕಾರವೇ ಕನಿಷ್ಠವೇತನವನ್ನು ನಿಗಧಿಮಾಡಿತು, ಗೆಜೆಟ ನೋಟಿಫಿಕೇಷನ ಹೊರಡಿಸಿತು. ತಾವೇ ಹೊರಡಿಸಿದ ಆಜ್ಞೆಯನ್ನು ಪಾಲನೆ ಮಾಡಲಿಲ್ಲವೆನ್ನುವ ಕಾರಣಕ್ಕಾಗಿ ಮಿನಿಯಂ ವೇಜ್ ಆಕ್ಟನ ಅಡಿಯಲ್ಲಿ ಕಮಿಷನರ್ ಮುಂದೆ, ಲೇಬರ್ ಅಥಾರಟಿಯ ಮುಂದೆ ಕೇಸ್ ಫೈಲ್ ಮಾಡಿದರು ಗೆದ್ದರು. ಲೇಬರ್ ಅಥಾರಿಟಿ ಇವರಿಗೆ ಕನಿಷ್ಠವೇತನ ಹಾಗೂ ಸಂಬಂಧಪಟ್ಟಂಥ ಸೌಲತ್ತುಗಳನ್ನೆಲ್ಲಾ ಕೂಡಬೇಕೆಂದು ಆದೇಶ ಮಾಡಿದರು. ಆದರೆ ಸರ್ಕಾರ ತಾನೇ ವ್ಯವಸ್ಥೆ ಮಾಡಿದಂಥ, ಅಥಾರಿಟಿ ನೀಡಿದ ತೀರ್ಪಿಗೂ ಕೂಡ ತಲೆಬಾಗದಿದ್ದಾಗ, ಆ ಕಾರ್ಮಿಕರು ಹೈಕೋರ್ಟಿಗೆ ಹೋದರು. ಇವರಿಗೆ ಆ ಸಾವಿರದ ಇನ್ನೂರು ರೂಪಾಯಿ ಮತ್ತು ಅದಕ್ಕೆ ಸಮಾನವಾದ ತತ್ಸಂಭದವಾದ ವೇತನ ಕೊಡಬೇಕು, ಪರ್ಯಾಯ ರೂಪಾಯಿ ಮತ್ತು ಅದಕ್ಕೆ ಸಮಾನವಾದ ತತ್ಸಂಭದವಾದ ವೇತನ ಕೊಡಬೇಕು, ಪರ್ಯಾಯ ಯೋಜನೆಯನ್ನು ಮಾಡಬೇಕೆಂದು ಹೈಕೋರ್ಟ ತೀರ್ಮಾನ ಕೊಟ್ಟು ಒಂದು ವರ್ಷವಾಗಿದೆ. ಕಳೆದ ಸಾರಿ ನಡೆದ ವಾಸುದೇವನ್ ಪ್ರಕರಣ ಇಲ್ಲಿ ಇನ್ನು ಮರೆತುಹೋಗಿಲ್ಲ. ವಾಸುದೇವನ್ ಪ್ರಕರಣದಲ್ಲಿ ನಮ್ಮಲ್ಲಿ ಒಬ್ಬ ಅಧಿಕಾರಿ ಸೆರೆಮನೆಗೆ ಹೋಗಿದ್ದಾರೆ. ಮತ್ತೆ ಎಷ್ಟುಜನ ಅಧಿಕಾರಿಗಳನ್ನು ನ್ಯಾಯಾಲಯದ

ಉಲ್ಲಂಘನೆಗೋಸ್ಕರ ಸೆರೆಮನೆಗೆ ಕಳುಹಿಸುವುದಕ್ಕೆ ಸ್ವತಃ ಸರ್ಕಾರ ತೀರ್ಮಾನ ಮಾಡಿದೆ? ಸ್ವತಃ ಅಧಿಕಾರಿಗಳೂ ಒಳಗೆ ಹೋಗಬೇಕೆಂದು ತೀರ್ಮಾನ ಮಾಡಿದ್ದಾರೆನ್ನುವುದನ್ನು ಒಮ್ಮೆ ಕೂಡ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಲಿಲ್ಲ. ಜ್ಯುಡಿಷಿಯಲ್ ಆಕ್ಟಿವಿಸಂ ಬಗ್ಗೆ ಮಾತನಾಡುವಾಗ ನಾವು ಯೋಚನೆ ಮಾಡಬೇಕಾಗುತ್ತದೆ. ಇವತ್ತು ಸಾವಿರಾರು ಜನ ಕಾರ್ಮಿಕರಿಗೆ ಕರ್ನಾಟಕದ ಹೈಕೋರ್ಟ ತೀರ್ಮಾನವನ್ನು ಕೊಟ್ಟರೆ, ಈ ಸರ್ಕಾರ ಜಾರಿಗೆ ತರುವುದಿಲ್ಲ, ಕನಿಷ್ಠವೇತನ ಕಾಯಿದೆಯಡಿಯಲ್ಲಿ ಆಗುವ ಯಾವುದೇ ಆಜ್ಞೆಗಳನ್ನು ಈ ಸರ್ಕಾರ ಜಾರಿಗೆತರುವುದಿಲ್ಲ, ವರ್ಕಮೆನ ಕಾಂಪನಸೇಷನನಲ್ಲಿ ಅವಾರ್ಡ ಆಗತಕ್ಕಂಥ ಯಾವುದೇ ಅವಾರ್ಡನ್ನು ಈ ಸರ್ಕಾರ ಜಾರಿಗೆತರುವುದಿಲ್ಲ, ಲೇಬರ್ ಕೋರ್ಟಗಳು ಮಾಡುವ ಯಾವುದೇ ಆಜ್ಞೆಗಳನ್ನು ಈ ಸರ್ಕಾರ ಜಾರಿಗೆತರುವುದಿಲ್ಲ, ಪೇಮೆಂಟ್ ಆಫ್ ವೇಜಸ್ ಆಕ್ಟನಲ್ಲಿ ಬರುವ ಯಾವುದೇ ಅವಾರ್ಡಗಳನ್ನು ಈ ಸರ್ಕಾರ ಜಾರಿಗೆ ತಂದಿಲ್ಲ. ನ್ಯಾಯಾಲಯದ ತೀರ್ಪುಗಳನ್ನು ಜಾರಿಗೆತರದ ಇಂಥ ಸರ್ಕಾರವಿದ್ದಾಗ, ಜುಡಿಶಿಯಲ್ ಆಕ್ಟಿವಿಸಂ ಬೇಕೋ ಬೇಡವೊ? ಲಕ್ಷಾಂತರ ಜನ ತಮಗೆ ಸಿಗಬೇಕಾದ ನ್ಯಾಯವನ್ನು ಪಡೆಯುವುದಕ್ಕೆ ಸತ್ಯಾಗ್ರಹ ಮಾಡಬೇಕೆಂದಾದರೆ, ಹೋರಾಟವನ್ನು ಮಾಡಬೇಕೆಂದಾದರೆ, ಅದಕ್ಕೋಸ್ಕರ ಧರಣಿ, ಉಪವಾಸ ಸತ್ಯಾಗ್ರಹವನ್ನು ಮಾಡಬೇಕೆಂದಾದರೆ ಈ ದೇಶದಲ್ಲಿ ಇಂಥ ಅಧಿಕಾರಿಗಳಿಗೋಸ್ಕರ, ಇಂಥ ಸರ್ಕಾರಗಳಿಗೋಸ್ಕರ ಜುಡಿಶಿಯಲ್ ಆಕ್ಟಿವಿಸಂ ಬೇಕಾಗಿದೆ. ಈ ವಿನಿವೇಷನ್ ನೋಟಿಫಿಕೇಷನ್ ಪ್ರಕಾರ ಬಂದಂಥವರಿಗೆ ಯಾರು ಹೈಕೋರ್ಟನಿಂದ ತೀರ್ಪನ್ನು ತೆಗೆದುಕೊಂಡಿದ್ದಾರೋ ಅವರಿಗೆ ಕೂಡಲೇ ಎಂಪಿಎಂಸಿಯಲ್ಲಿ ಆ ತೀರ್ಪನ್ನು ಜಾರಿಗೆತರಬೇಕು. ಅವರಿಗೆ ಒಂದು ಸಾವಿರದ ಇನ್ನೂರು ರೂಪಾಯಿಗಳೆಂದು ಸರ್ಕಾರ ಕನಿಷ್ಠವೇತನವನ್ನು ನಿಗದಿ ಮಾಡಿದೆ, ಅದು ಅತ್ಯಂತ ಕಡಿಮೆ. ಅದನ್ನೆ ಹೈಕೋರ್ಟ ಹೇಳಿರುವುದು, ಅದನ್ನೂ ಕೊಡಲಿಲ್ಲವೆಂದಾದರೆ, ಅದರ ಬಗ್ಗೆ ಸರ್ಕಾರಕ್ಕೆ ಇನ್ನೂ ಲಜ್ಜೆ ಇದೆ ಎಂದು ನಾನು ಹೇಳುವುದಿಲ್ಲ. ಎರಡನೆಯದು ಸರ್ಕಾರ ಕೆಲಸ ಮಾಡುವ ವೈಖರಿಯನ್ನು ಕಂದಾಯ ಇಲಾಖೆಯಲ್ಲಿ ನೋಡಿದಾಗ, ಆ ಇಲಾಖೆಯಲ್ಲಿ ಸರ್ವೆ ಡಿಪಾರ್ಟಮೆಂಟ್ ಎಂದು ಒಂದಿದೆ. ಆ ಸರ್ವೆ ಡಿಪಾರ್ಟಮೆಂಟನ್ನು ನಾವು ಯಾವ್ಯಾವುದಕ್ಕೆ ಉಪಯೋಗ ಮಾಡಿಕೊಳ್ಳುತ್ತೇವೆಂದರೆ, ಈ ಸರ್ಕಾರ ರಚನೆ ಮಾಡುವ ಈ ಎಲ್ಲಾ ಯೋಜನೆಗಳಿಗೆ ಉಪಯೋಗ ಮಾಡಿಕೊಳ್ಳುತ್ತೇವೆ. ಅದು ಜಿಲ್ಲಾಪರಿಷತ್ ಇರಬಹುದು, ಜಿಲ್ಲಾ ಪಂಚಾಯತ್ ಇರಬಹುದು, ಭೂಸ್ವಾಧೀನ ಮಾಡುವ ಕಾರ್ಯ ಕ್ರಮವಿರಬಹುದು, ನೀರಾವರಿ ಇರಬಹುದು, ಲೋಕೋಪಯೋಗಿ ಇರಬಹುದು, ಅರಣ್ಯ, ಅನಧಿಕೃತ ಕಟ್ಟಗಳನ್ನು ನಿರ್ಮೂಲನ ಮಾಡುವುದು, ವಿಶ್ವವಿದ್ಯಾಲಯಗಳು, ಅರ್ಬನ್ ಸೀಲಿಂಗ್, ಅಬಕಾರಿ, ಕೈಗಾರಿಕೋದ್ಯಮ, ನಗರಪಾಲಿಕೆ, ಮಹಾನಗರಪಾಲಿಕೆ, ನಗರಾಭಿವೃದ್ಧಿ ಮಂಡಳಿ, ಎಲ್ಲದಕ್ಕೂ ಕೂಡ ಅದರ ಜಾಗಗಳನ್ನು, ಅಳತೆಗಳನ್ನು ವಿಸ್ತೀರ್ಣಗಳನ್ನು ನಿಗಧಿ ಮಾಡುವುದಕ್ಕೆ ಸರ್ವೆ ಇಲಾಖೆಯವರನ್ನು ಬಳಸಿಕೊಳ್ಳಲಾಗುತ್ತದೆ.

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) : ಅಬಕಾರಿ ಇಲಾಖೆಯಲ್ಲಿ ಸರ್ವೆ ಇಲಾಖೆಯವರು ಬೇಕಾಗುತ್ತದೆಂದು ಹೇಳಿದರೆ, ಆ ಇಲಾಖೆಗೆ ಸರ್ವೆಯರ ಅವಶ್ಯಕತೆಯಿಲ್ಲ.

ಶ್ರೀ ಅಯನೂರು ಮಂಜುನಾಥ್ : ಬಹುಶಃ ನಿಮ್ಮ ಸರ್ಕಾರದಲ್ಲಿ ಎಷ್ಟು ಜಾಗದಲ್ಲಿ ಹೆಂಡ ತಯಾರಾಗುತ್ತದೆ?

ಶ್ರೀ ಸುರೇಶ್ ಕುಮಾರ್ : ಅಬಕಾರಿ ಇಲಾಖೆಯಲ್ಲಿ ಅಲ್ಲ ಸರ್ವೆ, ಅದನ್ನು ಕುಡಿದ ಮೇಲೆ ರಸ್ತೆಯಲ್ಲಿ ಸರ್ವೆ ಮಾಡುತ್ತಾರೆಂದು ಹೇಳಿದ್ದುದು.

ಶ್ರೀ ಅಯನೂರು ಮಂಜುನಾಥ : ಅಬಕಾರಿ ಇಲಾಖೆಯೆಂದನ್ನು ಬಿಟ್ಟು ಬಾಕಿದೆಲ್ಲಾ ಒಪ್ಪಿದ್ದೀರಾ ತಾನೆ? ಬಾಕಿಯದನ್ನು ಒಪ್ಪಿದ್ದಿರೆಂದರೆ ಸರಿ. ಅಂಥ ಒಂದು ಇಲಾಖೆ ಸರಿಯಾಗಿ ಕೆಲಸ ಮಾಡದಿದ್ದರೆ, ಇವತ್ತು ಕೋರ್ಟ ಮುಂದೆ ಇರುವ ಲಕ್ಷಾಂತರ ಕೇಸಗಳಲ್ಲಿ ಬಹಳಷ್ಟು ಕೇಸಗಳು ಸರ್ವೆ ಇಲಾಖೆಯಿಂದಲೇ ಮೂಲತಃ ತೀರ್ಮಾನವಾಗಬೇಕಾದಂಥವು. ಇವತ್ತು ಕೋರ್ಟಕೇಸಗಳು ಮುಂದೆ ಸಿವಿಲ್ ವ್ಯಾಜ್ಯಗಳು ಪೆಂಡಿಂಗ್ ಇದ್ದರೆ, ಅವು ಭೂವಿವಾದಕ್ಕೆ ಸಂಬಂಧಪಟ್ಟ ಕೇಸಗಳಾಗಿದ್ದಾವೆ. ಅಂಥ ಸರ್ವೆ ಇಲಾಖೆಯನ್ನು ತಾವು ಎಷ್ಟರಮಟ್ಟಿಗೆ ಇಟ್ಟಿದ್ದೀರಿ? ಅಲ್ಲಿರತಕ್ಕಂಥ ಸರ್ವೆಯರ್ ಒಂದೊಂದು ತಾಲ್ಲೂಕಿಗೆ,ಕೆಲವು ಕಡೆ ಮೂರು ಜನ ನಾಲ್ಕು ಜನರಿದ್ದಾರೆ. ಅವರ ಕೈಯಲ್ಲಿ ಅಳತೆಗೆ ಬೇಕಾದ ಸಾಮಗ್ರಿಗಳಿಲ್ಲ, ಶಂಕಗಳಿಲ್ಲ, ಜೈನಗಳಿಲ್ಲ, ಅವರಿಗೆ ಹೋಗಿ ಬರುವ ವ್ಯವಸ್ತೆ ಇಲ್ಲ. ಮತ್ತೆ ಜಿಲ್ಲಾ ಕಛೇರಿಯಲ್ಲಿ ಒಂದು ಕಛೇರಿ ಇರುತ್ತದೆ, ಅವನ ಪ್ರತಿದಿನ ಬೆಳಿಗ್ಗೆ ಜಿಲ್ಲೆಯ ಒಂದು ಮೂಲೆಯಿಂದ ಬಂದು ಸರ್ವೆ ಇಲಾಖೆಯ ತನ್ನ ಅಧಿಕಾರಿಯನ್ನು ಭೇಟಿ ಮಾಡಿ ತಾನು ಯಾವ ತಾಲ್ಲೂಕಿಗೆ ಕೆಲಸಕ್ಕೆ ಹೋಗಬೇಕೆನ್ನುವುದನ್ನು ತಿಳಿದುಕೊಂಡು, ಅವನು ಅಲ್ಲಿಗೆ ಹೋಗಿ ಮುಟ್ಟುವುದಕ್ಕೆ ಸಂಜೆಯಾಗುತ್ತದೆ. ಈ ರೀತಿ ಸರ್ವೆ ಇಲಾಖೆಯಲ್ಲಿ ಲಕ್ಷಾಂತರ ಅರ್ಜಿಗಳು ವಿಲೇವಾರಿಯಾಗದೆ ಉಳಿದಿದ್ದಾವೆ, ನಾವು ಇಪ್ಪತ್ತನೆ ಶತಮಾನಕ್ಕೆ ಹೋಗುತ್ತಿದ್ದೇವೆ ಇಪ್ಪತ್ತೊಂದನೆ ಶತಮಾನಕ್ಕೆ ಹೋಗುತ್ತಿದ್ದೇವೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳುತ್ತಿದ್ದಾರೆ. ಆದರೆ ಸರ್ವೆ ಇಲಾಖೆಯಲ್ಲಿ ಅವರನ್ನು ಇನ್ನು ಹದಿನೆಂಟನೆ ಶತಮಾನಕ್ಕೆ ಕಳುಹಿಸುತ್ತಿದ್ದಾರೆ, ಈ ಗ ಎಲ್ಲಾ ಮೆಟ್ರಿಕ್ ಪದ್ಧತಿ ಜಾರಿಗೆ ಬಂದಿದ್ದರೆ ಇಲ್ಲಿ ಇನ್ನೂ ಕೊಂಡಿಗಳ ಪದ್ಧತಿ, ಇನ್ನು ಚೈನಿನ ಪದ್ಧತಿ, ಮೂವತ್ತಮೂರು ಲಿಂಕ್ ಪದ್ಧತಿ, ಇನ್ನು ಅಣೆವಾರು ಲೆಕ್ಕಾಚಾರದಲ್ಲೆ ಇದ್ದಾರೆ. ಇಷ್ಟು ಅಣೆ ಇದೆ ಕಂದಾಯ, ಈ ಅಣೆವಾರು, ಮೂವತ್ತುಮೂರು. ಚೈನ್ ಲಿಂಕ್, ಚೈನ್ ಎಂದು ನಮ್ಮ ಕಂದಾಯ ಮಂತ್ರಿಗಳು ಇನ್ನು ಹದಿನೆಂಟನೆ ಶತಮಾನದಲ್ಲಿದ್ದಾರೆ ಈ ರಾಜ್ಯಪಾಲರು ಅದು ಹೇಗೆ ಇಪ್ಪತ್ತೊಂದನೆ ಶತಮಾನಕ್ಕೆ ಕರೆದುಕೊಂಡು ಹೋಗುತ್ತಾರೆ.

5.20 ಪಿ.ಎಂ.

21ನೇ ಶತಮಾನಕ್ಕೆ ಹೋಗಲೇ ಬಾರದು ಎಂದು ತೀರ್ಮಾನ ಮಾಡಿದ್ದಾರೆ. ತಾವು ನನ್ನ ಜಿಲ್ಲೆಯೊಳಗೆ 20 ಜನ ಸರ್ವೆಯರನ್ನು ಹೊಸದಾಗಿ ಸೇರಿಸಿದ್ದೀರಿ. ಅವರು ಅಳತೆ ಮಾಡುವುದಕ್ಕೆ ಸಂಕಲ್ ಇಲ್ಲ ಅಥವಾ ಚೈನು ಇಲ್ಲ. ಅವರಿಗೆ ಟ್ರೈನಿಂಗ್ ನಡೆಯುತ್ತಿದೆ. ಜನರು ಜಾಗ ಅಳತೆ ಮಾಡಿಕೊಡಿ ಎಂದು ಹೇಳಿದರೆ ಕೆಲವೊಂದು ಸಲ ಹಗ್ಗ ಹಿಡಿದುಕೊಂಡು ಅಂದಾಜು ಮೇಲೆ ಅಳೆದು ಕೊಡುತ್ತಾರೆ. ಒಂದು ಚೈನಿಗೆ ಹಗ್ಗ ಹಿಡಿದು ಅದರ ಆಧಾರದ ಮೇಲೆ ಆ ಹಗ್ಗ ಹಿಡಿದುಕೊಂಡು ಅಳತೆ ಮಾಡುತ್ತಾರೆ, ಆದ್ದರಿಂದ ಇಂತಹ ಒಂದು ಭಾಷಣವನ್ನು ದಯಪಾಲಿಸಿದ್ದಕ್ಕೆ ಕೃತಜ್ಞತೆಯನ್ನು ಅರ್ಪಿಸಬೇಕೋ? ಅದಕೆ ಬೆಂಬಲವನು ಸೂಚಿಸಬೇಕೋ? ಎಂಬುದನು ಸರ್ಕಾರಕೆ ಕೇಳುತೇನೆ.

ಶ್ರೀ ಕುಂಬ್ಳೆ ಸುಂದರ್‌ರಾವ್ (ಸೂರತ್ಕಲ್) : ಮಾನ್ಯ ಉಪಾಧ್ಯಕ್ಷರೆ, ಸಂಸ್ಕೃತದಲ್ಲಿ ಒಂದು ಮಾತಿದೆ ಅದೇನೆಂದರೆ "ಸರ್ವೇಜನಾಹ್ ಸುಖಿನೋಭವಂತು" ಎಂದು. ಈ ಸರ್ವೇಯರ್‌ರವರುಗಳ ಕಥೆ ಕೇಳುವಾಗ ಅವರು ಸುಖವಾಗಿ ಇದ್ದಾರೆ, ಏನೂ ಅವರ ಹತ್ತಿರ ಇಲ್ಲ ಎಂದ ಹಾಗೆ ಆಯಿತು.

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಶ್ರೀ ಮಂಜುನಾಥ್ ರವರು ಹೇಳುವುದರಲ್ಲಿ ಸತ್ಯವಿದೆ. ಆ ಇಲಾಖೆಯಲ್ಲಿ ಚೈನು ಮುಂತಾದ ಸಲಕರಣೆಗಳು ಅವರಿಗೆ ಇರಲಿಲ್ಲ. ಈಗ ಹೊಸದಾಗಿ ಕೇಂದ್ರ ಸರ್ಕಾರದಿಂದ 2 ತಿಂಗಳ ಹಿಂದೆ ಎರಡೂವರೆ ಕೋಟಿ ರೂಪಾಯಿ ಬಂದಿದೆ. ಅದರ ಜೊತೆಗೆ ನಮ್ಮ ಸರ್ಕಾರದಿಂದ ಎರಡೂವರೆ ಕೋಟಿ ರೂಪಾಯಿ ಸೇರಿಸಿ ಒಟ್ಟು 5 ಕೋಟಿ ರೂಪಾಯಿಗಳಲ್ಲಿ ಈ ಸಲಕರಣೆ ಸಲುವಾಗಿ ವ್ಯವಸ್ಥೆ ಮಾಡುತ್ತೇವೆ. ಸುಮಾರು 50 ವರ್ಷಗಳು ಆದರೂ ಕೂಡ ಈ ಡೆಪ್ಯೂಟಿ ಡೈರೆಕ್ಟರುಗಳಿಗೆ ಜೀಪು ಕೊಡುವ ವ್ಯವಸ್ಥೆ ಇರಲಿಲ್ಲ. ಅವರ ಎಲ್ಲಾ ಅವಶ್ಯಕತೆಗಳನ್ನು ಅರಿತುಕೊಂಡು ಈಗ 25 ಜೀಪುಗಳನ್ನು ಕೊಡಿಸಿದ್ದೇವೆ. ಮೊದಲು ಅವರಿಗೆ ಫೋನ್ ಇರಲಿಲ್ಲ. ಒಂದು ತಿಂಗಳ ಹಿಂದೆ ನಾನು ಇಲಾಖೆಗೆ ಫೋನ್ ಕೊಡಿಸಿದ್ದೇನೆ. ಅದನ್ನು ಮಾನ್ಯ ಮಂಜುನಾಥ್‌ರವರು ಹೇಳುತ್ತಿಲ್ಲ..

ಶ್ರೀ ಅಯನೂರು ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ಈ ಇಲಾಖೆಗೆ 3 ತಿಂಗಳ ಹಿಂದೆ ಎಲ್ಲಾ ಮಾಡಿದ್ದೇವೆಂದು ಹೇಳುತ್ತಾರೆ. 50 ವರ್ಷದ ಕೆಳಗೆ ಈ ಇಲಾಖೆ 1870ರ ಭೂಪಟವನ್ನು ಇಟ್ಟುಕೊಂಡು ಅಳತೆ ಮಾಡುತ್ತಾರೆ. ಅದನ್ನು ಹೇಳುತ್ತಿಲ್ಲ. ಅಂದರೆ ಒಂದೂಕಾಲು ಶತಮಾನಗಳಿಂದ ಹಿಂದೆ ಇರತಕ್ಕಂಥ ದಾಖಲೆ, ಭೂಪಟಗಳನ್ನು ಇಟ್ಟುಕೊಂಡು ಕೆಲಸ ಮಾಡುತ್ತಾರೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ? ಆ ಭೂಪಟಗಳು ಮರಾಠಿ ಭಾಷೆಯಲ್ಲಿ ಇವೆ. 1970ರ ಒಳಗೆ ಇರತಕ್ಕಂಥ ಒಂದು ಭೂಪಟವನ್ನು ಹೊಸದಾಗಿ ಮಾಡುವುದಕ್ಕೆ ಆಗಿಲ್ಲ, 3 ತಿಂಗಳ ಕೆಳಗೆ ಜೀಪು ಕೊಟ್ಟಿದ್ದೇವೆಂದು ನೀವು ಮಾನ್ಯ ದೇವೇಗೌಡರ ಸರ್ಕಾರದಲ್ಲಿ 2 ರೂ. 1 ರೂ. 5ರೂ. ಗಳಿಗೆ 10 ಕಡೆ ಅಂಟಿಸಿದ ಹಾಗೆ ಆ ನೋಟುಗಳ ಪರಿಸ್ಥಿತಿ ಏನು ಅದೇ ರೀತಿಯ ಕೆಟ್ಟ ಪರಿಸ್ಥಿತಿ ನಮ್ಮ ಭೂ ದಾಖಲೆಗೆ ಪರಿಸ್ಥಿತಿ ಇದೆ. ಒಮ್ಮೆ ಭೂ ದಾಖಲೆಗಳು ಸರಿಯಾಗಿ ಸಂರಕ್ಷಣೆ ಆಗಿದಿದ್ದರೆ, ಸಿವಿಲ್ ವ್ಯಾಜ್ಯಗಳು, ಮರ್ಡರಗಳು, ಕಗ್ಗೊಲೆಗಳು, ರಕ್ತಪಾತ, ಕಾನೂನು ಉಲ್ಲಂಘನೆ ಇವೆಲ್ಲದಕ್ಕೂ ತಮ್ಮ ಸರ್ವೇ ಇಲಾಖೆ ಮೂಲಭೂತ ಕಾರಣವಾಗುತ್ತದೆ. ಇಂತಹ ಸರ್ವೇ ಇಲಾಖೆ 5 ಸಾವಿರ ಜನಸಂಖ್ಯೆ ಮೀರಿದಂಥ ನಗರಗಳನ್ನು ಪುನರ್ ಸರ್ವೇ ಮಾಡಬೇಕೆಂದು ಕಾನೂನಿನಲ್ಲಿದೆ. ಈ ರಾಜ್ಯದಲ್ಲಿರತಕ್ಕಂಥ ಎಷ್ಟು ನಗರಗಳನ್ನು ತಾವು ಸರ್ವೆ ಮಾಡಿಸಿದ್ದೀರಿ? ನಮ್ಮ ನ್ಯ ನಾಗೇಗೌಡರು ಹೊಸ ಹೊಸ ನೀರಾವರಿ ಯೋಜನೆಗಳನ್ನು ಅನೌನ್ಸ್ ಮಾಡಿದ್ದಾರೆ. ಹೊಸ ನಾಲೆಗಳು ಹೋಗಿವೆ. ಆ ನಾಲೆಗಳು ಹೋದಾಗ ಯಾವ ಸರ್ವೆ ನಂಬರನಲ್ಲಿ ಎಷ್ಟು ಭೂಮಿ ಹೋಯಿತು, ಖರಾಜು ಎಷ್ಟು ಉಳಿಯಿತು, ಇದರ ಬಗ್ಗೆ ಏನಾದರೂ ದಾಖಲೆ ಇದೆಯೇ? ನಮ್ಮ ರಾಜ್ಯದ ಭೂ ವಿಸ್ತೀರ್ಣ ಎಷ್ಟು ಇದೆ? ಅದರಲ್ಲಿ ನಾಲೆಗಳು ಎಷ್ಟು? ಅದರಲ್ಲಿ ಜನಸಂಖ್ಯೆ ಇರುವುದು ಎಷ್ಟು? ಕಾಡು ಇರುವುದು ಎಷ್ಟು ಎನ್ನತಕ್ಕಂಥ ದಾಖಲೆಗಳು ನಮ್ಮ ರಾಜ್ಯಸರ್ಕಾರದಲ್ಲಿ ಅಧಿಕೃತವಾಗಿ ಇಲ್ಲ. ಇಂತಹ ಸರ್ವೆ ಇಲಾಖೆಯ ಸರ್ವೆ ಕೆಲಸ

ಮೊಟ್ಟಮೊದಲನೆಯದಾಗಿ ಆಗಬೇಕು. ಮತ್ತು ಕಂದಾಯ ಇಲಾಖೆಯಲ್ಲಿ ಅದಕ್ಕೆ ಪ್ರಾಧಾನ್ಯತೆಯನ್ನು ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಇನ್ನು ನಮ ರಾಜ್ಯದಲ್ಲಿ ಗಣಿ ಕೈಗಾರಿಕೆಗಳನ್ನು ಮಾಡುತ್ತಿದ್ದಾರೆ. ವಿದೇಶಿ ಕಂಪನಿಗಳಿಗೆ ಪರವಾನಿಗೆ ಕೊಡುತ್ತಾರೆ ಎನ್ನುವಂಥ ಸುದ್ದಿಗಳು ಇವೆ. ಒಂದು ಸುತ್ತಿನ ಮಾತುಕತೆ ಮಂತ್ರಿಗಳ ಜೊತೆ ನಮ್ಮ ಜಿಲ್ಲೆಯ ಶಾಸಕರೆಲ್ಲ ಸೇರಿ ಮಾಡಿದ್ದೇವೆ. ಶಿವಮೊಗ್ಗದ ಹತ್ತಿರ ನೆಲಮಟ್ಟದಲ್ಲಿ ವಿಮಾನಗಲು ಹಾರಾಡಿದವು. ಯಾರ ವಿಮಾನಗಳು ಇಷ್ಟು ಅಡಿಯಲ್ಲಿ ಇಲ್ಲಿ ಹಾರಾಡುತ್ತಿವೆ ಎಂದು ನಾವು ಡಿ.ಸಿ.ಯವರು ಹೇಳಿದರು. ನಾವು ಗಣಿಕೈಗಾರಿಕೆಯ ಮಂತ್ರಿಗಳನ್ನು ಇದಕ್ಕೆ ಸಂಬಂಧಪಟ್ಟ ಹಾಗೆ ಕೇಳಿದೆವು. ಅದಕ್ಕೆ ಅವರು 'ನಾವು ಯಾರಿಗೂ ಪರವಾನಿಗೆಯನ್ನು ಕೊಟ್ಟಿಲ್ಲ, ಅದು ಯಾರ ವಿಮಾನವೆಂದು ಗೊತ್ತಿಲ್ಲವೆಂದು ' ಹೇಳಿದರು. ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ದಟ್ಟವಾದಂಥ ಕಾಡಿನೊಳಗೆ ಬಂದು ಫೋಟೋವನ್ನು ತೆಗೆಯತಕ್ಕಂಥ ಮತ್ತು ಮ್ಯಾಗ್ನೇಟಿಕ್ ಪವರಸಲ್ಲಿ ಎಲ್ಲೆಲ್ಲಿ ಖನಿಜ ಇದೆ ಎಂದು ಅದನ್ನು ತಿಳಿದುಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡಿದರು.

ನಾವು ಅದನ್ನು ತಡೆಯುವುದಕ್ಕೆ ಪ್ರಯತ್ನವನ್ನು ನಡೆಸಿದೆವು. ಪರಿಸರ ಪ್ರೇಮಿಗಳು ಪರಿಸರ ಹೋರಾಟವನ್ನು ಮಾಡುತ್ತಿದ್ದಾರೆ. ಆದರೆ ಇದುವರೆಗೆ ಅದರ ಗೌಪ್ಯತೆ, ರಹಸ್ಯ ಬಯಲಾಗಿಲ್ಲ. ಪ್ರಾರಂಭದಲ್ಲಿ ತಮ್ಮ ಸರ್ಕಾರವನ್ನು " ನಮ್ಮದು ಪಾರದರ್ಶಕ ಸರ್ಕಾರೆಂದು" ಹೇಳಿದಿರಿ. ಅಧಿಕಾರ ಪ್ರಮಾಣವಚನ ತೆಗೆದುಕೊಂಡ ಮೊದಲನೆ ವರ್ಷ ಅಂತು 'ಪಾರದರ್ಶಕ ಸರ್ಕಾರ' ಅಂದರೆ ಅದು ಎಷ್ಟು ಪಾರದರ್ಶಕವೆಂದರೆ 'ನೀರು ಪಂಚೆ ಉಟ್ಟುಕೊಂಡಷ್ಟು', ನೀರು ಪಂಚೆ ಉಟ್ಟುಕೊಂಡರೆ ಏನು ಕಾಣಬಹುದೋ ಅಂತಹ ಪಾರದರ್ಶಕ ಸರ್ಕಾರ ಎಂದು ಹೇಳುವಂಥ ಸ್ಥಿತಿಗೆ ಬಂದಿದೆ. ಒಂದು ಪಾರದರ್ಶಕ ಸರ್ಕಾರದೊಳಗೆ ಯಾವುದನ್ನು ಮುಚ್ಚಿಡಬೇಕು, ಯಾವುದನ್ನು ತೆರೆದಿಡಬೇಕು ಎಂದು ಗೊತ್ತಿಲ್ಲ. ಮಾನ್ಯ ಜೆ.ಹೆಚ್. ಪಟೇಲರು ಯಾವುದನ್ನು ಮುಚ್ಚಿಡಬೇಕೋ ಅದನ್ನು ತೆರೆದಿರಡುತ್ತಾರೆ. ಆದರೆ ಸಾರ್ವಜನಿಕರು ತಿಳಿದುಕೊಳ್ಳುವಂಥ ಹಕ್ಕು ಯಾವುದು ಇದೆಸ ಅದು ಗಣಿ ಕೈಗಾರಿಕೆ ಎಲ್ಲಿ ನಡೆಯುತ್ತಿದೆ, ಎಲ್ಲಿ ಅರಣ್ಯ ನಾಶವಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳಬೇಕೆಂದರೆ ಅದನ್ನು ಮುಚ್ಚಿಡುತ್ತಿದ್ದೀರಿ. ಇದು ನಷ್ಟ ಸರಿ? ಮುಚ್ಚಿಡುವುದು ಯಾವುದು, ಬಿಚ್ಚಿಡುವುದು ಯಾವುದು ಎಂಬುದರ ಬಗ್ಗೆ ಗೊತ್ತಿಲ್ಲದೆ ಇರತಕ್ಕಂಥ ಸರ್ಕಾರ ನಮ್ಮ ರಾಜ್ಯದಲ್ಲಿ ಆಳುತ್ತಿದೆಯಲ್ಲ ಅದನ್ನು ಹೊಗಳುತ್ತಿರತಕ್ಕಂಥ ರಾಜ್ಯಪಾಲರ ಭಾಷಣಕ್ಕೆ ನಾವು ವಂದಿಸಬೇಕೆ? ಕೃತಜ್ಞತೆ? ಮುಚ್ಚಿಡುವ ವಿಚಾರವನ್ನು ದೃಷ್ಟಿಯಲ್ಲಿಟ್ಟುಕೊಂಡು ನಾನು ಹೇಳುತ್ತಿದ್ದೇನೆ. ಮಾನ್ಯ ಜೆ.ಹೆಚ್. ಪಟೇಲರು ಒಂದು ಕಡೆ ಮಾತನಾಡುತ್ತಾ ಹೇಳಿದರು "ನನಗೆ ವುಮನೆ ಅಂಡ್ ವೈನ, ಇದನ್ನು ಯಾರು ಬೇಡ ಎಂದು ಹೇಳಿದರು, ನಿಮ್ಮ ಮನೆಯಲ್ಲಿ ನೀವು ಬಾಗಿಲು ಹಾಕಿಕೊಂಡು ಮಾಡಿಕೊಳ್ಳಿ" ಇದನ್ನು ನಮ್ಮ ಜಿಲ್ಲೆಯ ಯಜಮಾನರು ಹೇಳಿದ್ದುದು. ಅವರ ಬಗ್ಗೆ ನನಗೆ ಬಹಳ ಗೌರವವಿದೆ. ಆದರೆ ಅವರ ಬಗ್ಗೆ ಚಿಕ್ಕವನೊಬ್ಬ ಪ್ರಶ್ನೆ ಮಾಡುವ ಸಂದರ್ಭ ಬಂತಲ್ಲವೆ? "ವುಮೆನ್ ಅಂಡ್ ವೈನ್ ಇದರ ಬಗ್ಗೆ ನನಗೆ ಬಹಳು ಇದು ಇದೆ" ಯಾವುದು ಇದೆ, ಅದನ್ನು ನಾನು ವಿಮರ್ಶಿ ಹೇಳುವುದಿಲ್ಲ. ಅದು ಏನೇನಿದೆಯೋ ಅದು ಹೊರಗಡೆ ಗೊತ್ತಿದೆ. ಅದನ್ನು ನಾನು ಇಲ್ಲಿ ಹೇಳಿದರೆ ಅಪಶಬ್ಧವಾಗುತ್ತದೆ.

ಅದು ಸರಿಯಾಗುವುದಿಲ್ಲ. ಪುನಃ ಇದರ ಜೊತೆಗೆ ಅವರು ಹೇಳುವುದೇನೆಂದರೆ " ನನ್ನ ಶ್ರೀಮಂತಿಯವರು ನನ್ನನು ಕ್ಷಮಿಸಿದ್ದಾರೆ. ನಾನು ಯಿಲ್ಲ ಆಗುವುದಿಲ್ಲ. ನನಗೆ ಸಮಯ ವ್ಯಯವಾಗುತ್ತದೆ.

ಶ್ರೀ ಎನ್. ರಾಜಣ್ಣ (ಭಾರತೀನಗರ ಕ್ಷೇತ್ರ) : ಮಾನ್ಯ ಉಪಾಧ್ಯಕ್ಷರೆ, ಅದು ಮಾನ್ಯ ಮುಖ್ಯಮಂತ್ರಿಗಳ ಪರ್ಸನಲ್ ವಿಷಯ. ಪರ್ಸನಲ್ ಆಗಿ ಅವರು ಏನಾದರೂ ಮಾಡಿಕೊಳ್ಳಬಹುದು.

ಶ್ರೀ ಅಯನೂರು ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ನಾನು ಶ್ರೀ ರಾಜಣ್ಣವರು ಹೇಳಿದ್ದನ್ನೇ ಹೇಳುತ್ತಿದ್ದೇನೆ ಮಾನ್ಯ ಮುಖ್ಯಮಂತ್ರಿಗಳದ್ದು ಪ್ಯೂರ್ಲಿ ಪರ್ಸನಲ್ ಎಂದು. ಅವರ ಪರ್ಸನಲ್ ಎಷ್ಟು ಇರಬೇಕೆಂದರೆ ಅವರ ಜೇಜಿನೊಳಗೆ ಇರುವ ಸಣಾಣ ಪರ್ಸ್ ಇದ್ದ ಹಾಗೆ ಇರಬೇಕು. ಅದು ಇಡೀ ರಾಜ್ಯದ ಉದ್ದಗಲ್ಲಕ್ಕೂ ಬಿಟ್ಟಿ ತೋರಿಸುವ ಹಾಗೆ ಆಗಬಾರದು. ನಮ್ಮ ಶ್ರೀ ಮತಿಯವರ ಕ್ಷಮಿಸಿದ್ದಾರೆಂದು ಅವರು ಹೇಳಿದರು. ಸರಿ, ಅದಕ್ಕೆ ನಮ್ಮ ಭಿನ್ನಾಭಿಯವೇನು ಇಲ್ಲ. ಶ್ರೀ ಜೆ.ಹೆಚ್. ಪಟೇಲ್ ರನ್ನು ಅವರು ಮನನೆಯವರು ಕ್ಷಮಿಸಿದ ಮೇಲೆ ಅದನ್ನು ಕೇಳುವುದಕ್ಕೆ ನಾವು ಯಾರು? ನಾವು ಯಾರೂ ಅದನ್ನು ಕೇಳಬಾರದು. ಆದರೆ ಈ ರಾಜ್ಯದ ಮುಖ್ಯಮಂತ್ರಿಗಳು ಹೇಳಿದ್ದನ್ನು ಈ ರಾಜ್ಯದ ಮತದಾರರು ಕ್ಷಮೀಸಿದ್ದಾರೆಯೇ ಷಕ್ಷಮಿಸಿದರೆ ಕ್ಷಮಿಸಲಿ,ಅವರು ಹಾಗೆ ಹೇಳಿದ ಮೇಲೆ ಮೊನ್ನೆ ಎರಡು ಕಡೆ ಕ್ಷಮಿಸಿದ್ದಾರೆಯ.

ಶ್ರೀ ಎನ್. ರಾಜಣ್ಣ : ಮಾನ್ಯ ಉಪಾಧ್ಯಕ್ಷರೆ, ಬಿಜೆಪಿಗೆ 28 ಸಾವಿರ ಒಟು 1994ರಲ್ಲಿ ಬಂದಿತ್ತು. ಮೊನ್ನೆ ಕೇವಲ 8 ಸಾವಿರ ಬಂದಿದೆ. ಆ ಓಟು ಅಲ್ಲಿ ಹೋಗಿರುವುದು.

(ಗೊಂದಲ)

ಶ್ರೀ ಅಯನೂರು ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ಸದನ ಮುಗಿಸಿಕೊಂಡು ಹೋಗಿ ಟಿ.ವಿ. ನೋಡುತ್ತಿದ್ದೆ. ಅದರಲ್ಲಿ 'ಬಬ್ರುವಾಹ' ಸಿನಿಮಾದ ಹಾಡು ಬರುತ್ತಿತ್ತು. ಅರ್ಜುನ ಠೀವಿಯಲ್ಲಿ ನಿಂತುಕೊಂಡು ನಾನು ಮೂರು ಲೋಕದ ಗಂಡ, ಅಪ್ರತಿಮ ಪರಾಕ್ರಮಿ, ಸೋಲರಿಯದ ವೀರ ಎಂದು ಅವನು ತನ್ನನ್ನು ತಾವೇ ಹೊಗಳಿಕೊಳ್ಳುತ್ತಿರುತ್ತಾನೆ. ಅವನ ಎದುರಗಡೆ ಬಬ್ರುವಾಹನ ನಿಂತುಕೊಂಡಿರುತ್ತಾನೆ. ಪರಸ್ಪರ ತೆಗಳಿಕೆ ನಡೆಯುತ್ತಿರುತ್ತದೆ. ಹಾಗೆಯೇ ನಮ್ಮ ಮಾನ್ಯ ಮುಖ್ಯಮಂತ್ರಿಗಳವರನ್ನು ಯಾರೂ ಕೇಳದಿದ್ದರು " ನಾನು ಇಂಥವನು, ನಾನು ಮೂರು ಲೋಕದ ಗಂಡ, ಅಪ್ರತಿಮ ಸಾಹಸಿ, ನಾನು ಅಸಹಾಯ ಶೂರ ನನ್ನನ್ನು ಮೀರಿಸಿದವರು ಈ ರಾಜ್ಯದಲ್ಲಿ ಯಾರು ಇಲ್ಲ" ಎಂದು ಆ ಸಿನಿಮಾದಲ್ಲಿ ಡಾ: ರಾಜಕುಮಾರ್ ಅರ್ಜುನನ ಪಾತ್ರದಲ್ಲಿ ಹೇಳುತ್ತಿರುತ್ತಾರೆ. ಅದಕ್ಕೆ ಬಬ್ರುವಾಹನನು ಸಹ ಉತ್ತರವನ್ನು ಕೊಡುತ್ತಿದ್ದ. ಆ ಉತ್ತರವನ್ನು ಸ್ವಲ್ಪ ಬದಲಾವಣೆ ಮಾಡಿದರೆ, ಅದರಲ್ಲಿ ಬಬ್ರುವಾಹನ ಹೇಳುತ್ತಾನೆ, ಅದು ಹೇಗೆಂದರೆ 'ಯಾರು ತಿಳಿಯರು ನಿನ್ನ ಭುಜಬಲ ಪರಾಕ್ರಮ'ಎಂದು. ಅದನ್ನು ಸ್ವಲ್ಪ ಬದಲಾವಣೆ ಮಾಡಿ ಹೇಳಿದಾಗ" ಯಾರು ಅರಿಯರು ಪಟೇಲರೆ, ನಿಮ್ಮ ಮೈಮನದ ಪರಾಕ್ರಮ, ಮಾನಿನಿ ಮದಿರೆಯಾಳ್ ಅರ್ಚಿಸಿದ ಇರುಳುಗಳ ಕರ್ಮ, ಎಲ್ಲದಕು ಕಾರಣನು ಆ ಒಳಗಿರುವ ಪರಮಾತ್ಮ" ಆ ಬಬ್ರುವಾಹನ ಹಾಡಿದ ಹಾಡಿಗೆ ಒಂದು ಪದವನ್ನು ಇಲ್ಲಿ

ವ್ಯತ್ಯಾಸ ಮಾಡಿಬಿಟ್ಟರೆ ಸಾಕು. ಅದು ಅಪ್ಪನಿಗೆ ಮಗ ಹೇಳುವ ಪರಿಸ್ಥಿತಿ. ಇವತ್ತು ನನಗೆ ಅದೇ ಪರಿಸ್ಥಿತಿ ಬಂದಿದೆ. ಅವರು ನನ್ನ ತಂದೆ ಸ್ಥಾನದಲ್ಲಿದ್ದಾರೆ, ನಾನು ಅವರ ಮಗನ ಸ್ಥಾನದಲ್ಲಿದ್ದೇನೆ. ಆ ಕುರುಕ್ಷೇತ್ರದೊಳಗೆ ಅವನು ಹಾಗೆ ಹೇಳಿದರೆ, ಈ ರಾಜಕೀಯ ಕುರುಕ್ಷೇತ್ರದೊಳಗೆ ಪಟೇಲರು ಹೀಗೆ ಹೇಳಿಕೊಂಡು ತಿರುಗಿದರು, ಅವಕ್ಕೆ ರಾಜ್ಯದ ಜನತೆ ಕ್ಷಮಿಸುವುದಿಲ್ಲ, ಈ ರಾಜ್ಯದ ಪರಂಪರೆಯೊಳಗೆ, ಈ ದೇಶದ ಪರಂಪರೆಯೊಳಗೆ ಅವರಿಗೆ ಒಂದು ಉನ್ನತ ಸ್ಥಾನ ಇದೆ. ಅದನ್ನು ಪಕ್ಕಕ್ಕೆ ಸರಿಸಿ, ನಾಲ್ಕೂವರೆ ಐದು ಕೋಟಿ ಜನರ ಪ್ರತಿನಿಧಿಯಾಗಿ ಆಳ್ವಿಕೆಯನ್ನು ಮಾಡುವಾಗ 'ನನ್ನ ಸ್ವಂತ ಇಚ್ಛೆ, ನನ್ನ ಖಾಸಗಿ ಜೀವನ' ಎಂದು ಹೇಳಿ ತಾವು ಬೇಕಾದ್ದನ್ನು ಮಾಡುವುದಕ್ಕೆ ಬರುವುದಿಲ್ಲ. ಹಿಂದೆ ಒಮ್ಮೆ ತಮ್ಮ ಸರ್ಕಾರ ಇದ್ದಾಗ..

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈಗ ಮಾನ್ಯ ಮಂಜುನಾಥ್ ಅವರು ತಮ್ಮ ಭಾಷಣದ ಓಘಕ್ಕೆ ತಾವೇ ಮೆಚ್ಚುಗೆಯನ್ನು ಕೊಟ್ಟು, ಈಗ ಅಪ್ರತಿಷ್ಟವಾದಂಥ ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಪ್ರಸ್ತಾಪ ಮಾಡಲಿಕ್ಕೆ ಅರ್ಹತೆ ಇದೆ. ಆ ಮಾತು ಬೇರೆ. ಮುಖ್ಯಮಂತ್ರಿಗಳು ಇಡೀ ಭಾರತ ದೇಶದ ಒಟ್ಟು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಆ ರೀತಿ ಪ್ರಸ್ತಾಪ ಮಾಡಿದ್ದಾರೆಯೇ ವಿನಹ ಈ ವಿಚಾರಗಳಿಗಾಗಿ ಅಲ್ಲ. ಏಕೆಂದರೆ ನೀವು ಏನು ಪ್ರಸ್ತಾಪ ಮಾಡುವಂಥ ಅಪ್ಪ ಮಗ ಇದ್ದಾರೆ ಅದರಲ್ಲಿ ಒಬ್ಬನು ಬೃಹನ್ನಳೆ ಆಗಿದ್ದಂತಹವನು. ಆದ್ದರಿಂದ ಆತ ಹೇಗೆ ಮೂರು ಮದುವೆ ಮಾಡಿಕೊಂಡು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ ಫರದರ್ ಎಕ್ಸಪ್ಲಾನೇಷನ್ ಶ್ರೀ ಪ್ರಕಾಶ್ ಅವರು ಕೊಡುತ್ತಿದ್ದಾರೆ. ಇದೆಲ್ಲ ನಮಗೆ ಅರ್ಥವೇ ಆಗಲಿಲ್ಲ. ಶ್ರೀಮಂಜುನಥ್ ಅವರು ಹೇಳಿದ ಹಾಗೆ 'ಪೂರ್ತಿಯಾಗಿ ಮುಚ್ಚಿಟ್ಟಿದ್ದು ಹೊರಗಡೆ ಬರಲಿಲ್ಲ' ಎಂದು ಹೇಳಿದರು.

ಶ್ರೀ ಎಂ. ಪಿ. ಪ್ರಕಾಶ: ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಮುಚ್ಚಿಡುವುದು ಅಲ್ಲ, ಈಗ ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಮಾತನಾಡಿದರೇ ವಿನಹ ಇನ್ನು ಬೇರೆ ಯಾವುದೇ ಅರ್ಥದಲ್ಲಿ ಅವರು ಮಾತಾಡಲಿಲ್ಲ.

(ಗೊಂದಲ)

ಶ್ರೀ ಅಯನೂರು ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ನಾನು ಒಬ್ಬ ಸದಸ್ಯನಾಗಿ ನನ್ನ ಮನಸ್ಸಿಗೆ ಆದಂಥ ನೋವನ್ನು ಬೆರೆಸಿ ಪ್ರಕಟ ಮಾಡಿದ್ದೇನೆ ಅಷ್ಟೆ. ನಾವು ಬಹಳಷ್ಟು ಸಮಯದಲ್ಲಿ ವಿದೇಶಗಳಲ್ಲಿ ಇರುವಂಥ ದೊಡ್ಡ ದೊಡ್ಡವನ್ನು ಉದಾಹರಣೆಯಾಗಿ ತೆಗೆದುಕೊಳ್ಳುತ್ತೇವೆ. ಯಾವ ಸಮಾಜದಲ್ಲಿ ಸ್ವೇಚ್ಛಾಚಾರವನ್ನು ಮನ್ನಣೆ ಮಾಡಿದ್ದಾರೋ ಸೆಕ್ಸಗೆ ಬೆಲೆ ಇಲ್ಲವೋ, ಅಂತಹ ಒಂದು ಸಮಾಜದಲ್ಲಿ ಆಳ್ವಿಕೆ ನಡೆಸತಕ್ಕಂಥ ಉನ್ನತ ನಾಯಕನು ಒಬ್ಬ ಹೊರಗಡೆಯ ಹೆಚ್ಚಿನ ಪರಿಚಯ, ಅಸೋಸಿಯೇಷನ್ ಇದ್ದರೆ, ಬೇರೆ ಸಂದರ್ಭವಲ್ಲ, ರಾಜೀನಾಮೆ ಕೊಡಬೇಕಾದಂಥ ಪರಿಸ್ಥಿತಿ ಇವತ್ತು ಪ್ರಪಂಚದಲ್ಲಿದೆ. ಆದರೆ ಇಲ್ಲಿ ವೈಯಕ್ತಿಕವಾದ ಜೀವನದಲ್ಲಿ ಒಂದು ಶಿಸ್ತನ್ನು, ಸಂಯಮವನ್ನು

ಇಟ್ಟುಕೊಂಡು ಈ ದೇಶದ ಪರಂಪರೆಯಲ್ಲಿ ಸ್ವೇಚ್ಛಾರಕಕ್ಕೆ ಅವಕಾಶವಿಲ್ಲ. ಇದೇ ವಿಷಯವನ್ನು ಬಹಳ ಹೊತ್ತು ಮುಂದುವರಿಯುವುವಕ್ಕೆ ಹೋಗುವುದಿಲ್ಲ. ಆಡಿದ ಮಾತನ್ನು ಉಳಿಸಿಕೊಳ್ಳುವಂಥ ಸರ್ಕಾರ ಇದಲ್ಲ. ಎರಡು ವರ್ಷಗಳ ಹಿಂದೆ ಮಾನ್ಯ ಪ್ರಧಾನಮಂತ್ರಿಗಳು ಇಲ್ಲಿ ಮುಖ್ಯಮಂತ್ರಿಗಳಾಗಿದ್ವಾಗ ಅವರು "ಐದು ವರ್ಷ 80 ಸಾವಿರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು" ನನ್ನ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ಇಲ್ಲಿ ಹೇಳಿದ್ದರು.

ಉಪಾಧ್ಯಕ್ಷರು : ಈ ಸದನದಲ್ಲಿ ಪ್ರಧಾನಮಂತ್ರಿಗಳ ಬಗ್ಗೆ ಏಕೆ ಮಾತನಾಡುತ್ತೀರಿ? ಅವರು ಈಗ ಈ ಸದನದ ಸದಸ್ಯರಲ್ಲ. ಈ ಸದನದ ಸದಸ್ಯರಲ್ಲದವರ ಬಗ್ಗೆ ಮಾತನಾಡಬಾರದು.

ಶ್ರೀ ಅಯನೂರು ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ತಾವು ಈ ಆ ಸ್ಥಾನದಲ್ಲಿ ಕುಳಿತು ಈ ರೀತಿ ಸೆನ್ಸಿಟಿವ್ ಆಗಬಾರದು.

ಶ್ರೀ ಎನ್. ಕೃಷ್ಣ (ಬನ್ನೂರು) : ಮಾನ್. ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ಮಂಜುನಾಥರವರು ಪದೇ ಪದೇ ಏಕೆ ಜ್ಞಾಪಿಸಿಕೊಳ್ಳುತ್ತಾರೆಂದರೆ "ನಾವು 13 ದಿವಸಕ್ಕೆ ಹೊರಟು ಹೋದೆವು, ಅವರು ಇಷ್ಟು ದಿವಸವಾದರು ಅಲ್ಲಿಯೇ ಇದ್ದಾರೆಂದು" ಜ್ಞಾಪಿಸಿ ಕೊಳ್ಳುತ್ತಿದ್ದಾರೆ.

ಶ್ರೀ ಅಯನೂರು ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ಇದನ್ನು ಯಾರು ಹೇಳಿದರೆಂದು ಗೊತ್ತಾಗಬೇಕಲ್ಲವೇ? ಜೆ.ಹೆಚ್. ಪಟೇಲ್ ರವರ ಹಿಂದೆ ಮುಖ್ಯಮಂತ್ರಿಗಳು. ಅವರು ಪ್ರಧಾನಮಂತ್ರಿಗಳು ಆಗಿದ್ದಾರೆಂದು ನಾನು ಹೇಳಿಲ್ಲ.....

ಉಪಾಧ್ಯಕ್ಷರು : ಅವರು ಈ ಸದನದ ಸದಸ್ಯರಲ್ಲ. ಈ ಸರ್ಕಾರ ಎಂದು ಹೇಳಿಬಿಡಿ.

ಶ್ರೀ ಅಯನೂರು ಮಂಜುನಾಥ್ : ಹಿಂದಿನ ಮುಖ್ಯಮಂತ್ರಿಗಳು ಎಂದರೆ ಯಾರು.. ವೀರಪ್ಪ ಮೊಯಿಲಿಯವರ ಕಾಲದಲ್ಲಿ, ಗುಂಡುರಾಯರ ಕಾಲದಲ್ಲಿ ಎಂದು ಹೆಸರು ಹೇಳುವುದಿಲ್ಲವೇ? ಆದ್ದರಿಂದ ಹಿಂದಿನ ಮುಖ್ಯಮಂತ್ರಿ ದೇವೇಗೌಡ ಕಾಲದಲ್ಲಿ ಎಂದು ಏಕೆ ಹೇಳಬಾರದು?

ಉಪಾಧ್ಯಕ್ಷರು: ಅವರು ಈ ಸದನದ ಸದಸ್ಯರು ಅಲ್ಲ. ಸದಸ್ಯರು ಅಲ್ಲದಂಥವರನ್ನು ಇಲ್ಲಿ ಹೆಸರು ಹೇಳಬಾರದೆಂದು ಇದೆ. ಆದರಿಂದ ಅವರ ಹೆಸರನ್ನು ಹೇಳಬಾರದು.

ಶ್ರೀ ಆಯನೂರು ಮಂಜುನಾಥ : ಮಾನ್ಯ ಉಪಾಧ್ಯಕ್ಷರೆ, ಮಾಜಿ ಮುಖ್ಯಮಂತ್ರಿಗಲ ಕಾಲದಲ್ಲಿ ಅವರು ಹೇಳಿದಂಥ ಹೇಳಿಕೆಯನ್ನು ಇಲ್ಲಿ ಓದುತ್ತೇನೆ. ಮುಖ್ಯಮಂತ್ರಿಗಳಾಗಿದ್ದ ಮಾನ್ಯ ದೇವೇಗೌಡರು ನನ್ನ ಪ್ರಶ್ನೆಗೆ ಉತ್ತರ ತಿಳಿಸುತ್ತಾ, 1989ರ ನಂತರ ಸರ್ಕಾರದ ವಿವಿಧ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳದಿರುವುದರಿಂದ ಕೆಲವರ ವಯಸ್ಸು ಮೀರಿದೆ. ಆ ಹಿನ್ನೆಲೆಯಲ್ಲಿ ವಯೋಮಿತಿಯನ್ನು ಹೆಚ್ಚಿಸುವುದಕ್ಕೆ ಸರ್ಕಾರದ ಇಚ್ಛೆ ಇದೆಯೆಂದು ಹೇಳಿದ್ದಾರೆ. ಕೆಲಸಕ್ಕೆ ಅರ್ಜಿ ಹಾಕುವ ವಯಸ್ಸು ಮೀರಿ ಹೋಗಿದೆ. 10 ವರ್ಷಗಳ ಸಡಿಲಿಕೆಯನ್ನು ಮಾಡಿ ಎಂದು ಕೇಳಿದ್ದೆ. ವಯೋಮಿತಿ ಮೀರಿ ಹೋಗಿ ಸಾವಿರಾರು ಜನ ನರಳುತ್ತಿದ್ದಾರೆ. ತಮ್ಮ ಸರ್ಕಾರ ಆಡಿದಂಥ ಮಾತನ್ನು ಉಳಿಸಿಕೊಳ್ಳಲಿಲ್ಲ. ಇದರಲ್ಲಿ ಏನೋ ಸುಳ್ಳು ಹೇಳಿದಿರಿ.

ಶ್ರೀ ಎಸ್. ಕೃಷ್ಣಪ್ಪ : ಮಾನ್ಯ ಉಪಾಧ್ಯರೆ, ಮಾನ್ಯ ಸದಸ್ಯರಾದ ಮಂಜುನಾಥ್‌ರವರು ನಮ್ಮ ಸರ್ಕಾರ ಬಂದ ಮೇಲೆ ಇಲ್ಲಿಯವರೆಗೆ ಎಷ್ಟು ಎಷ್ಟು ತೆಗೆದುಕೊಂಡಿದ್ದಾರೆ, ಹುದ್ದೆಗಳನ್ನು ತುಂಬಿದ್ದಾರೆ ಎಂಬುದನ್ನು ಹೇಳಲಿ.

ಶ್ರೀ ಆಯನೂರು ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ಎಷ್ಟು ತೆಗೆದುಕೊಂಡಿದ್ದೇವೆ ಅಂದರೆ ಇವರನ್ನು ಇಡಿಯಾಗಿ ಖರೀದಿ ಮಾಡುವಷ್ಟು ತೆಗದುಕ್ಕೊಂಡಿದ್ದೇವೆ. ಎಷ್ಟು ಜನರನ್ನು ತೆಗೆದುಕೊಂಡಿದ್ದಾರೆ ಎನ್ನತಕ್ಕಂಥವನ್ನು ನೋಡಿ ಎಂದು ಹೇಳಿದ್ದಕ್ಕೆ ಅಪಾರ್ಥವಾಗಿ ತಿಳಿದುಕೊಂಡು ಅಪಾರ್ಥವಾಗಿ ಮಾತನಾಡತಕ್ಕಂಥ ಜನ ನೀವು..

ಶ್ರೀ ಆಯನೂರು ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ನನ್ನದು ತಪ್ಪಾಗಿದ್ದರೆ, ಕ್ಷಮಿಸಿ. ಇದು ಕರ್ನಾಟಕ ಸರ್ಕಾರ ಪ್ರಕಟ ಮಾಡಿದಂಥ ಕ್ಯಾಲೆಂಡರ್, ನಮಗೆ ನಿಮಗೆಲ್ಲರಿಗೂ ಕೊಟ್ಟಿದ್ದಾರೆ. ಜನತಾದಳ ಸರ್ಕಾರ ಬಂದಮೇಲೆ ಏನು ವಿಶೇಷವೆಂದರೆ, ಇಲ್ಲಿ ಮಹಾನುಭಾವರು, ತಪಸ್ವಿಗಳು, ಸಿದ್ಧಿ ಪುರುಷರು ಬಂದಿದ್ದಾರೆ. ಹಾಗಾಗಿ ಈ ಕ್ಯಾಲೆಂಡರ್‌ನಲ್ಲಿ ಕೊಟ್ಟಿರುವ ಹಾಗೆ ಹುಲಿ ಕೂಡ ಹುಲ್ಲು ತಿನ್ನುತ್ತದೆ. ಹುಲಿ ಶಾಖಾಹಾರಿ ಎಂದು ಈ ಕ್ಯಾಲೆಂಡರಿನಲ್ಲಿ ಹುಲಿಯ ಪರಿಚಯ ಕೊಡುತ್ತಾರೆ. ಹಿಂದಿನ ಕಥೆಗಳಲ್ಲಿ ಯಾರೋ ಒಬ್ಬ ಮುನಿವರ್ಯ ಇದ್ದನೆಂದರೆ, ಆ ಸುತ್ತಮುತ್ತಲು ಇರುವಂಥ ವಾತಾವರಣದಲ್ಲಿ, ಆಶ್ರಮದ ಸುತ್ತಮುತ್ತಲು ಅಹಿಂಸೆ ಇರುತ್ತಿತ್ತು, ಪ್ರಾಣಿಗಳು ಪ್ರಾಣಿಗಳು ಬೇಟೆ ಆಡುತ್ತಿರಲಿಲ್ಲ, ಎಂದು ಕೇಳಿಬರುತ್ತಿತ್ತು. ಬಹುಶಃ ಈಗ ಇಲ್ಲಿ ಮಹಾತ್ಮರು ಕಂಡು ಬಂದಿರಬಹುದು, ಹಾಗಾಗಿ ಮಳೆಬೆಳೆ ಹೋಗಿದೆ, ಇದರಿಂದ ಹುಲಿಗಳು ಹುಲ್ಲು ತಿನ್ನುವುದಕ್ಕೆ ಪ್ರಾರಂಭ ಮಾಡಿವೆ. ಸರ್ಕಾರ ಕಾಲ್ಯೆಂಡರ್ ಮೂಲಕ ಏನು ಹೇಳುತ್ತಾರೆಂದರೆ ಭಾರತೀಯ ಹುಲಿ ದಟ್ಟ ಬಣ್ಣದ ಹಲವು ಪಟ್ಟಿಗಳು ಮತ್ತು ಸಣ್ಣ ಮೇಲ್ಮೈ ಇರುವ ಪ್ರಾಣಿ. ಹುಲಿ ಮೃದು ಹೃದಯಿ, ಅತ್ಯುತ್ತಮ ಶಾಖಾಹಾರಿ' ಎಂದು ಇದನ್ನು ಕರ್ನಾಟಕ ಸರ್ಕಾರ ಪ್ರಿಂಟ್ ಮಾಡಿಸಿದೆ. ಈ ವಿವರಣೆ ಕ್ಯಾಲೆಂಡರಿನ ಮೊದಲನೆ ಪುಟದಲ್ಲಿದೆ. ಈಗ ಕಾಡಿನಲ್ಲಿರುವಂಥ ಪ್ರಾಣಿ ಕೂಡ ಹಲ್ಲುತಿನ್ನುವಂಥ ಪರಿಸ್ಥಿತಿ ಬಂದಿದೆಯೆಂದಾದರೆ ಈ ರಾಜ್ಯದಲ್ಲಿರುವ ಬಡ ಜನರ ಪರಿಸ್ಥಿತಿ ಏನಾಗಿರುತ್ತದೆ? ಏನಾಗಿರಬಹುದು?

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಮಾನ್ಯ ಉಪಾಧ್ಯಕ್ಷರೆ, ಮಾಂಸಹಾರಿಯನ್ನು ಶಾಖಾಹಾರಿ ಎಂದು ತಪ್ಪಾಗಿ ಪ್ರಿಂಟ್ ಆಗಿರಬಹುದು.

ಶ್ರೀ ಆಯನೂರು ಮಂಜುನಾಥ್ : ಮೇಡಂರವರೇ, ಇದರಲ್ಲ ಏನು ಇದೆ ಅದನ್ನು ಮಾತ್ರ ಓದುತ್ತಿದ್ದೇನೆ. ಇದನ್ನು ತಿದ್ದಿಕೊಂಡು ಆ ಮೇಲೆ ಓದಿಕೊಳ್ಳಬಹುದು. ಪುರುಷೊತ್ತು ಇದ್ದಾಗ ತಾವು ಹೇಗೆ ಬೇಕಾದರೂ ಓದಿಕೊಳ್ಳಬಹುದು. ಕಾಡಿನಲ್ಲಿದ್ದುಕೊಂಡು ಸಣ್ಣಪುಟ್ಟ ಪ್ರಾಣಿಗಳನ್ನು ತಿನ್ನುವಂಥ ಹುಲಿ ಕೂಡ ಹುಲ್ಲು ತಿನ್ನುವಂತ ಪರಿಸ್ಥಿತಿ ಬಂದಿದೆಯಲ್ಲ; ಇಡ್ಲಿ ವಡೆ ಪರಿಸ್ಥಿತಿ ಬಂದುಬಿಡುತ್ತಲ್ಲ; ಈ ಕಾಡು ಪ್ರಾಣಿಗಳಿಗೆ ಇಂತಹ ಪರಿಸ್ಥಿತಿ ಬಂದಮೇಲೆ ಈ ದೇಶದ, ರಾಜ್ಯದ ಜನರ ಪರಿಸ್ಥಿತಿಗೆ ಹೇಗಿರಬಹುದು? ಕರೆಂಟ್ ಇಲ್ಲ, ಮಳೆ ಇಲ್ಲ, ಕುಡಿಯುವುದಕ್ಕೆ ನೀರು ಇಲ್ಲ, ತಿನ್ನುವುದಕ್ಕೆ ಅನ್ನ ಇಲ್ಲ, ಕರೆಂಟ್ ಇಲ್ಲದೆ ಫ್ಯಾಕ್ಟರಿಗಳನ್ನು ಮುಚ್ಚುತ್ತಿರುವುದರಿಂದ ನಿರುದ್ಯೋಗಿಗಳಾಗಿ ಬೀದಿ ಬಿಕಾರಿಗಳಾಗುತ್ತಿದ್ದಾರೆ.

ಈ ಸರ್ಕಾರದ ಆಳ್ವಿಕೆಯಲ್ಲಿ ಬಡಜನರ ಪರಿಸ್ಥಿತಿ ಏನಾಗಿರಬಹುದು ಎಂಬುದನ್ನು ನೆನೆಸಿಕೊಂಡಾಗ, ನನ್ನ ಸರ್ಕಾರ, ನನ್ನ ಸರ್ಕಾರ ಎಂದು ಹೊಗಳಿಕೊಳ್ಳತಕ್ಕಂಥ ರಾಜ್ಯಪಾಲರ ಭಾಷಣದ ಮೇಲೆ ನಾನು ವಂದನಾ ನಿರ್ಣಯವನ್ನು ಸಲ್ಲಿಸಬೇಕೆ? ಬೇಡವೆಂದು ತಾವು ಹೇಳಿದರೆ ಮುಗಿಯಿತು. ಅದಕ್ಕೆ ನನ್ನದೇನೂ ಭಿನ್ನಾಭಿಪ್ರಾಯವಿಲ್ಲ.

ಇನ್ನು ನನ್ನ ಕ್ಷೇತ್ರವಾದ ಹೊಸನಗರದಲ್ಲಿ ಒಂದು ಕಾಲೇಜು ಇದೆ. 1991ರಲ್ಲಿ ಮಾಜಿ ಮುಖ್ಯಮಂತ್ರಿ ಶ್ರೀಮಾನ್ ಬಂಗಾರಪ್ಪನವರ ಕಾಲದಲ್ಲಿ ಆ ಕಾಲೇಜಿಗೆ ಶಂಕುಸ್ಥಾಪನೆ ಮಾಡಿದರು. ಆದರೆ ಕೆಲಸ 1994ರ ತನಕ ನಡೆಯಿತು. ಆ ಕಾಲೇಜನ್ನು ಕಟ್ಟಿ ಪೂರ್ತಿಮಾಡುವುದಕ್ಕೆ 46 ಲಕ್ಷ ರೂಪಾಯಿಗಳ ಎಸ್ಟಿಮೇಟನ್ನು ಮಾಡಿದ್ದರು. 1994ರಲ್ಲಿ ಹಿಂದಿನ ಮಾಜಿ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವೇಗೌಡರು ಆ ಕಾಲೇಜಿನ ಕೆಲಸ ನಿಂತುಹೋಯಿತು. ಈ ಫೋಟೋದಲ್ಲಿರುವಂತೆ ಇದರ ಕೆಲಸ ನೆಲಮಟ್ಟದಲ್ಲಿದೆ. ಇಡೀ ಎಸ್ಟಿಮೇಟಿನ ಹಣವನ್ನು ಖರ್ಚು ಮಾಡಿಬಿಟ್ಟಿದೆ ಎಂದು ತೋರಿಸುತ್ತಿದ್ದಾರೆ. 2 ವರ್ಷಗಳಿಂದ ಒಂದು ಇಂಚು ಕೂಡ ಕಾಮಗಾರಿ ಕೆಲಸ ಮಾಡಿಲ್ಲ. ಈ ಎಸ್ಟಿಮೇಟ್ ಹಣವನ್ನು ನುಂಗಿಹಾಕಿದವರು ಯಾರು? ಇಡೀ ಕೆಲಸ ಆಗದೆಯೇ ಇಷ್ಟು ಹಣ ಹೇಗೆ ಖರ್ಚಾಯಿತು? ಇದಕ್ಕೆ ಯಾರ್‍ಯಾರು ಶಾಮೀಲಾಗಿದ್ದಾರೆ? ಯಾರ್‍ಯಾರು ಈ ಹಣವನ್ನು ತಿಂದು ತೇಗಿದ್ದಾರೆ? ಈ ಫೋಟೋವನ್ನು ಮಾನ್ಯ ಅಧ್ಯಕ್ಷರಿಗೆ ಕಳುಹಿಸಿಕೊಡುತ್ತಿದ್ದೇನೆ. ಈ ಫೋಟೋವನ್ನು ಮಂತ್ರಿಗಳಿಗೆ ಕೊಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ದಯಮಾಡಿ ಹೇಳಬೇಕು. ಇದರ ಜೊತೆಗೆ ಕಾಲೇಜು ವಿದ್ಯಾರ್ಥಿಗಳು ಸ್ಕೂಲಿನಲ್ಲಿ ಕುಳಿತು ಪಾಠ ಕೇಳುತ್ತಿದ್ದಾರೆ. ಮೊದಲನೆ ಹಂತ ಅಂದರೆ ಫಸ್ಟ್ ಫ್ಲೋರ್ ಅದನ್ನಾದರೂ ಮುಗಿಸಿಕೊಟ್ಟರೆ, ವಿದ್ಯಾರ್ಥಿಗಳು ಬರೆಯಲಿಕ್ಕೆ, ಓದಲಿಕ್ಕೆ ಸಾಧ್ಯವಾಗುತ್ತದೆ. ಇದನ್ನು ಮಾಡಿಸಿದರೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಉತ್ತಮ ಸರ್ಕಾರವೆಂದು ಏನು ಹೇಳುತ್ತಾರೆ ಅದಕ್ಕೆ ಒಂದು ಬೆಲೆ ಬರುತ್ತದೆ. ಬಕರ್ ಹುಕಂ ಬಗ್ಗೆ ಮಾನ್ಯ ಸದಸ್ಯರಾದ ಈಶ್ವರಪ್ಪನವರು ಪ್ರಸ್ತಾಪ ಮಾಡಿದ್ದಾರೆ. 5 ಕಿ.ಮೀ. ಲಿಮಿಟ್ ಮಾಡಿರುವ ಬಗ್ಗೆ ನಾವು ಏನೋ ಬಹಳ ಒತ್ತಾಯ ಮಾಡುತ್ತಿದ್ದೆವು, ನಿಜ. ಏಕೆಂದರೆ ಶಿವಮೊಗ್ಗದ ಲಿಮಿಟ್ ಮೊದಲು ಕಡಿಮೆ ಇತ್ತು. ಇತ್ತೀಚೆಗೆ ಜಾಸ್ತಿಯಾಗಿದೆ. 1990ರೊಳಗೆ ಯಾರ್‍ಯಾರು ಬಗರೆಹುಕುಂಗೆ ಅರ್ಜಿಯನ್ನು ಹಾಕಿದ್ದರೋ ಅವರಲ್ಲಿ ಬಡವರು, ಹಿಂದುಳಿದವರು ಪರಿಶಿಷ್ಟ ಪಂಗಡವರು ಮೊದಲಾದವರು ಏನು ಹಾಕಿದ್ದರೋ, ಆಡಳಿತಾತ್ಮಕ ವ್ಯವಸ್ಥೆಯಿಂದಾಗಿ ಆ ಸಿಟಿ ಲಿಮಿಟನ್ನು ಜಾಸ್ತಿ ಮಾಡಿರುವುದರಿಂದ, ಇದರಿಂದ ಮತ್ತೆ 5.ಕಿ.ಮೀ. ಆ ಕಡೆಗೆ ಯಾರಿಗೂ ಬಕರ್ ಹುಕಂ ಪಟ್ಟಿ ಕೊಡುವುದಿಲ್ಲ, ಹತ್ತು, ಹದಿನೈದು ಮೂವತ್ತು ವರ್ಷಗಳಿಂದ ಅವರು 'ನನಗೆ ಭೂಮಿ ಸಿಗುತ್ತದೆಂದು ಹೇಳಿ' ಅಲ್ಲಿನ ಗಿಡಗಂಟಿಗಳನ್ನು ಕಡಿದು ಕೈಗಳನ್ನು ಗಾಯ ಮಾಡಿಕೊಂಡು ಕಾಯುತ್ತಿರುವಂಥ ಅವನಿಗೆ ಪಟ್ಟಿ 'ಪಟ್ಟಿ' ಕೊಡುವುದಕ್ಕೆ ಅಡ್ಡಿ ಮಾಡುವಂಥ -ಅ. 5 ಕಿ.ಮೀ ಮಿತಿಯನ್ನು ತಾವು ಇಟ್ಟುಕೊಳ್ಳಿ, ಅದನ್ನು ಬೇಡವೆಂದು ಹೇಳುವುದಿಲ್ಲ. ಆದರೆ 1991ರ ಒಳಗೆ ಯಾರ್‍ಯಾರು ಅರ್ಜಿಯನ್ನು ಹಾಕಿದ್ದಾರೋ ಅಂತಹವರಿಗೆ ಬಗರ್ ಹುಕಂ ಪಟ್ಟಿ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲವೆಂದರೆ, ಶಿವಮೊಗ್ಗ ತಾಲ್ಲೂಕು ಬಗರ್ ಹುಕುಂ ಸಮಿತಿಯ ಕೆಲಸ ಮಾಡುವುದಕ್ಕೆ ಯಾವುದೇ ರೀತಿಯ ಅವಕಾಶವಿಲ್ಲ. ಇನ್ನು ಕೊನೆಯದಾಗಿ ಹೇಳುವುದಾದರೆ, ಈಗಾಗಲೇ ಅದನ್ನು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಇತ್ತೀಚೆಗೆ ಒಬ್ಬ ಮಹಿಳಾ

ಅಧಿಕಾರಿ ಸಾಗರದಲ್ಲಿ ಅಸಿಸ್ಟೆಂಟ್ ಕಮಿಷನರ್ ಆಗಿದ್ದರು. ಈಗ ಇಲ್ಲೆಲ್ಲೋ ಆರೋಗ್ಯ ಇಲಾಖೆಯಲ್ಲಿದ್ದಾರೆ. 1917ರಲ್ಲಿ ಬ್ರಿಟಿಷ್ ಜಮಾನದಲ್ಲಿ ಇದ್ದಂಥ ಒಂದು ಸರ್ಕ್ಯುಲರ್, ಅದನ್ನು 1964ರಲ್ಲಿ ಮತ್ತೊಂದು ಸಾರಿ ಸರ್ಕ್ಯಲರ್ ಆಗಿ ಮಾಡಿದರು. ಹೊಸನಗರ ತಾಲ್ಲೂಕಿನೊಳಗೆ, ಕೆಲವು ಪ್ರದೇಶಗಳೆಲ್ಲಾ ಅರಣ್ಯಕ್ಕೆ ಸೇರಿತ್ತು. 1964ರಲ್ಲಿ ಹೊಸನಗರ ತಾಲ್ಲೂಕಿನಲ್ಲಿ ದಟ್ಟ ಅರಣ್ಯ ಇತ್ತು. ಈಗೆಲ್ಲಾ ಮುಳುಗಡೆಯಾಗಿ ಹಾಳಾಗಿಹೋಗಿದೆ. ಚಕ್ರಾ, ಸಾವೆಹೊಕ್ಕಲು, ವರಾಹಿ, ಶರಾವತಿ ನೀರಾವರಿ ಯೋಜನೆಗಳಿಂದ ಕಾಡು ನಾಶ ಆಗಿಹೋಗಿದೆ. ಆದ್ದರಿಂದ ಜನ ಮುಳುಗಡೆ ಆಗಿಹೋಗಿದ್ದಾರೆ. 1964ನೇ ಇಸವಿಯೊಳಗೆ ಕಾಡು ಎಲ್ಲಿತ್ತು ಎಂದು ಏನು ನೋಟಿಫಿಕೇಷನ್ ಇತ್ತೋ, ಅದನ್ನು 32 ವರ್ಷಗಳ ನಂತರ, ಒಂದಲ್ಲ ಎರಡಲ್ಲ, 32 ವರ್ಷಗಳ ನಂತರ ಅದನ್ನು ಆಧಾರ ಇಟ್ಟುಕೊಂಡು ಒಬ್ಬ ಬೇಜವಾಬ್ದಾರಿ ಐ.ಎ.ಎಸ್. ಅಧಿಕಾರಿಣಿ ಪ್ರೊಬೇಷನರಿ ಪೀರಿಯಡನಲ್ಲಿ ಬಂದಂಥ ಸಂದರ್ಭದಲ್ಲಿ ಅಲ್ಲಿದ್ದಂಥ ಎಲ್ಲಾ ಭೂದಾಖಲೆಗಳನ್ನು ರಾತ್ರೋರಾತ್ರಿ ಕುಳಿತುಕೊಂಡು ಹಗಲು ರಾತ್ರಿ 24 ಗಂಟೆ ಕೆಲಸ ಮಾಡಿ ಎಲ್ಲೂ ಸ್ಥಳ ತನಿಖೆ ಮಾಡಲಿಲ್ಲ, ಅಲ್ಲಿ ಹೋಗಿ ನೋಡಲಿಲ್ಲ; ನೋಡಿದ್ದರೆ ಕಣ್ಣಿಗೆ ಬೀಳುತ್ತಿತ್ತು. ಅಡಿಕೆ ತೋಟಗಳಿವೆ, ಮನೆಗಳಿವೆ, ಅಲ್ಲಿ ಜನ ವಾಸ ಮಾಡುತ್ತಿದ್ದಾರೆ. ಕೆಲವು ಕಾಡುಗಳು ಜಾಳುಗಳಾಗಿದ್ದಾವೆ. ಅವೆಲ್ಲವನ್ನೂ ಅರಣ್ಯ ಎಂದು ಆರ್.ಟಿ.ಸಿ.ನಲ್ಲಿ ತಿದ್ದಿದ್ದಾರಲ್ಲ ಅಂಥ ಐ.ಎ.ಎಸ್. ಅಧಿಕಾರಿ, ವೃತ್ತಿಯಲ್ಲಿ ಇನ್ನೂ ಉಳಿಯಬೇಕೆ? ಇರಬೇಕೇ? ಅವರ ಮೇಲೆ ಏತಕ್ಕೆ ಕ್ರಮವನ್ನು ತೆಗೆದುಕೊಳ್ಳಬಾರದು? ಇವತ್ತು ತಾಲ್ಲೂಕಿನ ಕಾಳಿಕಾಪುರ ಎಂಬ ಗ್ರಾಮದಲ್ಲಿ ಜಿಲ್ಲಾ ಪಂಚಾಯತಿ ವತಿಯಿಂದ ಶಾಲೆಯನ್ನು ಕಟ್ಟುತ್ತಿದ್ದಾರೆ. ತಾವು ವರದಿಯನ್ನು ತರಿಸಿಕೊಳ್ಳಬಹುದು. ಫಾರೆಸ್ಟನವರು ಇಮ್ಮಿಡಿಯೇಟಾಗಿ ಹೋದರು. ಆರ್.ಟಿ.ಸಿ ಪಹಣಿಯಲ್ಲಿ ಎಂಟ್ರಿ ಆಗುತ್ತಿದ್ದ ಹಾಗೆಯೇ ಈ ಶಾಲೆಯನ್ನು ನಿಲ್ಲಿಸಿರಿ, ಇದು ಫಾರೆಸ್ಟ್ ಜಾಗ, ಯಾರೂ ಶಾಲೆಯನ್ನು ಕಟ್ಟುವಹಾಗಿಲ್ಲ ಎಂದು ಹೇಳಿ ನಿಲ್ಲಿಸಿದರು. ಶಾಲೆ ಅರ್ಧಂಬರ್ಧ ಆಗಿ ಕಟ್ಟಡ ನಿಂತಹೋಗಿದೆ. ಜಿಲ್ಲಾ ಪರಿಷತ್ತಿನವರಿಂದ ಬೇಕಾದರ ವಿಚಾರ ಮಾಡಿ ತರಿಸಿಕೊಳ್ಳಿ. ಎಜುಕೇಷನ್ ಡಿಪಾರ್ಟಮೆಂಟನಿಂದ ತರಿಸಿಕೊಳ್ಳಿ. ಅರಣ್ಯ ಇಲಾಖೆಯಿಂದ ತರಿಸಿಕೊಳ್ಳಿ. ಶಾಲೆ ಕಟ್ಟುವುದಕ್ಕೆ ಜಾಗ ಇಲ್ಲ. ನಾಳೆ ಯಾವುದೇ ರೀತಿಯ ಆಶ್ರಯ ಮನೆಗಳನ್ನು ಕಟ್ಟುವುದಕ್ಕೆ ಇವತ್ತು ಜಾಗ ಇಲ್ಲ. ಜನ ಇಷ್ಟು ವರ್ಷ ಅಲ್ಲಿ ಬದುಕಿದ್ದಾರೆ. ಅಲ್ಲಿ ಅಡಿಕೆ ತೋಟಗಳಿವೆ. ಅರಣ್ಯ ಎಂದು ನಾಳೆ ಎಲ್ಲಿ ತೊಂದರೆ ಕೊಡುತ್ತಾರೋ ಎಂದು ಹೆದರಿಕೊಂಡು ಜನ ಭಯಭೀತರಾಗಿದ್ದಾರೆ. ಬಡವ ಗುಡಿಸಲು ಕಟ್ಟಿಕೊಂಡು ಹಳ್ಳಿಗಳಲ್ಲಿ ಗುಡ್ಡಗಳಲ್ಲಿ ಬದುಕಿದ್ದ. ಅವನನ್ನು ಇವತ್ತು ಹೊಡೆದು ಓಡಿಸುತ್ತಿದ್ದಾರೆ. ದಿನನಿತ್ಯ ಅರಣ್ಯ ಇಲಾಖೆಯವರು ಬಂದು ಇದು ಫಾರೆಸ್ಟ ಜಾಗ, ಖಾಲಿ ಮಾಡಿ ಎಂದು ಒತ್ತಾಯ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ಭಾಷಣ ಮಾಡಿದ್ದೇನೆ ಎಂದು ಅಷ್ಟಕ್ಕೇ ಸಮಾಧಾನ ಪಟ್ಟುಕೊಳ್ಳದೆ, ಬಹಳ ಕಷ್ಟುಪಟ್ಟು ಸಮಯ ತೆಗೆದುಕೊಂಡಿದ್ದೇನೆ. ಅದಕ್ಕೆ ಹೊಸನಗರ ಕಾಲೇಜು ತಕ್ಷಣ ಪ್ರಾರಂಭವಾಗಬೇಕು. ಎರಡನೆಯದ ರೆವಿನ್ಯೂ ಇಲಾಖೆ ವಿವೇಚನೆ ಇಲ್ಲದೆ ಫಾರೆಸ್ಟಗೆ ಯಾವಾಗ ವರ್ಗಾವಣೆ ಮಾಡಿತ್ತೋ, ಪರೀಕ್ಷೆ ಮಾಡದೆ ಕುಳಿತ ಜಾಗದಲ್ಲಿ ಮಾಡಿತ್ತೋ, ಅಂಥ ಅನ್ಯಾಯವನ್ನು ಸರಿಪಡಿಸಬೇಕೆಂದು ಒತ್ತಾಯಿಸುತ್ತಾ ಮೂರನೆಯದಾಗಿ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈ ಸಂಗತಿಗಳು ಆಗುವವರೆಗೆ, ವಿವೇಚನೆ ಇಲ್ಲದೆ ಮಾಡಿದ್ದಕ್ಕೋಸ್ಕರ ಆ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುವವರೆಗೆ ಈ ಸದನದಲ್ಲಿ ಇವತ್ತು ಒಂಟಿ ಕಾಲಿನಲ್ಲಿ ನಿಲ್ಲುತ್ತೇನೆ.

ಇವತ್ತು ನನ್ನ ಭಾಷಣ ಮುಗಿದ ಮೇಲೆ ನಾನು ಕೂರುವುದಿಲ್ಲ. ನಾನು ಧರಣಿ ಕುಳಿತು ಸಭೆಗೆ ಅಡ್ಡಿ ಮಾಡುವುದಿಲ್ಲ. ನನ್ನ ಕ್ಷೇತ್ರದಲ್ಲಿ ಅನ್ಯಾಯವಾಗಿದೆ, ನನಗೆ ಅನ್ಯಾಯವಾಗಿದೆ. ನನ್ನ ಕ್ಷೇತ್ರಕ್ಕೆ ಅನ್ಯಾಯವಾಗಿದೆ ಎಂದರೆ ಅದನ್ನು ಸಹಿಸಿಕೊಂಡು ಇರುವುದಕ್ಕೆ ಆಗುವುದಿಲ್ಲ. ಆ ಅಧಿಕಾರಿ ಆರೋಗ್ಯ ಇಲಾಖೆಯಲ್ಲಿದ್ದಾರೆ. ಅವರನ್ನು ಕರೆಯಿರಿ, ಅಮಾನತ್ತಿಲ್ಲಿಡಿ. ಸ್ಥಳ ತನಿಖೆ ಏತಕ್ಕೆ ಆಗಲಿಲ್ಲ? ಅಥವಾ ಅಲ್ಲೇನಾದರೂ ಬೇರೆ ಮಾಡಿದ್ದರೆ, ಅಲ್ಲಿರತಕ್ಕ ತರಹಸೀಲ್ದಾರ್ ಮತ್ತು ರೆವಿನ್ಯೂ ಇನಸ್ಪೆಕ್ಟರುಗಳನ್ನು ಅಮಾನತ್ತಿನಲ್ಲಿಡಿ. ಇದು ಆಗುವವರೆಗೆ ಇವತ್ತಿನ ಸದನ ಏಳುವವರೆಗೆ ನನಗೆ ನಾನೇ ಶಿಕ್ಷೆಯನ್ನು ವಿಧಿಸಿಕೊಳ್ಳುತ್ತಿದ್ದೇನೆ. ನನ್ನಂಥ ಒಬ್ಬ ಶಾಸಕ ಇದ್ದು ನನ್ನ ಕ್ಷೇತ್ರದಲ್ಲಿ ಇಷ್ಟೊಂದು ಅನ್ಯಾಯ ಆಗಿಹೋಯಿತು. ಕಾಲೇಜಿನ ಕಟ್ಟಡ ಕಟ್ಟಲಿಲ್ಲ. ವಿದ್ಯಾರ್ಥಿಗಳು ಬೀದಿ ಪಾಲಾಗಿದ್ದಾರೆ. ಶುಗರ್ ಫ್ಯಾಕ್ಟರಿಯದು ಒಂದಂಶ ಇದೆ. ಶುಗರ್ ಫ್ಯಾಕ್ಟರಿ ಮುಚ್ಚಿ ವರ್ಷಗಟ್ಟಲೆ ಆಯಿತು. ಕಾರ್ಮಿಕರಿಗೆ ಸಂಬಳ ಕೊಟ್ಟಿಲ್ಲ. ಆ ಮಾಲೀಕನನ್ನು ಹಿಡಿದುಕೊಂಡು ಬರುವುದಿಕ್ಕೆ ಆಗುವುದಿಲ್ಲವೇ? ಕಬ್ಬಿನ ಬೆಳೆಗಾರರಿಗೆ ದುಡ್ಡು ಕೊಡಲಿಲ್ಲ. ಇದೆಲ್ಲಕ್ಕೋಸ್ಕರ ಈ ಸರ್ಕಾರದಲ್ಲಿ ಕೇವಲ ಕಂಠಶೋಷಣೆ ಮಾಡಿಕೊಳ್ಳುವ ಬದಲು ಈ ಕ್ಷೇತ್ರದ ಶಾಸಕನಾಗಿ ಇವೆಲ್ಲವನ್ನು ಇನ್ನೂ ಪರಿಹರಿಸುವುದಕ್ಕೆ ಸಾಧ್ಯವಾಗಲಿಲ್ಲ. ನಾನು ವಿಫಲನಾಗಿದ್ದೇನಲ್ಲ ಎಂಬ ನೋವಿನಿಂದ ಒಂಟಿ ಕಾಲಿನ ಶಿಕ್ಷೆಯನ್ನು ಇವತ್ತಿನ ದಿವಸ ಸದನ ಏಳುವವರೆಗೆ ನನಗೆ ನಾನೇ ವಿಧಿಸಿಕೊಳ್ಳುತ್ತಿದ್ದೇನೆ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ನಮಸ್ಕಾರ.

ಶ್ರೀ ಅರಗ ಜ್ಞಾನೇಂದ್ರ : ಸ್ವಾಮಿ ಅಧ್ಯಕ್ಷರೆ, ರೆವಿನ್ಯೂ ಮಿನಿಸ್ಟರ್ ಇಲ್ಲೇ ಇದ್ದಾರೆ. ಇದಕ್ಕೆ ಸ್ಪಷ್ಟೀಕರಣವನ್ನು ದಯಮಾಡಿ ಅವರು ಕೊಡಬೇಕು. ಏಕೆಂದರೆ ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ಈ ಪರಿಸ್ಥಿತಿ ಇದೆ. ನನ್ನ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಕೂಡ ಇದೇ ಪರಿಸ್ಥಿತಿಯಾಗಿದೆ. ರೆವಿನ್ಯೂ ದಾಖಲೆಗಳನ್ನು ತಿದ್ದು ಅದನ್ನು ಅರಣ್ಯ ಎಂದು ಮಾಡಿದ್ದಾರೆ. ಇವತ್ತು ನಮ್ಮ ಜನ ಸುಖವಾಗಿ ಸರಿಯಾದ ರೀತಿಯಲ್ಲಿ ಬದುಕುವಹಾಗಿಲ್ಲ. ಹೆಬ್ಬೆಟ್ಟು ಒತ್ತುವ ರೈತರು ಕೋರ್ಟಿಗೆ ಹೋಗುವ ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ದಯಮಾಡಿ ಸ್ಪಷ್ಟೀಕರಣ ಕೊಡಬೇಕು ರೆವಿನ್ಯೂ ಮಂತ್ರಿಗಳು.

ಉಪಾಧ್ಯಕ್ಷರು : ಮತ್ತೊಬ್ಬರಿಗೆ ಅವಕಾಶ ಸಿಗುವಾಗ ನೀವು ಈ ರೀತಿ ಎದ್ದುನಿಂತು ಮಾತನಾಡುವುದು ಸರಿಯಲ್ಲ. ಮತ್ತೊಬ್ಬರ ಅವಕಾಶವನ್ನು ತೆಗೆದುಕೊಂಡು ಮಾತನಾಡುವುದು ಸರಿಯಲ್ಲ. ಹಾಗೆ ಮಾಡಬಾರದು ತಾವು.

ಶ್ರೀ ಅರಗ ಜ್ಞಾನೇಂದ್ರ : ಅವಕಾಶವನ್ನು ಮಾಡಿಕೊಡಿ.

ಉಪಾಧ್ಯಕ್ಷರು : ತಾವು ಮಾಡತಕ್ಕದ್ದು ಒಳ್ಳೆಯದಲ್ಲ. ತಾವು ಕೊಡಬೇಕು.

ಶ್ರೀ ಅರಗ ಜ್ಞಾನೇಂದ್ರ : ನಮ್ಮ ಜನರ ನೋವನ್ನು ಹೇಳಿಕೊಳ್ಳುವುದು ಎಲ್ಲಿ? ಯಾವ ವೇದಿಕೆಯಿಂದ ಮಾತನಾಡಬೇಕು.

ಉಪಾಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. ಅರ್ಥವಾಗುವುದಿಲ್ಲವೇ ತಮಗೆ, ತಾವು ದಯಮಾಡಿ ಕುಳಿತುಕೊಳ್ಳಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಅಯನೂರು ಮಂಜುನಾಥ್ ಅವರು ತಮ್ಮ ಸ್ಥಾನದಲ್ಲ ನಿರ್ಗಮಿಸಿ ಮಾನ್ಯ ಸಭಾಧ್ಯಕ್ಷ ಪೀಠಕ್ಕೆ ಎದುರಿನ ಐಯ್ಲಿನಲ್ಲಿ (AISLE) ಓಂಟಿ ಕಾಲಿನಲ್ಲಿ ನಿಂತರು)

ಉಪಾಧ್ಯಕ್ಷರು : ಮಂಜುನಾಥ್ ಅವರ ತಾವು ದಯಮಾಡಿ ಕುಳಿತುಕೊಳ್ಳಿ. ಅವರು ಉತ್ತರ ಹೇಳುತ್ತಾರೆ. ತಮಗೆ ಪಿನಂತಿ ಮಾಡಿಕೊಳ್ಳುತ್ತೇನೆ. ಕೈಮುಗಿದು ನಿಮಗೆ ವಿನಂತಿ ಮಾಡಿಕೊಳ್ಳುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಅವರಿಗೆ ಹೇಳುವುಧಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷಕರು : ಅವರು ಉತ್ತರ ಹೇಳುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಿ. ತಮಗೆ ವಿನಂತಿ ಮಾಡುತ್ತೇನೆ, ಇದು ಒಳ್ಳೆಯದಲ್ಲ. ಏಕೆಂದರೆ ಇಲ್ಲಿಯವರೆಗೆ ಚೆನ್ನಾಗಿ ಮಾತನಾಡಿದ್ದೀರಿ. ಒಳ್ಳೆಯ ರೀತಿಯಿಂದ ಪ್ರತಿಪಾದನೆ ಮಾಡಿದ್ದೀರಿ. ಅವರು ಉತ್ತರ ಹೇಳುತ್ತಾರೆ. ತಾವು ಇಲ್ಲಿಯವರೆಗೆ ಚೆನ್ನಾಗಿ ಮಾತನಾಡಿದ್ದೀರಿ. ದಯಮಾಡಿ ಕೂಡಿ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಸಭಾಪತಿಯವರೆ, ಹೊಸ ಅಧ್ಯಾಯ ಪ್ರಾರಂಭ ಮಾಡುವುದು ಬೇಡ.

ಉಪಾಧ್ಯಕ್ಷರು : ವೈ. ರಾಮಕೃಷ್ಣ ಅವರೇ, ಇದು ಸರಿಯಲ್ಲ ಎಂದು ತಾವು ದಮಯಾಡಿ ತಮ್ಮ ಸದಸ್ಯರಿಗೆ ಹೇಳಿ. ಅವರ ಸೀಟಿನಲ್ಲಿ ಕೂರುವುದಕ್ಕೆ ಹೇಳಿ. ತಾವು ದಯಮಾಡಿ ಹೇಳಿರಿ.

ಶ್ರೀ ವೈ. ರಾಮಕೃಷ್ಣ : ಜಿಲ್ಲಾ ಮಂತ್ರಿಗಳಿದ್ದಾರೆ.

ಶ್ರೀ ಜಿ. ಬಸವಣ್ಣಪ್ಪ : ಮಾನ್ಯ ಅಧ್ಯಕ್ಷರೆ..

ಉಪಾಧ್ಯಕ್ಷರು : ಅವರು ಕೂರುವವರೆಗೂ ದಯಮಾಡಿ ಹೇಳಬೇಡಿ. ತಾವು ದಯಮಾಡಿ ಕೂಡಿ. ನಿಮಗೆ ಸಮಾಧಾನ ಆಗದಿದ್ದರೆ ಮತ್ತೆ ಕೇಳಿ. ತಮ್ಮಲ್ಲಿ ವಿನಂತಿ ಮಾಡುತ್ತೇನೆ. ದಯಮಾಡಿ ಕೂಡಿ ಉತ್ತರಿಂದ ಸಮಾಧಾನ ಆಗದಿದ್ದರೆ ಮತ್ತೆ ಬೇಕಾದರೆ ನಿಲ್ಲಿ. ಈಗ ದಯಮಾಡಿ ಕೂಡಿ.

ಶ್ರೀ ವೈ. ರಾಮಕೃಷ್ಣ : ಸಮಾಧಾನ ಆಗದಿದ್ದರೆ ಮತ್ತೆ ಕರೆಯುತ್ತಾರೆಂತೆ ಬನ್ನಿ ಮಂಜುನಾಥ್ ಅವರೆ.

ಉಪಾಧಕ್ಷರು : ಆಹಾರ ಮಂತ್ರಿಗಳೇ, ಉತ್ತರ ಹೇಳಿ.

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಶಾಸಕರಾದ ಶ್ರೀ ಅಯನೂರ್ ಮಂಜುನಾಥ್ ಅವರ ವಾಕಚಾತುರ್ಯ ಚೆನ್ನಾಗಿದೆ. ಅವರು ಚೆನ್ನಾಗಿ ಮಾತನಾಡಿದರು. ಆದೆರ 1964ನೇ ಆಜ್ಞೆಯನ್ನು ಇವತ್ತು ಜಾರಿಗೆ ಕೊಟ್ಟು ಅರಣ್ಯ ಪ್ರೇದಶ ಎಂದು ಘೋಷಣೆ ಮಾಡಿ ಸಾಗು ಮಾಡಿರುವ ಜಮೀನು, ಅಡಿಕೆ ತೋಟ, ಮನೆ ಕಟ್ಟಿರುವ

ಪ್ರದೇಶ ಇವುಗಳನ್ನು ಒಕ್ಕಲೆಬ್ಬಿಸುವ ಪ್ರಯತ್ನವನ್ನು ಅಸಿಸ್ಟೆಂಟ್ ಯಾರನ್ನೂ ಒಕ್ಕಲೆಬ್ಬಿಸಿಲ್ಲ. ಅರಣ್ಯವನ್ನು ಕಡಿದಿಲ್ಲ. ಅಸಿಸ್ಟೆಂಟ್ ಕಮಿಷನರ್ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ನೋಟೀಸ್ ಕಳುಹಿಸಿ ಯಾವರೀತಿ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ನಾವು ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ಸರ್ಕಾರ ಸಿದ್ಧವಿದೆ. ಇದರ ಬಗ್ಗೆ ಹಿಂದೆಮುಂದೆ ಯೋಚನೆ ಮಾಡುವುದಿಲ್ಲ. ಎರಡನೆಯದಾಗಿ ತುಂಗಭದ್ರಾ ಷುಗರ್ ಫ್ಯಾಕ್ಟರಿ ಬಗ್ಗ ನಮ್ಮ ಮುಖ್ಯಮಂತ್ರಿಗಳು ಈಗಾಗಲೇ ಕ್ರಮ ತೆಗೆದುಕೊಂಡಿದ್ದಾರೆ. ಅದನ್ನು ಸರ್ಕಾರವೇ ಟೇಕ್ ಓವರ್ ಮಾಡಿ, ಲೇಬರರ್ಸ್‌ಗೆ ರೈತರಿಗೆ ಏನು ಅನ್ಯಾಯವಾಗಿದೆ ಅದನ್ನು ಆದಷ್ಟು ಬೇಗ ಸರಿಪಡಿಸುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಮಂಜುನಾಥ್ ರವರು ಹೇಳಿರುವ ವಿಷಯದಲ್ಲಿ ನಾವೆಲ್ಲಾ ಶಾಸಕರು ಕೂಡ ಮಂತ್ರಿಗಳಿಗೆ ಪತ್ರ ಬರೆದಿದ್ದೇವೆ. ಲ್ಯಾಂಡ ರೆವಿನ್ಯೂ ಆಕ್ಟ ಪ್ರಕಾರ ಏನಿದೆ ಅರಣ್ಯ ಇಲಾಖೆ ಆಗಿರಬಹುದು ಅಥವಾ ಒಬ್ಬ ಖಾಸಗಿ ಮನುಷ್ಯ ಆಗಿರಬಹುದು, ಯಾರೇ ಆಗಿರಬಹುದು ಒಂದು ಜಮೀನಿನ ಮೇಲೆ ಅವನಿಗೆ ಯಾವುದಾದರೂ ರೀತಿಯಿಂದ ಹಕ್ಕು ಬಂದರೆ, ಆ ಹಕ್ಕಿನ ಪ್ರಕಾರ ಆರ್.ಟಿ.ಸಿ.ಯಲ್ಲಿ ತನ್ನ ಹೆಸರನ್ನು ನಮೂದಿಸಿಕೊಳ್ಳಬೇಕಾದರೆ, ತಹಸೀಲ್ದಾರರಿಗೆ ಅರ್ಜಿ ಕೊಡಬೇಕು. ತಹಸೀಲ್ದಾರ್ ಅವರು ಏನೇನು ಕ್ರಮವನ್ನು ಅನುಸರಿಸಬೇಕೋ ಅದನ್ನು ಅನುಸರಿಸಿಕೊಂಡು ಈ ಜಮೀನಿನ ಖಾತೆಯನ್ನು ಬದಲಾವಣೆ ಮಾಡುವುದರಿಂದ ಯಾವಯಾವ ವರ್ಗದ ಜನರಿಗೆ ಅಫೆಕ್ಟ ಆಗುತ್ತದೆ ಅದರ ಬಗ್ಗೆ ಎಲ್ಲರಿಗೂ ತಿಳಿವಳಿಕೆಯನ್ನು ಕೊಟ್ಟು ವಿಚಾರಣೆ ಮಾಡಿ ಖಾತೆ ಬದಲಾವಣೆ ಮಾಡತಕ್ಕ ಪದ್ಧತಿ ನಮ್ಮ ಲ್ಯಾಂಡ್ ರೆವಿನ್ಯೂ ಆಕ್ಟನಲ್ಲಿ ಇದೆ. ಈ ಎಲ್ಲಾ ವ್ಯವಸ್ಥೆಯನ್ನು ಬಿಟ್ಟು ಒಬ್ಬ ಅಸಿಸ್ಟೆಂಟ್ ಕಮಿಷನರ್ ಅವರು ಯಾವುದೋ ಆಜ್ಞೆಗಳನ್ನು, ಫಾರೆಸ್ಟ್ ಇಲಾಖೆಯನ್ನು ಅವರ ರಿಕ್ವೆಸ್ಟ್ ಕೊಟ್ಟಿರಬಹುದು. ಅವರ ಆಜ್ಞೆಯನ್ನು ತಂದಿರಬಹುದು. ಅದನ್ನು ಸ್ವೀಕಾರ ಮಾಡಿ, ತಹಸೀಲ್ದಾರ್ ರಿಗೆ ಎನಕ್ವೈರಿ ಮಾಡಿ, ಸಂಬಂಧಪಟ್ಟ ಜನರಿಗೆ ನೋಟೀಸ್ ವಗೈರೆ ಕೊಟ್ಟು, ಆಮೇಲೆ ಆಜ್ಞೆ ಮಾಡಲಿ ಅಂತ ಹೇಳಿ, ಒಂದುವೇಳೆ ಮಾಡಿದಂಥ ಆಜ್ಞೆ ತಪ್ಪಾಗಿದ್ದರೆ, ಅಪೀಲ್ ಸ್ವೀಕಾರ ಮಾಡುವುದಕ್ಕೆ ಅವರಿಗೆ ಅಧಿಕಾರ ಇರತಕ್ಕದ್ದು. ಆದರೆ ಅದನ್ನು ಏನೂ ಮಾಡದೆ ಕೇವಲ ಒಬ್ಬ ಅಸಿಸ್ಟೆಂಟ್ ಕಮೀಷನರ್ ತನ್ನ ಕಚೇರಿಗೆ ಎಲ್ಲವನ್ನೂ ತರಿಸಿಕೊಂಡು ಅಲ್ಲೇ ಆಜ್ಞೆ ಮಾಡಿ, ಇವರು ಆರ್.ಟಿ.ಸಿ. ಯನ್ನು ಬದಲಾವಣೆ ಮಾಡುವುದು ಎಂದರೆ, ಇದು ಯಾವ ಕಾನೂನಿನಲ್ಲಿದೆ ಎಂಬುದನ್ನು ನನಗೆ ಸ್ವಲ್ಪ ತಿಳಿಸಿ ಹೇಳಿರಿ ನೋಡೋಣ. ಯಾವ ಕಾನೂನಿನಲ್ಲಿ ಎ.ಸಿ. ಯವರೇ ನೇರವಾಗಿ ಆರ್.ಟಿ.ಸಿ. ಯನ್ನು ಬದಲಾವಣೆ ಮಾಡತಕ್ಕಂಥ ಅಧಿಕಾರ ಎಲ್ಲಿದೆ? ನನಗೆ ತೋರಿಸಿಕೊಡಿ. ಅದು ಇಲ್ಲದೇ ಹೋದರೆ, ಅದು ಎಲ್ಲ ಮಾಡಿರತಕ್ಕಂಥಾದ್ದನ್ನು ವಜಾ ಮಾಡಲಿ. ದಯವಿಟ್ಟು ವಜಾ ಮಾಡಿರಿ. ಅಸಿಸ್ಟೆಂಟ್ ಕಮೀಷನರ್ ಅವರು ಸ್ವತಃ ಆರ್.ಟಿ.ಸಿ.ಯಲ್ಲಿ ಏನು ಬದಲಾವಣೆ ಮಾಡಿದ್ದಾರೆ, ಅದನ್ನು ವಜಾ ಮಾಡಿಸಿ. ಪ್ರತ್ಯೇಕವಾಗಿ ಅದು ಅರಣ್ಯ ಇಲಾಖೆಯವರು ಆಗಿರಬಹುದು. ಇನ್ನೊಂದು ಇಲಾಖೆಯವರು ಆಗಿರಬಹುದು, ತಮಗೆ ಹಕ್ಕು ಯಾವುದಾದರೂ ಜಮೀನಿನಲ್ಲಿ ಇದೆ ಅಂತ ಇದ್ದರೆ, ನೇರವಾಗಿ ತಹಸೀಲ್ದಾರರಿಗೆ ಸಂಬಂಧಪಟ್ಟ ಪ್ರಿಸ್ಕ್ರೈಬ್ಡ ಫಾರಮನಲ್ಲಿ ಅರ್ಜಿಕೊಟ್ಟು ಅಲ್ಲಿ ವಿವರವನ್ನು ಕೊಟ್ಟು, ಅವರು ಖಾತೆ ಮಾಡಿಕೊಳ್ಳಲಿ. ಸಂಬಂಧಪಟ್ಟವರು ಯಾರು ಇದ್ದಾರೆ, ಲ್ಯಾಂಡ್ ಟ್ರಿಬ್ಯೂನಲ್

ಆಕ್ಷನಲ್ಲಿ ಚಾವಡಿ ಅಂತ ನಿಮ್ಮಲ್ಲಿ ಇದೆಯೋ ಇಲ್ಲವೋ? ಚಾವಡಿಯಲ್ಲಿ ಪಬ್ಲಿಷ್ ಮಾಡಬೇಕು. ಹಾಗೆ ಪಬ್ಲಿಶ್ ಮಾಡಲಿ, ಸಂಬಂಧಪಟ್ಟವರು ಹೇಳಿಕೊಳ್ಳುತ್ತಾರೆ. ಹಕ್ಕುಭಾದ್ಯತೆ ಇದ್ದರೆ ಅದನ್ನೆಲ್ಲ ತಿಳಿಸುತ್ತಾರೆ. ಆ ಪ್ರಕಾರವಾಗಿ ಕಾನೂನು ಕ್ರಮವನ್ನು ಅನುಸರಿಸಿ ಎಂದು ನಾವು ಹೇಳುತ್ತಿರುವುದು; ನಾವೆಲ್ಲ ಬರೆದಿದ್ದೇವೆ. ದಯವಿಟ್ಟು ನಾವೆಲ್ಲ ಬರೆದಿರುವಾಗ ನಿಮ್ಮದೊಂದು ಅಭ್ಯಾಸ ಏನಿದೆ ಎಂದರೆ, 'ಎಕ್ಸಾಮಿನ್ ಅಂಡ್ ರಿಪೋರ್ಟ್' ಅಂತ ಡಿ.ಸಿ. ಅವರಿಗೂ ಹೋಗುವುದು.

ಶ್ರೀ ರಮೇಶ್ ಸಿ. ಜಿಗಜಿಣಗಿ : ನೀವು ಇದ್ದಾಗಲೂ ಹಾಗೇ ಬರೆದಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ : ಒಂದು ಕಾನೂನಿಗೆ ವ್ಯತಿರಿಕ್ತವಾಗಿ ನಡೆದುಕೊಂಡಂಥ ಸಂದರ್ಭದಲ್ಲಿ ತತಕ್ಷಣ ವರದಿಗಳನ್ನು ತರಿಸಿಕೊಂಡು. ದಯವಿಟ್ಟು ಇದನ್ನು ಮಾಡಿರಿ ಅಂತ ನಾವೆಲ್ಲರೂ ಹೇಳುತ್ತಿರುವುದು. ಈಗ ಜಿಲ್ಲಾಧಿಕಾರಿಗಳ ಗಮನಕ್ಕೆ ಬಂದಿದೆ. ಜಿಲ್ಲಾಧಿಕಾರಿಗಳು ಒಂದು ವರದಿಯನ್ನು ತಹಶೀಲ್ದಾರ್‌ರಿಗೆ ತರಿಸಿಕೊಂಡು ಕ್ರಮ ಕೈಗೊಂಡು ಅದನ್ನು ಸೆಟ್‌ರೈಟ್ ಮಾಡಿ.

ಶ್ರೀ ಆಯನೂರು ಮಂಜುನಾಥ್ : ತಕ್ಷಣ ಅವರನ್ನು ಅಮಾನತ್ ಮಾಡಿ. ಅದೇ ತಹಶೀಲ್ದಾರರು ಇದ್ದಾರೆ. ಅದೇ ಅಧಿಕಾರಿಗಳು ಇದ್ದಾರೆ. ಇಷ್ಟು ಘೋರ ಅನ್ಯಾಯ ನಡೆದು, ದಾಖಲೆ ಗಳನ್ನು ತಿದ್ದುವುದು ಮಾಡಬೇಕಾದರೆ ಇಡೀ ತಾಲ್ಲೂಕಿನ ಸಾವಿರಾರು ಜನರ ಭವಿಷ್ಯ ಇಲ್ಲಿದೆ. ಆದ್ದರಿಂದ ಅವರನ್ನು ಅಮಾನತ್ತು ಮಾಡಬೇಕು. ಅಮಾನತ್ತು ಅಲ್ಲದೆ ತಾವು ಬೇರೆ ಏನೂ ಹೇಳಬಾರದು.

ಶ್ರೀ ಅರಗ ಜ್ಞಾನೇಂದ್ರ : ಮಂತ್ರಿಗಳೇ, ಒಂದು ನಿಮಿಷ ಇದಕ್ಕೆ ಪೂರಕವಾಗಿ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು : ನಿಮಗೆ ಉತ್ತರ ಬೇಕೇ ಹೇಗೆ?

ಶ್ರೀ ಅರಗ ಜ್ಞಾನೇಂದ್ರ : ಉತ್ತರ ಬೇಕು. ಈಗ ಜಿಲ್ಲಾಧಿಕಾರಿಗಳ ಬಗ್ಗೆ ಈಗ ಮಾತನಾಡಿದ್ದೇವೆ.

ಉಪಾಧ್ಯಕ್ಷರು : ಅವರು ಉತ್ತರ ಹೇಳುತ್ತಾರೆ. ತಾವು ಕೇಳಿ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಸರ್ಕಾರ ಇರುವುದು ಜನರಿಗೆ ಅನುಕೂಲ ಮಾಡಿಕೊಡಲಿಕ್ಕೆ. ಮಾನ್ಯ ಸದಸ್ಯರುಗಳು ಇಲ್ಲಿ ನಮ್ಮ ಗಮನಕ್ಕೆ ತಂದಿದ್ದಾರೆ. ಆದರೆ ತಕ್ಷಣ ಅಧಿಕಾರಿಗಳ ಸಸ್ಪಂಡ್ ಆಗಬೇಕು ಎಂದರೆ, ಅದಕ್ಕೆ ನಾನು ಒಪ್ಪುವುದಿಲ್ಲ. ಯಾರೇ ಸಸ್ಪೆಂಡ್ ಮಾಡಬೇಕು ಎಂದರೆ ಅದು ದಯವಿಟ್ಟು ಆಗುವುದಿಲ್ಲ. ಅವರು ಏನು ಹೇಳುತ್ತಾರೆ, ಈ ಘಟನೆಗಳ ಬಗ್ಗೆ ಸಂಪೂರ್ಣ ವರದಿಯನ್ನು ತರಿಸಿ, ಯಾವುದೇ ಅಧಿಕಾರಿ ತಪ್ಪು ಮಾಡಿರಲಿ, ನಾನು ಅವರ ಮೇಲೆ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇನೆ. ಅದರ ಜೊತೆಗೆ ನನ್ನ ಇಲಾಕೆಯ ಯಾರಾದರೂ ಒಬ್ಬರು ಹಿರಿಯ ಅಧಿಕಾರಿಗಲು ಅಲ್ಲಿಗೆ ಕಳಿಸಿ ಅಲ್ಲಿ ನಡೆದಿರತಕ್ಕಂಥಾ ಎಲ್ಲಾ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಬೇಕೆಂದು ಸೂಚಿಸುತ್ತೇನೆ. ಯರು ತಪ್ಪಿತಸ್ತರೋ ಅವರ ಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಆದರೆ ಸಧ್ಯಕ್ಕೆ, ಇಲ್ಲಿ ಕ್ರಮ ತೆಗೆದುಕೊಳ್ಳಿ ಎಂದರೆ ಅದು ಆಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಎಷ್ಟು ದಿನಗಳಲ್ಲಿ ಮಾಡುತ್ತೀರಿ?

ಶ್ರೀ ರಮೇಶ್ ಸಿ. ಜಿಗಜಿಣಗಿ : ಎಷ್ಟು ಸಾಧ್ಯವೋ ಅಷ್ಟು ಬೇಗ ಮಾಡುತ್ತೇವೆ.

ಉಪಾಧ್ಯಕ್ಷರು : ತಾವು ಏಕೆ ಕೇಳುತ್ತೀರಿ. ಇದು ಮಂಜುನಾಥ್ ಅವರ ಪ್ರಶ್ನೆ ಇದೆ. ತಾವು ಪದೆಪದೇ ಏಕೆ ಕೇಳುತ್ತೀರಿ?

ಶ್ರೀ ಅರಗ ಜ್ಞಾನೇಂದ್ರ : ಇದು ನಮ್ಮ ಮೂರೂ ತಾಲ್ಲೂಕುಗಳಲ್ಲಿ ಆಗಿದೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ನಿಮಗೆ ತೊಂದರೆಯಾದದ್ದು ಸರ್ಕಾರದ ಗಮನಕ್ಕೆ ಬಂದಿದೆ. ಎಷ್ಟು ಸಾಧ್ಯ ಇದೆಯೋ ಅಷ್ಟು ಬೇಗ ವರದಿಯನ್ನು ತರಿಸಿ ಅದರ ಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

(ಮಾನ್ಯ ಅಧ್ಯಕ್ಷರು ತಮ್ಮ ಪೀಠದಲ್ಲಿ ಉಪಸ್ಥಿತರಾದರು)

ನಿಯಮ 69ರ ಪ್ರಕಾರ ಚರ್ಚೆ

ಅ) ಕೊಳ್ಳೇಗಾಲ ತಾಲ್ಲೂಕಿನ ಕುಂತೂರು ಮಹದೇಶ್ವರ ಸಕ್ಕರೆ ಕಾರ್ಖಾನೆ ಹಾಗೂ ರಾಜ್ಯದ ಇತರೆ ಕಾರ್ಖಾನೆಗಳು ರೈತರಿಗೆ ಎರಡು ವರ್ಷಗಳಿಂದ ಕೊಡಬೇಕಾಗಿರುವ ಹಣದ ಬಗ್ಗೆ.

+ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡುಪುರ) : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಸದನದಲ್ಲಿ ಬಹಳ ಸಾರ ಈ ವಿಷಯ ಚರ್ಚೆಯಾಗಿದೆ. ಸರ್ಕಾರ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಮಹದೇಶ್ವರ ಸಕ್ಕರೆ ಕಾರ್ಖಾನೆ ನಿಂತು, ಎರಡು ವರ್ಷ ಆಯಿತು. ಪ್ರದೇಶ 454 ಎಕರೆ. ಸುಮಾರು ಒಟ್ಟು ಬಾಕಿ ಬರಬೇಕಾಗಿರುವುದು 11 ಕೋಟಿ 28 ಲಕ್ಷ ರೂಪಾಯಿ. ಈಗಾಗಲೇ ಬಾಕಿ ಬಂದಿರುವುದು 8 ಕೋಟಿ 24 ಲಕ್ಷ. ಬಾಕಿ ಕೊಡಬೇಕಾಗಿರುವುದ 3 ಕೋಟಿ 40 ಲಕ್ಷ. ಈಗಾಗಲೇ 620 ಜನಕ್ಕೆ ಚೆಕ್ ಕೊಟ್ಟು, ಚೆಕ್ ಬೌನ್ಸ್ ಆಗಿದೆ. ಎರಡು ವರ್ಷದಿಂದ ಅಲ್ಲಿ ಸುಮಾರು 600 ರಿಂದ 650 ಜನ ಕಾರ್ಮಿಕರು ಕೆಲಸ ಇಲ್ಲದೆ ತಿರುಗತಕ್ಕಂಥ ಒಂದು ವ್ಯವಸ್ಥೆ ಇದೆ. ಈಗಾಗಲೇ ರೈತರು 14ನೇ ತಾರೀಖಿನಿಂದ ಬಾಕಿಗೋಸ್ಕರ ಚಳುವಳಿ ಮಾಡಿ, ಇದೇ ತಿಂಗಳು 14ನೇ ತಾರೀಖು ಚಿಮಣಿಮೇಲೆ ಹತ್ತಿರತಕ್ಕಂಥ ರೈತರ ಜೊತೆಯಲ್ಲಿ, ಜಿಲ್ಲಾಧಿಕಾರಿ, ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ನವರು ಬಂದು ಒಂದು ವಾರದೊಳಗೆ ರೈತರಿಗೆ ಕೊಡಬೇಕಾದಂಥ ಬಾಕಿಯನ್ನು ಕೊಡಿಸುತ್ತೇವೆ ಎಂದು ಹೇಳಿ, ಒಬ್ಬ ನಿರ್ಗತಿಕ, ಏನೂ ಇಲ್ಲದೇ ಇರುವವನು ಬಹಳ ತೊಂದರೆಯಲ್ಲಿರತಕ್ಕಂಥ, ಮೊನ್ನೆ ಆಶ್ರಯ ಮನೆಯಲ್ಲಿ ಒಂದು ಸೈಟು ಕೊಟ್ಟಂಥವನಿಗೆ, ಈ ದುಡ್ಡು ಕೊಡದೇನೆ ಭಾರಿ ತೊಂದರೆ ಪಡುತ್ತಾ ಇದ್ದಾರೆ. ಸರ್ಕಾರ ಎರಡು ವರ್ಷದಿಂದ ಮೌನವಾಗಿದೆ. ಎರಡು ವರ್ಷದಿಂದ ಕಬ್ಬು ಬೆಳೆಗಾರರು ಎಷ್ಟೊಂದು ತೊಂದರೆಯನ್ನು ಅನುಭವಿಸಿದ್ದಾರೆ, ಅದೇ ಸಹಕಾರಿ ಕ್ಷೇತ್ರದಲ್ಲಿದ್ದಂಥ ಕಾರ್ಖಾನೆ ಖಾಸಗಿ ಕ್ಷೇತ್ರಕ್ಕೆ ಹೋದಮೇಲೆ ರೈತರಿಗೆ ಆದ ಅನುಕೂಲತೆ, ಅನಾನುಕೂಲತೆ ಬಗ್ಗೆ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈಗ ನೀವು ಎಷ್ಟೋ ಟೇಕ್ ಓವರ್ ಮಾಡುತ್ತೇವೆ ಎಂದಿರಿ. ಟೇಕ್ ಓವರೂ